
ಪ್ರಚೋದನೆ

ಲಂಕೇಶ್

ಜನವರಿ 08, 2014 ಪುಟ 20 ರೂ. 15/-

ನುಡಿ ಸಂತ ಡಿಎನ್‌ಎಸ್‌ಗೆ




ಪಂಪ ಪ್ರಶಸ್ತಿ

ಕರಾವಳಿ ನಾಯಕ್ ನಿರ್ನಾಮ




ಬನ್ನಂಜೆ ರಾಜನ ಕುಕೃತ್ಯವಾ?

ಜಿ.ಎಸ್.ಶಿವರುದ್ರಪ್ಪ




ಶ್ರದ್ಧಾಂಜಲಿ

ಒಕ್ಕಲಿಗರ ಸಂಘ




ಕೆಂಚಪ್ಪಗೌಡನ ಲೋಲು ಸ್ವನ್ನಿಹಿತ

IPS ಅಧಿಕಾರಿ ರಾಮಮೂರ್ತಿ



ಲ್ಯಾಂಡ್ ಮಾಫಿಯಾ



ನುಡಿಸಂತ

ಡಿ.ಎನ್.ಎಸ್‌ಗೆ ಪಂಪ ಪ್ರಶಸ್ತಿ


ಕನ್ನಡ ನುಡಿಗೆ ಒದಗಿರುವ ಉರುಳುಗಳು ಹಲವಾರು. ಇಂತಹ ಉರುಳುಗಳ ಗೋಜಲನ್ನು ಸರಿಪಡಿಸಿ ನುಡಿಸರಾಗತೆಗೆ ಸಂತನಂತೆ ತಪಸ್ಸುಗೈಯುತ್ತಿರುವ ದರ್ಬೆ ನಾರಾಯಣ ಶಂಕರ ಭಟ್ ಅವರಿಗೆ ಈ ಬಾರಿಯ ಪಂಪ ಪ್ರಶಸ್ತಿ ಒಲಿದಿದೆ. ನಿಜಕ್ಕೂ ಇದು ಪಂಪ ಪ್ರಶಸ್ತಿಯ ಗೌರವವನ್ನೇ ಹೆಚ್ಚಿಸಿದೆ.

ಕಳೆದೆರಡು ದಶಕಗಳಿಂದ ಅವಿರತವಾಗಿ ಮಲೆನಾಡಿನ ಮೂಲೆಗಳಲ್ಲಿ ಜನಸಂದಣಿಯಿಂದ ದೂರವಿದ್ದು ಕನ್ನಡನುಡಿಗೊದಗಿದ ಸಂಸ್ಕೃತ ಉರುಳನ್ನು ತಪ್ಪಿಸಲು, ಕನ್ನಡದ ಗೌರವವನ್ನು ಹೆಚ್ಚಿಸಲು ದಿನದ ಹತ್ತಾರು ತಾಸು ಅಧ್ಯಯನ ಹಾಗೂ ಬರವಣಿಗೆಯಲ್ಲಿ ತೊಡಗಿರುವ ಡಿ.ಎನ್.ಎಸ್. ನಮ್ಮ ನಡುವಿನ ದೊಡ್ಡ ಚೇತನ.

ಕನ್ನಡ ವ್ಯಾಕರಣ ಮತ್ತು ನುಡಿಯ ಸೊಬಗು ಸಂಸ್ಕೃತದ ಸಮಾಸ, ಸಂಧಿ, ವಾಕ್ಯರಚನೆ ಮತ್ತು ಪಾರಿಭಾಷಿಕ ಪದಗಳಿಂದ ನರಳಿಹೋಗಿರುವುದನ್ನು ಮನವರಿಕೆ ಮಾಡಿಕೊಡುವಂತೆ ಯೋಚಿಸುವ, ನುಡಿ ಹಾಗೂ ಬರಹವನ್ನು ಒಂದೇ ಲಯದಲ್ಲಿ ಬಳಸಿದಾಗ ಅದು ಎಲ್ಲರ ಕನ್ನಡ ಆಗಲು ಸಾಧ್ಯ ಎಂದು ಅನೇಕ ಉಲ್ಲೇಖಗಳು ಡಿ.ಎನ್.ಎಸ್ ನೀಡುತ್ತಾರೆ. ಆ ನಿಟ್ಟಿಯಲ್ಲಿ ಅವರು ಎರಡು ದಶಕಗಳ ಹಿಂದೆಯೇ 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ' ಎಂಬ ಸಂಶೋಧನಾ ಗ್ರಂಥವನ್ನು ಬರೆದಿದ್ದರು.

ಕನ್ನಡ ವ್ಯಾಕರಣದ ಹೆಸರಿನಲ್ಲಿ ಏನೇನೋ ಅಪದ್ಧ, ನಮ್ಮ ಭಾಷೆಯ ರಚನೆ ಮತ್ತು ಒಳರಚನೆಗೆ ಏನೇನೂ ಹೊಂದದ ಅನೇಕ ವಿಷಯ ಹಾಗೂ ನಿಯಮಗಳನ್ನು ತಂದು ತುಂಬಿರುವ ಸಂಗತಿಗಳನ್ನು ಮೊದಲು ಶುದ್ಧ ಮಾಡಬೇಕು; ಪ್ರೌಢಶಾಲೆಯ ವಿದ್ಯಾರ್ಥಿಗಳು ತಮ್ಮ ಸೃಜನಶೀಲ ಮನಸ್ಸಿನ ಅಮೂಲ್ಯ ಸಮಯವನ್ನು ಇಂತಹ ಅನಗತ್ಯ ಭಾಷಾನಿಯಮ ಮತ್ತು ಅಭ್ಯಾಸದಲ್ಲಿ ತೊಡಗಿಕೊಂಡು ವ್ಯರ್ಥಮಾಡಬಾರದು ಎಂದು ಅಭಿಪ್ರಾಯಪಡುವ ಡಿ.ಎನ್.ಎಸ್. ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ವ್ಯಾಕರಣದ ಮೇಲೆ ಸಂಶೋಧನೆ ನಡೆಸುವವರು ಕೂಡ ದಿಕ್ಕುತಪ್ಪಿ ಸಂಸ್ಕೃತದ ಕಗ್ಗಾಡಿನಲ್ಲಿ ಅಲೆದಾಡುತ್ತಿರುವುದನ್ನು ತಮ್ಮ ಎಲ್ಲಾ ಸಂಶೋಧನಾತ್ಮಕ ಕೃತಿಗಳಲ್ಲಿ ಪ್ರಸ್ತಾಪಿಸಿದ್ದಾರೆ.

ಸಂಸ್ಕೃತ ವ್ಯಾಕರಣದ ಪರಂಪರೆಯಲ್ಲಿ ರಚಿತವಾಗಿರುವ 13ನೇ ಶತಮಾನದ ಕೇಶಿರಾಜನ ಶಬ್ದಮಣಿದರ್ಪಣ, ಭಟ್ಟಾಕಳಂಕನ ಶಬ್ದಾನುಶಾಸನ ಮತ್ತಿತರೆ ಹಳೆಗನ್ನಡ ವ್ಯಾಕರಣಗಳು ಸಂಸ್ಕೃತದ ವಿದ್ವಾಂಸರನ್ನು ಮೆಚ್ಚಿಸಲು ಬರೆದವುಗಳಾಗಿವೆ. ಅಂದರೆ ಆ ಕಾಲಕ್ಕೆ ಕನ್ನಡದಲ್ಲಿ ಬರೆದು, ಸಂಸ್ಕೃತದಲ್ಲಿ ಚಿಂತಿಸುವ, ಒಪ್ಪಿಸುವ ವಿದ್ವಾಂಸ ಪರಂಪರೆಯು ಎರಡೂ ಭಾಷೆಯ ಪಾಂಡಿತ್ಯ ಹೊಂದಿದವರಾಗಿದ್ದರು, ಅಲ್ಲದೆ ಸಂಸ್ಕೃತ ಗ್ರಂಥಗಳ ಅನುವಾದಕ್ಕೆ, ಸಂಗ್ರಹಕ್ಕೆ ಮತ್ತು ಭಾಷ್ಯ, ಟೀಕೆ, ಛಂದಸ್ಸು, ಲಯ ಮುಂತಾದ ಸಾಹಿತ್ಯ ಕೃತಿಯ ದಾರಿಗೆ ಸಂಸ್ಕೃತದ ನೆರಳು ಮತ್ತು ಕೃಪೆ ಅಗತ್ಯವಾಗಿ ಬೇಕಿತ್ತು, ಅದು ಅಂದಿನ ಜರೂರು ಹೌದು. ಆದರೆ ಇಂದಿನ ಕನ್ನಡದಲ್ಲಿ ಹೆಚ್ಚಾಗಿ ತುಂಬಿಹೋಗಿರುವ ಅದೇ ನಿಯಮ ಮತ್ತು



ವ್ಯಾಕರಣದ ಸಂಗತಿಗಳಿಂದ ಕನ್ನಡವು ಕಲಿಕೆಗೆ ಕಷ್ಟವಾಗುತ್ತಿರುವುದು ನಮಗೆಲ್ಲ ತಿಳಿದ ಸಂಗತಿಯೇ ಆಗಿದೆ. ಪದವಿ ಹಂತಹ ವಿದ್ಯಾರ್ಥಿಗಳಿಗೆ ಬರವಣಿಗೆಯಲ್ಲಿ ಮತ್ತು ಉಚ್ಚಾರಣೆಯಲ್ಲಿ ತೊಂದರೆಗಳಿವೆ. ಅಲ್ಲದೆ ಅವರ ಕನ್ನಡವೇ ಬೇರೆಯಾಗಿ, ಶೈಕ್ಷಣಿಕ ಕನ್ನಡವೇ ಬೇರೆಯಾಗಿರುತ್ತದೆ. ಈ ಕಂದಕಕ್ಕೆ ಕೊನೆಯೇ ಇಲ್ಲ, ಆದಕ್ಕಾಗಿ ಶಂಕರಭಟ್ಟರವರು ಇಂಡೋಯುರೋಪಿಯನ್ ಗುಂಪಿಗೆ ಸೇರುವ ಸಂಸ್ಕೃತ, ಲ್ಯಾಟಿನ್ ಮತ್ತು ಇಂಗ್ಲಿಷ್ ಭಾಷೆಗಿಂತ ತೀರಾ ಭಿನ್ನವಾದ ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಕನ್ನಡಕ್ಕೆ ಅದರದ್ದೇ ಆದ ಮೂಲಸೂತ್ರ, ವ್ಯಾಕರಣ, ಪದರಚನೆ, ಪದಗುಚ್ಛ ಮತ್ತು ನುಡಿರಚನೆಯ ಒಳವಿಚಾರ ವೈಶಿಷ್ಟ್ಯಗಳನ್ನು ತಮ್ಮ ಅನೇಕ ಕೃತಿಗಳಲ್ಲಿ ಮೊದಲಿಂದಲೂ ಪ್ರಸ್ತಾಪಿಸುತ್ತಲೇ ಬಂದಿದ್ದಾರೆ.

'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಯನ್ನು ಬರೆದ ಎಂ.ಮರಿಯಪ್ಪ ಭಟ್ಟರ ಮೊಮ್ಮಗನಾದ ಡಿ.ಎನ್.ಎಸ್ ಪರಂಪರಾಗತ ಸಂಸ್ಕೃತದ ಹೇರಿಕೆಯನ್ನು ವಿರೋಧಿಸಿರುವುದಕ್ಕೆ ಸಕಾರಣಗಳನ್ನು ನೀಡಿ ಪ್ರಮೇಯವನ್ನು ಕಟ್ಟಿಕೊಡುತ್ತಿದ್ದರೂ ಕನ್ನಡದ ವಿದ್ವಾಂಸ ಪರಂಪರೆಯು ಅವರ ಪ್ರಯತ್ನವನ್ನು 'ಹಠಯೋಗ'ವೆಂಬಂತೆ ನೋಡುತ್ತಿದೆ ಅಥವಾ ಅವಜ್ಞೆಯಿಂದ ಕಾಣುತ್ತಿದೆ. ಜಗತ್ತಿನ ಭಾಷಾವಿದ್ವಾಂಸರಾದ ಕೇಲ್ಸರ್, ಪಂಡಿತ್, ಘಾಟ್ಗೆ, ಗ್ಲಿಸನ್‌ರಂತಹ ವಿದ್ವಾಂಸರೊಡನೆ ಕಲಿತು, ಯು.ಕೆ, ಜರ್ಮನಿ, ಆಸ್ಟ್ರೇಲಿಯಾ, ಬೆಲ್ಜಿಯಂ, ಅಮೆರಿಕದಂತಹ ದೇಶದ ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡಿ ಅಲ್ಲೆಲ್ಲಾ ತಮ್ಮ ಕೃತಿಗಳ ಮೂಲಕ ಸದಾ ಚರ್ಚೆಯಲ್ಲಿರುವ ಈ ಸಂತನ ಮಗುತನವೇ ಕನ್ನಡಿಗರಿಗೆ ಅರ್ಥವಾದಂತಿಲ್ಲ, ಈ ನೋವಿನ ನಡುವೆಯೂ ಡಿ.ಎನ್.ಎಸ್. ಪರಿಶ್ರಮವು ನಿಧಾನವಾಗಿ ಈಗಲಾದರೂ ಚರ್ಚೆಗೆ ಗ್ರಾಸವಾಗುತ್ತಿದೆ.


ಬರಹ ಮತ್ತು ನುಡಿಯ ನಡುವಿನ ದೊಡ್ಡ ವ್ಯತ್ಯಾಸವನ್ನು ಕಳೆದುಕೊಳ್ಳುತ್ತಾ ಕನ್ನಡಕ್ಕೆ ಬೇಕಾದ ವ್ಯಾಕರಣ, ಭಾಷಾತಿಳಿವಳಿಕೆ, ನುಡಿಗಟ್ಟು, ಇಂಗ್ಲಿಷ್ ಪದಗಳಿಗೆ ಕನ್ನಡದ್ದೇ ಪದಗಳು, ಕನ್ನಡ ಬರಹದ ಸೊಲ್ಲರಿಮೆಯ ಬಗೆಗೆ ಈ ತಲೆಮಾರಿನ ಚಲಪತಿ, ಮೇಟಿಮಲ್ಲಿಕಾರ್ಜುನ, ಡೊಮನಿಕ್, ಕೆ.ವೈ.ನಾರಾಯಣಸ್ವಾಮಿ ಮುಂತಾದವರು ಕೆ.ವಿ. ನಾರಾಯಣ್‌ರಂತಹ ನುಡಿ ವಿದ್ವಾಂಸರ ಸಖ್ಯದೊಂದಿಗೆ ಅನೇಕ ಪ್ರಯೋಗಗಳನ್ನು ಮಾಡುತ್ತಾ ಡಿ.ಎನ್.ಎಸ್. ಅವರ ಪರಿಶ್ರಮಕ್ಕೆ ಸಾಥ್ ನೀಡುತ್ತಿದ್ದಾರೆ. ಆಡುಭಾಷೆ, ಬರಹಭಾಷೆ ಸಂಪೂರ್ಣವಾಗಿ ಒಂದಾಗಲು ಸಾಧ್ಯವಿಲ್ಲದೆ ಇದ್ದರೂ ಅದು ಪರಸ್ಪರ ಹತ್ತಿರವಾಗಬೇಕು. ಅಲ್ಲದೆ ಕನ್ನಡವು ಎಲ್ಲರದ್ದಾಗಬೇಕು.

ತಮಿಳುನಾಡು ತನ್ನ ವರ್ಣಮಾಲೆಯಲ್ಲಿ 'ಮುಪ್ಪದುಮೊದಲ್ಯೆ'... ಎಂದು ಕೇವಲ 30 ಅಕ್ಷರಗಳನ್ನಿಟ್ಟುಕೊಂಡು ಸಂಸ್ಕೃತದ ಹೇರಿಕೆಯನ್ನು ಮೀರಿದೆ. ಅಲ್ಲಿನ ಕಲೆ, ಸಾಹಿತ್ಯ, ಸಿನಿಮಾ, ರಂಗಭೂಮಿ ಹಾಗೂ ಜೀವನವಿಧಾನದಲ್ಲಿ ಭಾಷೆಯೇ ಕೇಂದ್ರದಲ್ಲಿದೆ. ಹಾಗೆಯೇ ತೆಲುಗು, ಮಲೆಯಾಳಂ ಕೂಡ, ಆದರೆ ಕನ್ನಡದಲ್ಲಿ ಆ ಕೆಲಸವು ಪ್ರತ್ಯೇಕಗೊಂಡೇ ಸಾಗಿರುವುದರ ದುರಂತವೇ ನಾವಿಂದು ಅನುಭವಿಸುತ್ತಿರುವ ಶೈಕ್ಷಣಿಕ ಗೊಂದಲವಾಗಿದೆ. 'ಕರ್ತರಿ, ಕರ್ಮಣಿ, ವಿಗ್ರಹವಾಕ್ಯ ಸವರ್ಣದೀರ್ಘಸಂಧಿ, ತತ್ಸಮ, ತದ್ಭವ, ಜತ್ವ, ಯಣ್, ಅನುನಾಸಿಕ-ನಿರನುನಾಸಿಕ, ಕ್ಷಳ, ಯೋಗವಾಹ, ಸಂಧ್ಯಕ್ಷರ, ಶಥಿಲದ್ವಿತ್ವ, ಗುರೂಪದ, ಲಘೂಪದೆ, ವ-ಮ, 'ಹ-ಪ, ಶ-ಷ-ಸ ಪ್ರಯೋಗ' ಈ ಬಗ್ಗೆ ಯಾವ ಹಂತದ ವಿದ್ಯಾರ್ಥಿಗೆ ಕೇಳಿದರೂ ಅವರು ಗೊಂದಲದಲ್ಲೇ ಬೀಳುತ್ತಾರೆ. ಅಷ್ಟೇಕೆ, ಕನ್ನಡ ಕಲಿತವರೂ-ಮೇಸ್ಟ್ರುಗಳೂ ಕ್ಷಣ ಗೊಂದಲದಿಂದಲೇ ಉತ್ತರಿಸುವ ಪ್ರಯತ್ನ ಮಾಡುತ್ತಾರೆ. ಹೀಗೇಕೆ ಎಂದು ಪ್ರಶ್ನಿಸಿಕೊಂಡರೆ, ಆ ಯಾವುದೇ ನಿಯಮಗಳನ್ನು ನಾವು ಕನ್ನಡದ ಚಹರೆ ಮತ್ತು ಸಮುದಾಯದ ಬ್ರಾಯಗನ್ನಡದ ಮೂಲಕವಾಗಲಿ ಅಥವಾ ನಮ್ಮ ನಡಿಯ ಒಳರಚನೆಯ ನಿಯಮಗಳ ಮೂಲಕವಾಗಲಿ ಕಲಿಯಲಾಗುತ್ತಿಲ್ಲ, ಅವುಗಳನ್ನು ಸಂಸ್ಕೃತ ಭಾಷೆಯ ನಿಯಮಗಳ ಮೂಲಕವೇ ಕಲಿಯಬೇಕಾದ ದುರಂತವನ್ನು ನಾವಿಂದು ಕನ್ನಡಭಾಷಾ ಪ್ರಯೋಗ ಮತ್ತು ಬರಹದಲ್ಲಿ ನೋಡುತ್ತಿದ್ದೇವೆ, ಈ ಬಗ್ಗೆ ತುಂಬಾ ಕೆಲಸ ಮಾಡಿರುವ ಡಿ.ಎನ್.ಎಸ್ 'ಕನ್ನಡ ನುಡಿ ನಡೆದುಬಂದ ದಾರಿ', 'ಭಾಷೆಯ ಬಗೆಗೆ ನೀವೇನು ಬಲ್ಲಿರಿ' 'ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದ್ದು?', 'ಕನ್ನಡ ಬರಹದ ಸೊಲ್ಲರಿಮೆ-1 ಮತ್ತು 2' ಕೃತಿಗಳಲ್ಲಿ ಸುದೀರ್ಘವಾಗಿ ಚರ್ಚಿಸಿದ್ದಾರೆ. ಮಾತಿನಲ್ಲಿ ಇಲ್ಲದ ಮಹಾಪ್ರಾಣಾಕ್ಷರಗಳು ಬರಹಕ್ಕೂ ಅಗತ್ಯವಿಲ್ಲ; ಮಹಾಪ್ರಾಣಾಕ್ಷರಗಳಿಂದ ಶಾಲೆಯಲ್ಲಿ ಮಕ್ಕಳು ಹೆಚ್ಚು ತೊಂದರೆ-ಹಿಂಸೆಗೆ ಒಳಗಾಗುತ್ತಿದ್ದಾರೆ; ಅದರಲ್ಲೂ ತಳಸಮುದಾಯದ ಮಕ್ಕಳು ಉಚ್ಚರಣಾ ತೊಂದರೆಯಿಂದ ಶಿಕ್ಷಕರಿಂದ ಪೆಟ್ಟುತಿಂದು ಕೀಳರಿಮೆಯಲ್ಲಿ ಬೆಳೆದು ಕಡೆಗೊಮ್ಮೆ ಶಾಲೆಯಿಂದಲೇ ದೂರ ಉಳಿಯುತ್ತಿದ್ದಾರೆ; ನಾವು ಮಾತನಾಡುವಾಗ ಸಂಸ್ಕೃತವನ್ನು ಬಳಸುವುದಿಲ್ಲ, ಬರಹದಲ್ಲಿ ಯಾಕೆ ಬಳಸಬೇಕು? ಸಾಹಿತ್ಯ-ಪತ್ರಿಕೆ-ವಿಜ್ಞಾನದ ಪಾರಿಭಾಷಿಕಗಳು, ನ್ಯಾಯಾಲಯ-ಅಥವಾ ಕಚೇರಿಯ ಬರಹಗಳಲ್ಲಿ ಇದರ ಠೇಂಕಾರವನ್ನು ಗಮನಿಸಿದರೆ ತಿಳಿಯುತ್ತದೆ. ಇದರಿಂದ ಕನ್ನಡಕ್ಕೆ ಯಾವ ಪ್ರಯೋಜನವೂ ಇಲ್ಲ, ಸಂಸ್ಕೃತವನ್ನು ಇಲ್ಲೆಲ್ಲ ಬಳಸುವುದರಿಂದ ಕಲಿಕೆಯಲ್ಲಿ ವಿದ್ಯಾರ್ಥಿಗಳು ಕಂಠಪಾಠ ಮಾಡಬಹುದೇ ಹೊರತು ಕಲಿಕೆಯನ್ನು ಅರಿಮೆಯನ್ನಾಗಿ ಪಡೆಯಲು ಸಾಧ್ಯವಿಲ್ಲ.


ಡಿ.ಎನ್.ಎಸ್. ಶಂಕರಭಟ್ಟರ ಕೊಡುಗೆಯನ್ನು ಗುರುತಿಸಿದ 'ಪಂಪ ಪ್ರಶಸ್ತಿ' ಆಯ್ಕೆ ಸಮಿತಿಯವರು ನಿಜಕ್ಕೂ ಅಭಿನಂದನಾರ್ಹರು. "ನಾನು ಯಾವುದೇ ಪ್ರಶಸ್ತಿ ಅಥವಾ ಪುರಸ್ಕಾರಗಳನ್ನು ಬಯಸಿದವನಲ್ಲ, ನನ್ನ ಪಾಡಿಗೆ ನಾನು ಕೆಲಸಮಾಡುತ್ತಾ ಬಂದಿದ್ದೇನೆ" ಎನ್ನುವ ಡಿ.ಎನ್.ಎಸ್. ಸ್ವತಃ ಸಂಸ್ಕೃತ ವಿದ್ವಾಂಸರು ಮಾತ್ರವಲ್ಲ ಜಗತ್ತಿನ ಅನೇಕ ಭಾಷೆಯ ವ್ಯಾಕರಣ-ಭಾಷಾರಚನೆಯ ನಿಯಮ ಮತ್ತು ಒಳರಚನೆಯನ್ನು ಅಧ್ಯಯನ ಮಾಡಿರುವವರು. ಆದ್ದರಿಂದಲೇ ಕನ್ನಡವನ್ನು ಕಟ್ಟುವ, ನುಡಿಯ ಸಂಭ್ರಮವನ್ನು ಉಳಿಸುವ ಹೋರಾಟವನ್ನು ತಣ್ಣಗೆ ಕೂತು ಮಾಡುತ್ತಿದ್ದಾರೆ. ಈ ಹಿಂದೆ 'ನಾಡೋಜ' ಪುರಸ್ಕಾರಕ್ಕೆ ಇವರನ್ನು ಹಂಪಿ ವಿ.ವಿ. ಆಯ್ಕೆ ಮಾಡಿದಾಗ ಡಿ.ಎನ್.ಎಸ್ ಸರಳವಾಗಿ ಪ್ರತಿಕ್ರಿಯಿಸಿದ್ದರೂ ಹಂಪಿವರೆಗೆ ಹೋಗಿ ಅದನ್ನು ಪಡೆದಿರಲಿಲ್ಲ, ಆನಂತರ ವಿಶ್ವವಿದ್ಯಾನಿಲಯವೇ ಬಂದು ಡಿ.ಎನ್.ಎಸ್.ರವರನ್ನು ಮನೆಯಲ್ಲಿ ಅಭಿನಂದಿಸಿತ್ತು.

ಇದೀಗ 'ಪಂಪ ಪ್ರಶಸ್ತಿ'ಗೆ ಭಾಜನರಾಗಿರುವ ಡಿ.ಎನ್.ಎಸ್. ಅವರ ಕನ್ನಡ ಅರಿಮೆಯ ಚಿಂತನೆಗಳನ್ನು ವಿಶ್ವವಿದ್ಯಾನಿಲಯಗಳು, ವಿದ್ವಾಂಸ ವಲಯವು ಗಮನವಿಟ್ಟು ಅಭ್ಯಾಸ ಮಾಡಬೇಕಾಗಿದೆ. ಅದು ಜರೂರು ಮತ್ತು ಕನ್ನಡದ ಮುಂದಿನ ದಾರಿಗೆ ಬೇಕಾದ ಜೀವದ್ರವ್ಯವನ್ನು ಒದಗಿಸಬಲ್ಲದು. 'ನುಡಿಅರಿಗ' ಡಿ.ಎನ್.ಎಸ್. ಅವರಿಗೆ ಶುಭಾಶಯಗಳು.

● ಡಾ.ಕುಂಸಿ ಉಮೇಶ್



ನಮ್ಮೆಲ್ಲರ ಕವಿ ಜಿಎಸ್‌ಎಸ್....



ಎಲ್ಲರಿಗೂ 'ಮೇಷ್ಟು' ಆಗಿದ್ದ ನನ್ನಪ್ಪ ಸ್ವತಃ 'ಸರ್' ...ದು ಕರೆಯುತ್ತಿದ್ದದ್ದು, ತನ್ನ ಸಹಜ ಒರಟುತನವನ್ನು ...ತ್ತಿಕ್ಕಿ ಹಿರಿಯರಿಗೆ ನೀಡಬೇಕಾದ ಗೌರವವನ್ನು ಕೊಡು...ದ್ದು, ತನ್ನ ವಿದ್ಯಾಗುರು ಎಂದು ಕರೆಯುತ್ತಿದ್ದದ್ದು ಒಬ್ಬರನ್ನು ...ಾತ್ರ. ಅವರು ಈಗ ನಮ್ಮನ್ನೆಲ್ಲ ಅಗಲಿರುವ ಹಿರಿಯ ...ತನ ಮಾನ್ಯ ಜಿ.ಎಸ್. ಶಿವರುದ್ರಪ್ಪನವರು.

ಜಿಎಸ್‌ಎಸ್ ಅವರನ್ನು ಕುರಿತು ಅನೇಕ ನೆನಪುಗಳು ...ಲ್ಲಿವೆ.

ನನ್ನಪ್ಪ ಬೇರೆಯವರೊಂದಿಗೆ ಒಂದು ತರಹ, ...ಎಸ್‌ಎಸ್‌ರವರೊಂದಿಗೆ ಮತ್ತೊಂದು ತರಹ ವರ್ತಿಸುತ್ತಿ...ದ್ದನ್ನು ಕಂಡು ಆಗ ಚಿಕ್ಕವಳಾಗಿದ್ದ ನನಗೆ ಒಂದು ...ತಿಯ ಕುತೂಹಲ. ನನಗಿನ್ನೂ ನೆನಪಿದೆ, ಗೋವಿಂದಪ್ಪ ...ಯಲ್ಲಿದ್ದ ಮನೆಯಲ್ಲಿ ಒಂದು ದಿನ ಅಪ್ಪ ತಮ್ಮ ಬೆತ್ತದ ...ರ್ಚಿಯಲ್ಲಿ ಕೂತು, ಎದುರಿಗಿದ್ದ ಟೇಬಲ್ ಮೇಲೆ ...ಬಿಟ್ಟುಕೊಂಡು ಪೇಪರ್ ಓದುತ್ತಿದ್ದರು. ಆಗ ನಮ್ಮ ...ನೆಗೆ ಜಿಎಸ್‌ಎಸ್ ಆಗಮಿಸಿದರು. ಅವರನ್ನು ಕಂಡ ...ಡಲೇ ಅಪ್ಪ ಎದ್ದು ನಿಂತು 'ಬನ್ನಿ ಸಾರ್' ಎಂದು ...ವಮಾಡಿಕೊಂಡಿದ್ದರು. ಬೇರೆಯವರೊಂದಿಗೆ ಅಪ್ಪ ಎಂದೂ ...ಗೆ ಕಿರಿಯನಂತೆ, ವಿನಯದಿಂದ ನಡೆದುಕೊಂಡಿದ್ದನ್ನು ...ನು ಕಂಡೇ ಇರಲಿಲ್ಲ. ಆಗಲೇ, ಓಹೋ, ಇವರ್‍ಯಾರೋ ...ಲ್ ಇರಬೇಕೆಂದು ನನಗನ್ನಿಸಿತ್ತು.

ಆಗ ಜಿಎಸ್‌ಎಸ್‌ರವರ ಮನೆ ಕೂಡ ಬಸವನಗುಡಿ ...ಲ್ಲೇ ಇದ್ದುದರಿಂದ ಅಮ್ಮ ಮಕ್ಕಳಾದ ನಮ್ಮನ್ನು ಅವರ ...ನೆಗೆ ಆಗಾಗ ಕರೆದುಕೊಂಡು ಹೋಗುತ್ತಿದ್ದರು. ಆಗೆಲ್ಲ ...ಎಸ್‌ಎಸ್‌ರವರನ್ನು ನಾವೇನು ಭೇಟಿ ಆಗುತ್ತಿರಲಿಲ್ಲ. ...ಸ್ಮಾತ್ ಅವರು ಮನೆಯಲ್ಲಿದ್ದರೆ ನನ್ನಮ್ಮನನ್ನು ನೋಡಿ ...ೀಗಿದ್ದೀರಾ?" ಎಂದಷ್ಟೇ ಕೇಳಿ ತಮ್ಮ ಪಾಡಿಗೆ ತಮ್ಮ ...ಮಿನಲ್ಲಿರುತ್ತಿದ್ದರು. ನಮಗೆ ಮಾತ್ರ ಜಿಎಸ್‌ಎಸ್‌ರವರ ...ಗಳು ಜಯಂತಿ ಮಾಡಿರುತ್ತಿದ್ದ ಕಲಾವಸ್ತುಗಳ ಬಗ್ಗೆ ...ೂಹಲ.

ಆಗ ಬಿನಾಕಾ ಟೂತ್‌ಪೇಸ್ಟ್ ಪ್ಯಾಕ್‌ನೊಂದಿಗೆ ಬರುತ್ತಿದ್ದ ...ಧ ಪ್ರಾಣಿಗಳ ಚಿಕ್ಕ ಚಿಕ್ಕ ಪ್ಲಾಸ್ಟಿಕ್ ಗೊಂಬೆಗಳನ್ನು ...ೂ ಸಂಗ್ರಹಿಸುತ್ತಿದ್ದೆ. ಆದರೆ ನನಗಿಂತ ಹಿರಿಯವರಾದ ...ಯಂತಿ ತಮ್ಮ ಕರಕುಶಲತೆಯಿಂದ ಒಂದು ಪುಟ್ಟ ...ನ್ನೇ ನಿರ್ಮಿಸಿ, ಆ ಪುಟ್ಟ ಪುಟ್ಟ ಪ್ರಾಣಿಗಳ ಗೊಂಬೆ ...ನ್ನು ಅದರಲ್ಲಿ ಜೋಡಿಸಿದ್ದರು. ಪ್ರತಿ ಬಾರಿ ಅವರ ...ನೆಗೆ ಹೋದಾಗ ಜಯಂತಿ ಏನು ಹೊಸದನ್ನು ಸೃಷ್ಟಿಸಿ...ರೆ ಎಂದು ನೋಡೋದೆ ನಮಗೆಲ್ಲ ಖುಷಿ ನೀಡುತ್ತಿತ್ತು.

ಅದೇ ಸಂದರ್ಭದಲ್ಲಿ ಜಿಎಸ್‌ಎಸ್‌ರವರ ಮಡದಿ ...ರಾಣಿ ನಮ್ಮನ್ನು ಹತ್ತಿರವೇ ಇದ್ದ ರಾಮಕೃಷ್ಣ ಆಶ್ರಮಕ್ಕೂ ...ಚಯಿಸಿದರು. ಅಲ್ಲಿ ಪ್ರತಿ ಸಂಜೆ ನಡೆಯುತ್ತಿದ್ದ ...ರ್ಥನೆಗಿಂತ ಆ ಆಶ್ರಮದಲ್ಲಿನ ಪಾರ್ಕ್ ನಮಗೆ ಹೆಚ್ಚು ಇಷ್ಟವಾಗಿದ್ದರಲ್ಲಿ ಯಾವ ಅಚ್ಚರಿಯೂ ಇಲ್ಲ. ಅದಕ್ಕಿಂತಲೂ ಮುಖ್ಯವಾಗಿದ್ದು ಆ ಆಶ್ರಮದಲ್ಲಿದ್ದ ಶಿವಲಿಂಗ ಹೂವಿನ ಮರ. ಆಗ ಬೆಂಗಳೂರಿಗೆ ಬಂದಿದ್ದ ನನ್ನ ಮುತ್ತಜ್ಜಿ ಚೆನ್ನವಜ್ಜಿಯನ್ನು ಮೆಚ್ಚಿಸಲು ನಾನು ಮತ್ತು ಬೇಬಿ ಆ ಮರದಿಂದ ಉದುರಿದ್ದ ಶಿವಲಿಂಗ ಹೂಗಳನ್ನು ನಮ್ಮ ಫ್ರಾಕ್‌ಗಳಲ್ಲಿ ಸಂಗ್ರಹಿಸಿ ತರುತ್ತಿದ್ದೆವು. ಅವುಗಳನ್ನು ತೊಳೆದು, ಶಿವನ ಫೋಟೋ ಮುಂದೆ ಇಟ್ಟು ಚೆನ್ನವಜ್ಜಿ ಪೂಜೆ ಮಾಡುತ್ತಿದ್ದರು.

ಹಲವು ವರ್ಷಗಳ ನಂತರ ಕೆ. ಮರುಳಸಿದ್ಧಪ್ಪನವರು ಜಿಎಸ್‌ಎಸ್ ಪುತ್ರಿ ಜಯಂತಿಯವರನ್ನು ಮದುವೆ ಆದರು. ಆಗ ತನ್ನ ಹೊಸ ಮನೆಯಲ್ಲಿ ಬಣ್ಣ ಹಚ್ಚಿದ ಮೊಟ್ಟೆಗಳಿಂದ ಜಯಂತಿ ಮಾಡಿದ್ದ ಪುಟ್ಟ ಮರ ಈಗಲೂ ನೆನಪಿದೆ. ಅವತ್ತಿನ ಸಂತೋಷಗೋಷ್ಠಿಯಲ್ಲಿ ಜಯಂತಿಯವರ ಸಹೋದರ ಜಯದೇವರವರು ಕೊಳಲು ಬಾರಿಸಿದ್ದೂ ಇನ್ನೂ ಚೆನ್ನಾಗಿ ನೆನಪು. ಅಂದಹಾಗೆ, ಮೊನ್ನೆ ಇದ್ದಕ್ಕಿದ್ದಂತೆ "ನಿಮ್ಮನ್ನು ನೋಡಲು ಜಿಎಸ್‌ಎಸ್‌ರವರ ಮಗ ಬಂದಿದ್ದಾರೆ" ಎಂದರು ನಮ್ಮ ಆಫೀಸಿನವರು. ಅವರ ಒಬ್ಬ ಪುತ್ರ ಡಾಕ್ಟರ್ ಪ್ರಸಾದ್ ಹಲವು ವರ್ಷಗಳ ಕಾಲ ನಮ್ಮ ಫ್ಯಾಮಿಲಿ ಡಾಕ್ಟರ್‌ನಂತಿದ್ದು ಈಗ ವಿದೇಶದಲ್ಲಿದ್ದಾರೆ. ಹಾಗಾದರೆ ಬಂದಿರುವವರು ಕೊಳಲು ಬಾರಿಸುತ್ತಿದ್ದ ಮಗ ಜಯದೇವ್ ಅವರೇ ಇರಬೇಕೆಂದು "ಬರೋದಿಕ್ಕೆ ಹೇಳಿ" ಅಂದೆ. ಅವರು ಬಂದಾಗ "ನಾನು ಕೊಳಲು ಬಾರಿಸುತ್ತಿದ್ದದ್ದು ನಿಮಗೆ ಇನ್ನೂ ನೆನಪಿದೆಯಲ್ಲ" ಅಂತ ನಕ್ಕರು. ನಾನು ಅನುವಾದಿಸಿರುವ ದರವೇಶಿ ಕತೆಗಳು ಪುಸ್ತಕವನ್ನು ಕನ್ನಡ ಸಾಹಿತ್ಯ ಅಕಾಡೆಮಿಯ ಡಾ. ಎಸ್.ಜಿ.ಸಿದ್ದರಾಮಯ್ಯನವರು ವಿಮರ್ಶಿಸಿದ್ದನ್ನು ಓದಿ ಅದರ ಪ್ರತಿ ಹುಡುಕಿಕೊಂಡು ಗಾಂಧಿಬಜಾರಿನ 'ಅಂಕಿತ' ಪುಸ್ತಕದ ಅಂಗಡಿಗೆ ಜಯದೇವ್ ಬಂದಿದ್ದರು. ಅಲ್ಲಿ ಆ ಪುಸ್ತಕದ ಪ್ರತಿ ಸಿಗದೇ ಇದ್ದಾಗ ನಮ್ಮ ಆಫೀಸಿನಲ್ಲಿರಬಹುದೆಂದು ಇಲ್ಲಿಗೆ ಬಂದಿದ್ದರು. ಬಿಳಿರಂಗನಬೆಟ್ಟದ ಹತ್ತಿರ ಅವರೀಗ ಬಡ ಮಕ್ಕಳಿಗೆ ನಡೆಸುತ್ತಿರುವ ದೀನಬಂಧು ಶಾಲೆಯ ಬಗ್ಗೆ ಚರ್ಚಿಸಿದ ನಂತರ ಅವರು ಹೊರಟರು. ಅವರೊಂದಿಗೆ ಜಿಎಸ್‌ಎಸ್ ರವರಿಗೂ ದರವೇಶಿ ಕತೆಗಳ ಪ್ರತಿಯೊಂದನ್ನು ಕಳುಹಿಸಿದೆ.

ಹೀಗೆ ಚಿಕ್ಕವಳಾಗಿದ್ದಾಗಿನಿಂದ ಜಿಎಸ್‌ಎಸ್‌ರವರ ಮನೆಯವರೆಲ್ಲರೂ ನನಗೆ ಗೊತ್ತಿದ್ದರೂ, ಸ್ವತಃ ಜಿಎಸ್‌ಎಸ್‌ರವರ ಪರಿಚಯ ಆದದ್ದು ನಾನು ಪತ್ರಕರ್ತೆಯಾದ ಮೇಲೆ. ಹಲವೊಮ್ಮೆ ಅವರಿಗೆ ಪುಸ್ತಕ ಅಥವಾ ಪತ್ರಿಕೆಯ ಕಾಪಿ ತಲುಪದಿದ್ದಾಗ ಅದನ್ನು ಅವರ ಬನಶಂಕರಿಯ ಮನೆಗೆ ಕೊಟ್ಟು ಬರಲು ಅಪ್ಪ ನನ್ನನ್ನು ಕಳುಹಿಸುತ್ತಿದ್ದರು. ಆಗಲೂ ಅವರೊಂದಿಗೆ ಏನು ಮಾತಾಡಬೇಕು ಎಂದು ಗೊತ್ತಾಗದೇ ಅವರ ಮಡದಿಯ ಕೈ ತೋಟದಲ್ಲೇ ಹೆಚ್ಚು ಸಮಯ ಕಳೆಯುತ್ತಿದ್ದೆ. (ನನ್ನ ಮನೆಯಲ್ಲಿರುವ ಬ್ರಹ್ಮ ಕಮಲದ ಗಿಡ ಜಿಎಸ್‌ಎಸ್ ರವರ ಮನೆಯಿಂದಲೇ ಬಂದದ್ದು!)

ಅಪ್ಪನ ಪತ್ರಿಕೆಯ ಜವಾಬ್ದಾರಿಯನ್ನು ಹೊತ್ತ ನಂತರವೇ ನಾನು ಅವರನ್ನು ಹೆಚ್ಚು ಮಾತನಾಡಿಸಿದ್ದು. ವಿಶೇಷಾಂಕಗಳಿಗೆ ಕವಿತೆ ಬರೆದು ಕೊಡಿ ಎಂದು ನಾನು ಕೇಳಿದಾಗಲೆಲ್ಲ ಅವರು ಬರೆದುಕೊಟ್ಟಿದ್ದರು. ಹಾಗೆಯೇ, ರಾಮಚಂದ್ರ ಶರ್ಮರವರು ತೀರಿ ಹೋದಾಗಲೂ ಅವರನ್ನು ಕುರಿತು ಲೇಖನ ಕೊಡುತ್ತೀರಾ ಎಂದು ಕೇಳಿದಾಗ ತಮ್ಮ ಎಲ್ಲ ಒತ್ತಡಗಳ ನಡುವೆಯೂ ಒಂದು ಅದ್ಭುತ ಲೇಖನ ಬರೆದುಕೊಟ್ಟಿದ್ದರು.

ನಾನು ಸಾಹಿತ್ಯ ವಿದ್ಯಾರ್ಥಿನಿ ಅಲ್ಲ, ಆದ್ದರಿಂದ ನಾನು ಅವರ ಸಾಹಿತ್ಯ ಕೊಡುಗೆಗಳ ಬಗ್ಗೆ ಹೇಳಲಾರೆ. ಆದರೆ ಈಗ ಎಲ್ಲೆಡೆ ಹರಡುತ್ತಿರುವ ಕೋಮುವಾದದ ವಿರುದ್ಧ ಅವರು ತಾಳಿದ ನಿಲುವನ್ನು ಮನಃಪೂರ್ವಕವಾಗಿ ಮೆಚ್ಚಬಲ್ಲೆ. ಹತ್ತು ವರ್ಷಗಳ ಹಿಂದೆ, ಬಾಬಾಬುಡನ್‌ಗಿರಿಯ ಕೇಸರೀಕರಣದ ವಿರುದ್ಧ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ತನ್ನ ಹೋರಾಟ ಪ್ರಾರಂಭಿಸಿದಾಗ, ಜಿಎಸ್‌ಎಸ್‌ರವರ ಬೆಂಬಲವನ್ನು ಕೋರಿದೆವು. ಅದಕ್ಕೆ ಒಪ್ಪಿದ ಅವರು ತಕ್ಷಣವೇ 'ಪ್ರಜಾವಾಣಿ'ಗೆ ಪತ್ರ ಸಿದ್ಧಪಡಿಸಲು ಹೇಳಿದರು. ಆ ಪತ್ರದ ಕೊನೆಯಲ್ಲಿ 'ಖಂಡನಾರ್ಹ' ಎಂಬ ಪದದ ಬದಲಾಗಿ ಸ್ವಲ್ಪ ಮೃದುವಾದ ಪದವನ್ನು ಬಳಸಿದ್ದೆವು. ಅದನ್ನು ಓದಿದ ಜಿಎಸ್‌ಎಸ್‌ರವರು "ಇದರಲ್ಲಿ ಹಿಂದೆಮುಂದೆ ನೋಡುವುದೇನಿದೆ. ಅದು ಖಂಡನಾರ್ಹವಾಗಿರೋದ್ರಿಂದ ಅದೇ ಪದ ಬಳಸಿ" ಎಂದು ನೇರವಾಗಿ ಹೇಳಿದ್ದರು. ನಮ್ಮ ಸಾಹಿತ್ಯ ಲೋಕದ ಎಷ್ಟೋ ಜನ ಯಾವುದೇ ರಾಜಕೀಯ ಪಕ್ಷವನ್ನೋ ಅಥವಾ ಸರ್ಕಾರವನ್ನೋ ನಿಷ್ಠುರವಾಗಿ ವಿಮರ್ಶಿಸಲು ಹಿಂಜರಿಯುವಾಗ, ಹಿರಿಯರಾದ ಜಿಎಸ್‌ಎಸ್‌ರವರು ಅಂತಹ ಮನೋಭಾವ ಹೊಂದಿರಲಿಲ್ಲ.



ಕಂಡಹಾಗೆ

• ಗೌರಿ ಲಂಕೇಶ್

editorlankesh@gmail.com

ಜಿಎಸ್‌ಎಸ್‌ರವರನ್ನು ಕುರಿತ ಮತ್ತೊಂದು ಮುಖ್ಯ ವಿಷಯ ಯಾವುದೆಂದರೆ ಅವರು ಹಲವು ಲಿಂಗಾಯತ ಮಠಾಧೀಶರಿಗೆ ಆಪ್ತರಾಗಿದ್ದರೂ ಸಹ ಎಂದೂ ಅವರನ್ನು ಯಾರೂ ಒಂದು ಜಾತಿಗೆ ಸೀಮಿತಗೊಳಿಸದಿದ್ದದ್ದು. ಹಾಗೆ ಯಾರಾದರೂ ಮಾಡಿದ್ದರೆ ಅದು ಅವರ ನೇರ ನಿಲುವಿಗೆ, ಸಾಹಿತ್ಯಕ್ಕೆ ಮಾಡಿದ ಅಗೌರವ ಆಗಿರುತ್ತಿತ್ತು. ಅವರ ಪ್ರಾಣಪಕ್ಷಿ ಹಾರಿಹೋದ ನಂತರವೂ ಅವರು ಜಾತ್ಯತೀತರಾಗಿಯೇ ಪ್ರಕೃತಿಯಲ್ಲಿ ವಿಲೀನವಾಗಿದ್ದು ಸಾಮಾನ್ಯ ಸಂಗತಿಯಲ್ಲ.

ಜಿಎಸ್‌ಎಸ್‌ರವರ ಬಗ್ಗೆ ಅಪ್ಪನಿಗೆ ತುಂಬಾ ಗೌರವವಿದ್ದರೂ ಹಲವೊಮ್ಮೆ ಅವರನ್ನು ತಮಾಷೆ ಮಾಡಿದ್ದುಂಟು. ಅದು ಅಪ್ಪನ ಚೇಷ್ಟೆ ಪ್ರವೃತ್ತಿಯೇ ಹೊರತು ಜಿಎಸ್‌ಎಸ್‌ರವರನ್ನು ಕುರಿತು ಲಘು ಭಾವನೆ ಅಲ್ಲ. 'ದೊರೆ ಈಡಿಪಸ್ ಮತ್ತು ಅಂತಿಗೊನೆ' ನಾಟಕದ ಮುನ್ನುಡಿಯ ಕೊನೆಯಲ್ಲಿ "ನಮ್ಮೆಲ್ಲ ಭಿನ್ನಾಭಿಪ್ರಾಯ ಮರೆತು ಕೃತಿಯೆದುರು ಅತ್ಯುತ್ಸಾಹಗೊಂಡು ನನ್ನನ್ನು ಒಪ್ಪಿಕೊಳ್ಳುವ ನನ್ನ ವಿದ್ಯಾಗುರು ಜಿ.ಎಸ್. ಶಿವರುದ್ರಪ್ಪನವರಿಗೂ ನಾನು ಇಲ್ಲಿ ಕೃತಜ್ಞತೆ ಸೂಚಿಸುತ್ತೇನೆ" ಎಂದು ಅಪ್ಪ ಬರೆದಿರುವುದೇ ಇದಕ್ಕೆ ಸಾಕ್ಷಿ.

ಹಿರಿಯ ಜಿ.ಎಸ್. ಶಿವರುದ್ರಪ್ಪನವರಿಗೆ ಪ್ರೀತಿ ಮತ್ತು ಅಭಿಮಾನದ ವಿದಾಯ.


ಮುಕೇಶ್ ಅಂಬಾನಿ ಮಗನ ರಸ್ತೆ ಅಪಘಾತ ಮತ್ತು ಸ್ಯಾಂಟ ಕ್ಲಾಸ್!

...ಇದೇ ಡಿಸೆಂಬರ್ ತಿಂಗಳ ಆರಂಭದ ದಿನಗಳಲ್ಲಿ ...ಂಬೈ ನಗರದಲ್ಲಿ ಒಂದು ಭೀಕರ ರಸ್ತೆ ಅಪಘಾತ ...ಭವಿಸಿ ಕೂದಲೆಳೆಯಲ್ಲಿ ಐದಾರು ಜನ ತಮ್ಮ ಪ್ರಾಣ ...ದುಕೊಳ್ಳದೆ ಬಚಾವಾಗಿದ್ದರು. ಆದರೂ ಈ ಪ್ರಕರಣ ...ತು ಯಾವ ಪತ್ರಿಕೆಯಾಗಲಿ, ಟಿವಿ ಚಾನೆಲ್ ಆಗಲಿ ...ಿ ಮಾಡಲಿಲ್ಲ.

ಅದಕ್ಕೆ ಕಾರಣ ಆ ಅಪಘಾತಕ್ಕೆ ಕಾರಣವಾಗಿದ್ದ ಕಾರ್ ...ರತದ ಅತಿ ಶ್ರೀಮಂತ ಉದ್ಯಮಿಯಾದ ಮುಕೇಶ್ ...ಬಾನಿಗೆ ಸೇರಿದ್ದು ಮತ್ತು ಅವತ್ತು ಆ ಕಾರನ್ನು ವೇಗವಾಗಿ ...ಸುತ್ತಿದ್ದದ್ದು ಆತನ ಇಬ್ಬರು ಪುತ್ರರತ್ನರಲ್ಲಿ ಒಬ್ಬನಾದ ...ಶ್ ಅಂಬಾನಿ ಆಗಿದ್ದದ್ದು!

ಡಿಸೆಂಬರ್ 7ರ ರಾತ್ರಿ ಪೆಡ್ಡಾರ್ ರಸ್ತೆಯಲ್ಲಿ ಸುಮಾರು ...ು ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಕಪ್ಪು ...ದ ಆಸ್ಟನ್ ಮಾರ್ಟಿನ್ ರಪಿಡೆ ಎಂಬ ಐಶಾರಾಮಿ ... ಬರುತ್ತಿತ್ತು. ಅದನ್ನು ಆಕಾಶ್ ಅಂಬಾನಿ ಅದೆಷ್ಟು ...ಗಿ ಓಡಿಸುತ್ತಿದ್ದನೆಂದರೆ ಅದು ಪೂರಮ್ ರೂಪರೆಲ್ ...ಳಕೆ ಚಲಾಯಿಸುತ್ತಿದ್ದ ಆಡಿ ಕಾರಿಗೆ ಹಿಂದಿನಿಂದ ...ರಾಗಿ ಗುದ್ದಿದ ರಭಸಕ್ಕೆ ರೂಪರೆಲ್ ಅವರ ಕಾರ್ ... ಮಧ್ಯೆ ಇದ್ದ ಡಿವೈಡರ್ ಅನ್ನೇ ಹಾರಿ ಎದುರಿನಿಂದ ...ತ್ತಿದ್ದ ಬಸ್‌ಗೆ ಡಿಕ್ಕಿಹೊಡೆದಿತ್ತು.

ರೂಪರೆಲ್ ಅವರ ಕಾರನ್ನು 'ಪಕ್ಕಕ್ಕೆ' ಸರಿಸಿದ ನಂತರ ...ಶಪ ಕಾರ್ ವಿಕ್ರಮ್ ಮಿಶ್ರಾ ಎಂಬಾತ ಓಡಿಸುತ್ತಿದ್ದ ...ದ್ಯೆ ಎಲೆಂಟ್ರ ಕಾರಿಗೂ ಗುದ್ದಿತ್ತು. ಹೀಗೆ ಎರಡು ...ಗಳಿಗೆ ಗುದ್ದಿದ ನಂತರ ಆಕಾಶನ ಕಾರಿನ ಒಂದು ... ಕಿತ್ತುಹೋಯಿತು. ಆದರೂ ಆವನು ಓಡಿಸುತ್ತಿದ್ದ ... ಮೂರು ಚಕ್ರಗಳ ಮೇಲೆಯೇ ಸುಮಾರು 400 ...ಟರ್‌ನಷ್ಟು ದೂರ ಕ್ರಮಿಸಿದ ನಂತರ ನಿಂತಿತು ಎಂದರೆ



ಅದಿನ್ನೆಷ್ಟು ವೇಗವಾಗಿ ಹೋಗುತ್ತಿತ್ತು ಎಂದು ಊಹಿಸಬಹುದು.

ಅಪಘಾತಕ್ಕೆ ಈಡಾಗಿದ್ದ ಜನ ಏನಾಗುತ್ತಿದೆ ಎಂದು ಸುತ್ತ ನೋಡುವ ಹೊತ್ತಿಗೆ, ಆಸ್ಟನ್ ಮಾರ್ಟಿನ್ ರಪಿಡೆ ಕಾರನ್ನು ಓಡಿಸುತ್ತಿದ್ದ ಬೊಜ್ಜಿನ ಯುವಕ ತನ್ನ ಕಾರಿನ ಹಿಂದೆಯೇ ಬರುತ್ತಿದ್ದ ಇನ್ನೆರಡು ಎಸ್‌ಯುವಿ ಕಾರುಗಳಲ್ಲಿ ಒಂದನ್ನು ಹತ್ತಿ ಮಾಯವಾಗಿದ್ದ.

ಅಪಘಾತ ಸಂಭವಿಸಿದ ಹನ್ನೆರಡು ಗಂಟೆಗಳ ನಂತರ ಬನ್ನಿಲಾಲ್ ಜೋಶಿ ಎಂಬಾತ ಪೊಲೀಸರ ಮುಂದೆ ಹಾಜರಾಗಿ ತಾನು ಅಂಬಾನಿಯವರ ಕುಟುಂಬದ ಕಾರ್ ಚಾಲಕನಾಗಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವವ ಎಂದೂ, ಹಿಂದಿನ ರಾತ್ರಿ ಅಪಘಾತ ಸಂಭವಿಸಿದಾಗ ತಾನೇ ಆಸ್ಟಿನ್ ಮಾರ್ಟಿನ್ ರಪಿಡೆ ಕಾರನ್ನು ಚಲಾಯಿಸುತ್ತಿದ್ದೆ ಎಂದೂ ಹೇಳಿದ. ಆದರೆ ಪ್ರತ್ಯಕ್ಷದರ್ಶಿಗಳ ಪ್ರಕಾರ ಈ ಜೋಶಿ ಕೂಡ ದಪ್ಪ ಆಕಾರದ ವ್ಯಕ್ತಿ ಎಂಬುದನ್ನು ಬಿಟ್ಟರೆ ಆತನಿಗೂ ಹಿಂದಿನ ರಾತ್ರಿ ಕಾರ್ ಓಡಿಸುತ್ತಿದ್ದ ವ್ಯಕ್ತಿಗೂ ಯಾವುದೇ ಹೋಲಿಕೆ ಇರಲಿಲ್ಲ. ಅವರ ಪ್ರಕಾರ ಅವತ್ತು ಕಾರನ್ನು ಸ್ಪೀಡಾಗಿ ಓಡಿಸುತ್ತಿದ್ದ ವ್ಯಕ್ತಿಗೆ ಮೀಸೆ ಇರಲಿಲ್ಲ, ಜೋಶಿಗೆ ಇತ್ತು ಮತ್ತು ಆತ ಯುವಕನಾಗಿದ್ದರೆ ಜೋಶಿ 55ರ ಹರೆಯದ ಮಧ್ಯವಯಸ್ಕ.

ಈ ಅಪಘಾತಕ್ಕೆ ಮುಕೇಶ್ ಅಂಬಾನಿಯ ಮಗ ಆಕಾಶ್ ಅಂಬಾನಿ ಕಾರಣನಾಗಿದ್ದರೂ ಯಾವ ಮಾಧ್ಯಮವೂ ಇದರ ಬಗ್ಗೆ ವರದಿ ಮಾಡಲಿಲ್ಲ. ಇದಕ್ಕೆ ಪ್ರಮುಖ ಕಾರಣ ಇವತ್ತು ಹತ್ತಾರು ಪ್ರಮುಖ ಪತ್ರಿಕೆಗಳಲ್ಲಿ ಮತ್ತು ಟಿವಿ ಚಾನೆಲ್‌ಗಳಲ್ಲಿ ಮುಕೇಶ್ ಅಂಬಾನಿ ಬಂಡವಾಳ ಹೂಡಿರುವುದು ಮತ್ತು ಇತರೆ ಮಾಧ್ಯಮಗಳು ಅಂಬಾನಿಯ ರಿಲಯನ್ಸ್ ಕಂಪನಿಯ ಜಾಹೀರಾತುಗಳನ್ನು ಅವಲಂಬಿಸಿರುವುದು.


ಅಂಬಾನಿಯ 'ತಾಕತ್ತು' ಅರಿವಾದ್ದರಿಂದಲೋ ಏನೋ ಈ ಅಪಘಾತದಲ್ಲಿ ಸ್ವಲ್ಪದರಲ್ಲೇ ಬಚಾವಾದ ರೂಪರೆಲ್ ಮತ್ತು ಮಿಶ್ರ ಪೊಲೀಸರಿಗೆ ಕೊಟ್ಟಿದ್ದ ದೂರನ್ನು ಕಳೆದ ಮಂಗಳವಾರ ಹಿಂದೆ ಪಡೆಯುವುದಾಗಿ ಹೇಳಿದರು.

ಆದಾದ ಮಾರನೆ ದಿನ - ಅಂದರೆ ಕ್ರಿಸ್ಮಸ್ ಹಬ್ಬದ ದಿನದಂದು - ರೂಪರೆಲ್ ಅವರ ನಜ್ಜುಗುಜ್ಜಾಗಿದ್ದ ಆಡಿ ಕಾರ್ ಬದಲಾಗಿ ಹೊಸ ಆಡಿ ಕಾರ್ ಅವರ ಮನೆಯ ಮುಂದೆ ನಿಂತಿತ್ತು. ಹಾಗೆಯೇ ವಿಕ್ರಮ್ ಮಿಶ್ರಾ ಅವರ ಮನೆ ಮುಂದೆಯೂ ಹೊಸದಾದ ಸ್ಕೋಡಾ ಸುಪರ್ಬ್ ಕಾರ್ ಒಂದು ನಿಂತಿತ್ತು.

ಇಂತಹ ದುಬಾರಿ ಕ್ರಿಸ್ಮಸ್ ಕೊಡುಗೆಗಳನ್ನು ಅವರಿಬ್ಬರಿಗೆ ಕೊಟ್ಟ 'ಸ್ಯಾಂಟ ಕ್ಲಾಸ್' ಬೇರೆ ಯಾರೂ ಅಲ್ಲ, ಸ್ವತಃ ಮುಕೇಶ್ ಅಂಬಾನಿ!

ಕಾಸಿದ್ದರೆ ಕೈಲಾಸ ಮತ್ತು ದುಡ್ಡಿದ್ದವನೆ ದೊಡ್ಡಪ್ಪ ಎಂಬ ಗಾದೆಗಳು ನಮ್ಮ ದೇಶದಲ್ಲಿ ಸುಮ್ಮಸುಮ್ಮನೆ ಹುಟ್ಟಿಲ್ಲ ಎಂಬುದನ್ನು ಎಲ್ಲರೂ ಅರ್ಥಮಾಡಿಕೊಂಡರೆ ವಾಸಿ!

ಕರಾವಳಿ: ನಾಯಕ್ ನಿರ್ನಾಮ
ಬನ್ನಂಜೆ ರಾಜಾನ ಕುಕೃತ್ಯವಾ?!



ಅನಾಯಾಸವಾಗಿ ಅಕ್ರಮ ಹಣ ಹರಿದು ಬರುವಲ್ಲಿ ಅನಾಹುತ ಹೊಂಚು ಹಾಕೇ ಕುಂತಿರುತ್ತದೆ- ಇದು ನೈಸರ್ಗಿಕ ನ್ಯಾಯ ತತ್ವ ತಾನೆ? ಈ ನಿಯಮ ಉತ್ತರ ಕನ್ನಡದ ಪುಟ್ಟ ಪಟ್ಟಣ ಅಂಕೋಲಾದ 'ಧನ ನಾಯಕ' ಆರ್.ಎನ್. ನಾಯಕ ಎಂಬ 'ಕಾಸುಕಾರಣಿ'ಯ ಹತ್ಯೆಯಲ್ಲಿ ಅಕ್ಷರಶಃ ಪಾಲನೆಯಾಗಿದೆ! ಅಂಕೋಲೆಯ ಸಾಮಾಜಿಕ-ಸಾಂಸ್ಕೃತಿಕ-ಧಾರ್ಮಿಕ-ಔದ್ಯಮಿಕ-ರಾಜಕೀಯ ಮತ್ತು ರಂಗೀಲಾ ರಂಗದ ಮಹಾಪೋಷಕನಂತಿದ್ದ ಆರೆನ್ನೆನ್‌ಗೆ ಆತನ ಕುರುಡು ಕಾಂಚಾಣಾಧರಿತ ಸ್ವಯಂ ವೈಭವೀಕರಣವೇ ಗಂಡಾಂತರ ತಂದೊಡ್ಡಿದೆ. ಒಂದು ಕಡೆಯಿಂದ ಭೂಗತ ಪಾತಕಿಗಳ, ಮತ್ತೊಂದೆಡೆಯಿಂದ ಅಂಡರ್‌ವರ್ಲ್ಡ್ ಸಖ್ಯದ ಸ್ಥಳೀಯ ರಾಜಕಾರಣಿಯೊಬ್ಬನ ಕಣ್ಣುರಿಗೆ ಕಾರಣನಾಗಿದ್ದ ಆರೆನ್ನೆನ್ ಅಂಥಾ ದರ್ಬಾರ್ ರಕ್ತದೋಕುಳಿಯಲ್ಲಿ ಅವಸಾನ ಕಂಡಿರುವುದು ಇಡೀ ಕರಾವಳಿಯನ್ನು ಬೆಚ್ಚಿ ಬೀಳಿಸಿದೆ!!

ಕಾಡಿನಿಂದ ನಾಡಿಗೆ!

ಎತ್ತಿಂದೆತ್ತ ತಾಳೆ ಹಾಕಿ ನೋಡಿದರೂ ಅಂಕೋಲೆಯ ಪ್ರತಿಷ್ಠಿತ ಅದಿರು ಉದ್ಯಮಿ-ರಿಯಲ್ ಎಸ್ಟೇಟ್ ದಂಧೆಕೋರ ಆರೆನ್ನೆನ್ ಶೂಟೌಟ್ ಬೇಲೇಕೇರಿ ಬಂದರಿನಲ್ಲಾದ ಬಹು ಕೋಟಿ ಅದಿರು ಅವ್ಯವಹಾರದ ಮತ್ತೊಂದು ಆಯಾಮ ಎಂಬುದು ಖಾತ್ರಿಯಾಗುತ್ತದೆ. ತೀರಾ ಚಿಕ್ಕವನಿರುವಾಗಲೇ ತಂದೆಯನ್ನು ಕಳೆದುಕೊಂಡಿದ್ದ ಆರೆನ್ನೆನ್ ಟಿಂಬರ್ ವ್ಯವಹಾರಸ್ಥನಾಗಿದ್ದ ಸೋದರ ಮಾವನ ಗರಡಿಯಲ್ಲಿ ಬೆಳೆದರು. ಮಾವನ ಟಿಂಬರ್ ಬಿಸ್ನೆಸ್‌ನಲ್ಲಿ ಪಳಗಿದ ಆತ ಅರಣ್ಯ ಕೂಲಿಕಾರರ ಸಂಘ ಕಟ್ಟಿಕೊಂಡು ಒಣಮರದ ಜತೆಜತೆಗೇ ಬೆಲೆಬಾಳುವ ಹಸಿಮರಗಳನ್ನು ಕದ್ದು ಸಾಗಿಸಿ ಕಾಸು ಬಾಚಿಕೊಂಡರು. ಈ ದೋ ನಂಬರ್ ದಂಧೆಗೆ ಶಾಸಕನಾಗುವ ಮುಂಚೆ ಗಂಡಾಗುಂಡಿ ಮಾಣಿಯಾಗಿ ಅಂಡಲೆಯುತ್ತಿದ್ದ ಮಾಜಿ ಶಾಸಕ ಉಮ್ಮಾಣಿ ಭಟ್ಟ ಯಾನೆ ಉಮೇಶ್ ಭಟ್‌ರ ಸಾಥ್ ಆರೆನ್ನೆನ್‌ಗೆ ಸಿಕ್ಕಿತ್ತು.


ಉಮ್ಮಾಣಿ ಶಾಸಕನಾಗಿದ್ದಾಗ (1990ರ ದಶಕದಲ್ಲಿ) ಆರೆನ್ನೆನ್ ಎಮ್ಮೆಲ್ಲೆ ರೈಟ್‌ಹಾಂಡ್ ಅಂತಲೇ ಹೆಸರುವಾಸಿಯಾಗಿಹೋದರು. ಬೆಂಗಳೂರು-ದಿಲ್ಲಿ ಕಾಂಗ್ರೆಸ್ ವಲಯದಲ್ಲಿ ಸಪ್ಲಾಯರ್ ಮಾಣಿ ಎಂದೇ ಗುರುತಿಸಿಕೊಂಡಿದ್ದ ಉಮ್ಮಾಣಿ ಅಂಕೋಲೆಗೆ ಬಂದರೆ ಆರೆನ್ನೆನ್ ಮನೆಯೇ ಆತನ ಕೇರ್ ಆಫ್ ಆಗಿರುತ್ತಿತ್ತು. ಹೀಗಾಗಿ ಆರೆನ್ನೆನ್-ಉಮ್ಮಾಣಿಗಳ ಅರಣ್ಯ ದಂಧೆ ನಿರಾತಂಕವಾಗಿ ಸಾಗಿತು. ಆ ನಂತರ ಉಮ್ಮಾಣಿ ಅಂಕೋಲೆಯಲ್ಲಿ ತೆರೆದಿದ್ದ ನರ್ಸಿಂಗ್ ಕೋರ್ಸ್ ಅಂಗಡಿಗೂ ಆರೆನ್ನೆನ್ ಸಲಹಾಶೂರನಾಗಿದ್ದರು. ಅಲ್ಲಿಗೆ ಬರುತ್ತಿದ್ದ ಕೇರಳ ಕಡೆಯ ಅಮಾಯಕ ಹುಡುಗಿಯರಿಗೆ ಭಟ್ಟ-ಆರೆನ್ನೆನ್ ಬಹು ವಿಧದಲ್ಲಿ ಬಳಸುತ್ತಿದ್ದರೆಂಬ ರಂಗೀಲಾ ರಾಗಗಳೂ ಹಬ್ಬಿಕೊಂಡಿದ್ದವು. 'ಪ್ರೇಮಿ' ಎಂದೇ ಅಂಕೋಲೆ ಸುತ್ತಮುತ್ತ ಪರಿಚಿತರಾಗಿದ್ದ ಆರೆನ್ನೆನ್ ಉಮ್ಮಾಣಿ ಭಟ್ಟರಷ್ಟೇ ರಸಿಕ; ಆತನ ಲೀಲೆಗಳ ನಾನಾ ಕಥೆಗಳಿಗೇನೂ ಅಂಕೋಲೆಯಲ್ಲಿ ಬರವಿಲ್ಲ.

ಯಾವಾಗ ಉಮ್ಮಾಣಿ ಶಾಸಕಗಿರಿ ಒಂದೇ ಅವಧಿಗೆ ಅಂತ್ಯಗೊಂಡಿತೋ ಆವಾಗ ಆರೆನ್ನೆನ್ ಆತನ ನೆರಳಿಂದ ನಿಧಾನಕ್ಕೆ ಹೊರಬಂದು ಸ್ವತಂತ್ರ ಉದ್ಯಮ ಶುರು ಹಚ್ಚಿಕೊಂಡರು. 'ದ್ವಾರಕಾ ಫೈನಾನ್ಸ್' ಎಂಬ ಹಣಕಾಸು ಸಂಸ್ಥೆ ತೆರೆದ ಆತ ಒಂದೇ ದಿನದಲ್ಲಿ ಸಾಲ ಕೊಡುತ್ತಿದ್ದರು; ರೌಡಿ ಪಟಾಲಮ್ ಇಟ್ಟುಕೊಂಡು ಈ ಮೀಟರ್ ಬಡ್ಡಿ ಸಾಲ ಅರ್ಧ ದಿನದಲ್ಲೇ ರಿಕವರಿ ಕೂಡ ಮಾಡುತ್ತಿದ್ದರು. ಹೀಗಾಗಿ ಆತನ ಫೈನಾನ್ಸ್ ಕೀರ್ತಿ ಇಡೀ ಅಂಕೋಲೆಯಲ್ಲಿ ಹರಿದಾಡತೊಡಗಿತು. ಈ ಫೈನಾನ್ಸ್ ದಂಧೆ ಅದೆಷ್ಟು ಬಿರುಸಾಗಿ ಬೆಳೆಯಿತೆಂದರೆ ನೋಡು-ನೋಡುತ್ತಿದ್ದಂತೆಯೇ ಕಾರವಾರ-ಅಂಕೋಲಾ-ಕುಮಟಾ ತಾಲ್ಲೂಕಿನ ಬರೋಬ್ಬರಿ ಏಳು ಕಡೆ ದ್ವಾರಕಾದ ಬ್ರ್ಯಾಂಚುಗಳಾಗಿ ಸಾಲದ ಸೂಲದ 'ಸಹಕಾರ' ನಿರಾತಂಕವಾಗಿ ನಡೆಯಿತು.

ಸ್ವಯಂಘೋಷಿತ ಸಹಕಾರಿ ಸರದಾರ

ಜತೆಗೆ ಹೆಂಡತಿಗೂ ಒಂದು ಮಹಿಳಾ ಸೊಸೈಟಿ ಮಾಡಿಕೊಟ್ಟಿದ್ದ ಆರೆನ್ನೆನ್ ರಾಜಕಾರಣಿಗಳ ಗೆಳೆತನದಿಂದ ಸರ್ಕಾರಿ ಪ್ರಶಸ್ತಿ ಪಡೆದುಕೊಂಡರು. ಅಷ್ಟೇ ಅಲ್ಲ ಹೆಂಡತಿಗೂ ಸಹಕಾರಿ ಬಿರುದು-ಬಾವಲಿ ಕೊಡಿಸಿದರು. ಅಲ್ಲಿಂದ ಆರೆನ್ನೆನ್‌ನ ಇಮೇಜು ಬದಲಾಯ್ತು. ಕಾಡಿನಿಂದ ನಾಡಿಗೆ ಬಂದ ಆತ 'ಸಹಕಾರಿ ಧುರೀಣ' ಎಂಬ ಖದರಲ್ಲಿ ಶಳಾಯಿಸತೊಡಗಿದ! ಸ್ವ-ಜಾತಿ ನಾಡವ ಸಮುದಾಯದ ಭ್ರಷ್ಟ ಅಧಿಕಾರಿಗಳ ಕಪ್ಪು ಕಾಸು ದ್ವಾರಕಾದಲ್ಲಿ ಟರ್ನ್ ಓವರ್ ಆಗುತ್ತದೆಂಬ ಗುಲ್ಲೂ ಎದ್ದಿತು. ಅದು ಇವತ್ತಿಗೂ ಹಾಗೇ ಉಳಿದುಕೊಂಡು ಬಂದಿದೆ.

ಅರಣ್ಯ ಕಡಿವ ದಂಧೆ-ಫೈನಾನ್ಸ್ 'ಸಹಕಾರ'ದಿಂದ ಹಣ ಹರಿದುಬರುತ್ತಿದ್ದಂತೆಯೇ ಆರೆನ್ನೆನ್‌ಗೆ ರಾಜಕಾರಣದ ಹುಕ್ಕಿಯೂ ಹೊಕ್ಕಿಕೊಂಡಿತು. ರಾಜಕೀಯ ದೂ(ದು)ರಾಲೋಚನೆಯ ದಾನ-ಧರ್ಮಗಳು ನಡೆಯಹತ್ತಿತ್ತು. ಮಾರ್ಗರೆಟ್ ಆಳ್ವ ಸಂಸದೆಯಾಗಿದ್ದಾಗ ಆಕೆಯ ಬೆಂ-ಬಾಲಕನಾಗಿ ಕಾಣಿಸಿಕೊಂಡ ಆತ ದೇಶಪಾಂಡೆಗೂ ಹತ್ತಿರದವನಾಗಿದ್ದ. ಪಕ್ಕದ ಕಾರವಾರದ ಬಂದರು ಡಾನ್ ಆನಂದ ಅಸ್ನೋಟಿಕರ್ ಸಖ್ಯವೂ ಕುದುರಿಸಿಕೊಂಡಿದ್ದರು. ಈ ರಾಜಕಾರಣದೊಂದಿಗೇ ಅಂಕೋಲಾದ ಧಾರ್ಮಿಕ-ಸಾಂಸ್ಕೃತಿಕ-ಕ್ರೀಡಾ ಉತ್ಸವಗಳಲ್ಲಿ ದೊಡ್ಡ ಮೊತ್ತದ ಡೊನೇಷನ್ ಕೊಡುವುದು ಆರೆನ್ನೆನ್ ರೂಢಿಸಿಕೊಂಡರು. ತನ್ನ ಹಣದ ಋಣದ ಸಭೆ-ಸಮಾರಂಭಗಳಲ್ಲಿ ಮಿಂಚುವ ಚಟಕ್ಕೆ ಬಿದ್ದಿದ್ದ ಆರೆನ್ನೆನ್ ಆನಂದ ಅಸ್ನೋಟಿಕರ್ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿದಾಗ ಆತನ ಹಿಂದೇ ಹೋಗಿದ್ದರು.



ಅದಿರು ಖದರು

ಬಿಜೆಪಿ ಮಂತ್ರಿ ಆನಂದ ಅಸ್ನೋಟಿಕರ್‌ನ ಅತ್ಯಾಪ್ತ ವಲಯದ ಸದಸ್ಯನಾದ ಆರೆನ್ನೆನ್ ಅದಿರು ಉದ್ಯಮಕ್ಕೆ ಧುಮುಕಿದರು. ಮಂತ್ರಿ ಆನಂದ್ ಅಸ್ನೋಟಿಕರ್ ಬಲದಿಂದ ಈತ ಪ್ರತಿ ಅದಿರು ಲಾರಿಗಳಿಂದ ಹಫ್ತಾ ವಸೂಲಿಗೂ ಕೈಹಾಕಿದ್ದರು. ದಿನಕ್ಕೆ ನಾಲ್ಕೈದು ಸಾವಿರ ಲಾರಿಗಳು ಬಳ್ಳಾರಿಯಿಂದ ಬೇಲೇಕೇರಿ-ಕಾರವಾರ-ಮಂಗಳೂರಿಗೆ ಅಂಕೋಲೆ ಮೂಲಕವೇ ಹೋಗುತ್ತಿತ್ತು, ಆ ಲಾರಿಗಳಿಂದ ಆರೆನ್ನೆನ್ ಭಂಟರ್‌ಗಳು ತಲಾ ನೂರು ರೂ. ಸುಲಿಯುತ್ತಿದ್ದರು. ಅದಿರು ರಫ್ತುದಾರ ಅದಾನಿ ಕಂಪನಿಯಿಂದ ಆರೆನ್ನೆನ್‌ಗೆ ಏಜೆನ್ಸಿಯೂ ಸಿಕ್ಕಿತ್ತು, ಆ ಸ್ಟೀವೋಲ್ಸ್ ದಂಧೆಯಲ್ಲಿ ಆರೆನ್ನೆನ್ ಬಾಚಿದ್ದು ಲೆಕ್ಕವೇ ಇಲ್ಲ. ಅಧಿಕಾರಸ್ಥರ ಬಲದಿಂದ ಈತ ನಡೆಸುತ್ತಿದ್ದ ಅದಿರು ಹ್ಯಾಂಡಲಿಂಗ್ ವ್ಯವಹಾರದಲ್ಲಿ ದಿನವೊಂದಕ್ಕೆ ಲಾಭವೇ ಒಂದು ಲಕ್ಷ ಬರುತ್ತಿತ್ತು.

ಬೇಲೇಕೇರಿ ಅದಿರು ಅವ್ಯವಹಾರದಲ್ಲಿ ಆರೆನ್ನೆನ್‌ನ ಕಾಣದ ಕೈಕೆಲಸವೂ ಮಾಡಿದೆ. ಲೋಕಾಯುಕ್ತದವರು ಸೀಜ್ ಮಾಡಿದ್ದ ಅದಿರು ಕದ್ದು ವಿದೇಶಕ್ಕೆ ರಫ್ತಾದ ಕರ್ಮಕಾಂಡದಲ್ಲಿ ಆರೆನ್ನೆನ್ ರಹಸ್ಯ ಮಧ್ಯವರ್ತಿ ಎನ್ನುವವರೂ ಇದ್ದಾರೆ. ಸ್ವ-ಜಾತಿ ಅರಣ್ಯ ಅಧಿಕಾರಿಗಳ ಬಂದರು-ಪೊಲೀಸ್... ಮತ್ತಿತರ ಅಧಿಕಾರಿಗಳ ಪಳಗಿಸಿಕೊಂಡಿದ್ದ ಆರೆನ್ನೆನ್ ಅಕ್ರಮ ಅದಿರು ರಫ್ತು ಮಾಡಲು ಅವಕಾಶ ಕೊಡುವಂತೆ ಮನ ಒಲಿಸಿದ ತಂತ್ರಗಾರ ಎಂದು ಅದಿರು ಹಗರಣ ಬಲ್ಲವರು ವ್ಯಾಖ್ಯಾನಿಸುತ್ತಾರೆ. ಸದ್ರಿ ದೋ ನಂಬರ್ ಅದಿರು ದಂಧೆಯ ಜತೆಗೇ ಮರಳು ವಹಿವಾಟೂ ಆರೆನ್ನೆನ್ ಮಾಡುತ್ತಿದ್ದರು.

ಬಿಲ್ಡರ್ ಭೂಪ


ಬಿಡ್ಡಿ ಆಡಳಿತ ಪರ್ವದಲ್ಲಿ ಕಾರವಾರ-ಅಂಕೋಲಾ ಬಿಜೆಪಿಯ ದೊಡ್ಡ ನಾಯಕನಾಗಿ ಅವತರಿಸಿದ ಆರೆನ್ನೆನ್ ಆರ್ಭಟ ಆ ಹೊತ್ತಲ್ಲಿ ತಾರಕ ತಲುಪಿತ್ತು. ಆತನ ದುಡ್ಡಿನ ದೌಲತ್ತು ಅಂಕೋಲೆಯ ಹಳ್ಳಿ-ಹಳ್ಳಿಗೂ ಮುಟ್ಟಿತ್ತು. ಸಾರ್ವಜನಿಕ-ಸಭೆ-ಸಮಾರಂಭಗಳಲ್ಲಿ ಆರೆನ್ನೆನ್ ಗುಣಗಾನ ಆಗತೊಡಗಿತು. ಧಾರ್ಮಿಕ-ಸಾಂಸ್ಕೃತಿಕ ಉತ್ಸವಕ್ಕೆ ಪಡ್ಡೆ ಹುಡುಗರ ಕ್ರೀಡಾ ಸಂಘ-ಮೋಜಿನ ಸಮಾರಂಭಕ್ಕೆ ಹಣದ ನೆರವು, ಬಿಸಿಯೂಟದ ವಿದ್ಯಾರ್ಥಿಗಳಿಗೆ ತಾಟು-ತಂಬಿಗೆ, ಯುನಿಫಾರ್ಮ್-ಭಟ್ಟೆ-ಪುಸ್ತಕ ಕೊಡುವ 'ಕೊಡುಗೈ ದಾನಿ' ಎಂಬ ಬಿರುದು ಆರೆನ್ನೆನ್‌ಗೆ ಬಂದು ಬಿಟ್ಟಿತು.

ಆತನ ಬದುಕು ಅದೆಷ್ಟು ವೈಭವದಿಂದ ಕೂಡಿತ್ತೆಂದರೆ, ಮನೆಗೆ 'ಅರಮನೆ' ಎಂದೇ ಹೆಸರಿಡಲಾಗಿತ್ತು; ಉದ್ಯಮಗಳೆಲ್ಲ 'ಕುಬೇರ' ಎಂಬ ಅಂಕಿತದಲ್ಲಿ ನಡೆಯುತ್ತಿತ್ತು.

ಆರೆನ್ನೆನ್‌ರ ಅದಿರು-ಮರಳು-ಫೈನಾನ್ಸ್ ಉದ್ಯಮಕ್ಕೆ ಸಾಮಾಜಿಕ ಕಳಕಳಿಯ ಮುಖವಾಡ ಬಿತ್ತು. ವಿಶ್ವವಿದ್ಯಾಲಯಗಳ ನಾಡೋಜ, ಗೌರವ ಡಾಕ್ಟರೇಟ್ ಪ್ರಶಸ್ತಿಗೂ ಹಪಾಹಪಿ ಆತನ ತಲೆ ಕೆಡಿಸಲಾರಂಭಿಸಿತ್ತು. ಹೇಗಾದರೂ ಮಾಡಿ ಧಾರವಾಡ ಯೂನಿವರ್ಸಿಟಿಯ ಸಮಾಜಸೇವೆಗಾಗಿನ ಗೌರವ ಡಾಕ್ಟರೇಟ್ ಪಡೆಯಲೇಬೇಕೆಂಬ ತೆವಲಿಗೆ ಬಿದ್ದರು ಆರೆನ್ನೆನ್; ಈ ಸಾಮಾಜಿಕ 'ಗೌರವ' ಸಾಧಿಸುವ ಸ್ಕೆಚ್‌ನೊಂದಿಗೆ ಉದ್ಯಮ ವಿಸ್ತರಿಸುವ ನೀಲನಕ್ಷೆಯೂ ಹಾಕಿಕೊಂಡಿದ್ದರು. ಅಂಕೋಲಾ-ಗೋಕರ್ಣ ಭಾಗದಲ್ಲಿ ಹಲವು ಎಕರೆ ಜಾಗ ಖರೀದಿಸಿ ರಿಯಲ್ ಎಸ್ಟೇಟ್ ವ್ಯಾಪಾರ, ಫ್ಲಾಟ್ ನಿರ್ಮಾಣಕ್ಕೆ ಆರೆನ್ನೆನ್ ಇಳಿದಿದ್ದರು. ಅಂಕೋಲೆಯ ಪುರಲಕ್ಕಿ ಬೇಣದಲ್ಲಿ ಮಾಡಿದ್ದ ಸೈಟ್ ವ್ಯವಹಾರ ಒಂದರಲ್ಲೇ ಆತನಿಗೆ ಎರಡು ಕೋಟಿ ಲಾಭವಾಗಿತ್ತು; ಅತ್ತ ಗೋಕರ್ಣದಲ್ಲಿ ಖರೀದಿಸಿದ್ದ 29 ಎಕರೆ ಭೂಮಿಯಲ್ಲಿ ಫ್ಲಾಟ್ ನಿರ್ಮಿಸಿ ಮಾರುವ ವ್ಯವಹಾರ ನಡೆದಿತ್ತು. ಈ ಬಿಲ್ಡರ್ ದಂಧೆಗೆ ಆತ ಸುಮಾರು 9 ಕೋಟಿ ಹಣ ಹೂಡಿದ್ದರು.

ಡಾಕ್ಟರೇಟ್ ದಾಂಧಲೆ

ಆಳುವವರ ಸಂಪ್ರೀತಗೊಳಿಸಿ ಪ್ರಶಸ್ತಿ-ಪುರಸ್ಕಾರ, ಬಿರುದು-ಬಾವುಲಿ ಪಡೆಯುವ ಕಲೆ ಕರಗತ ಮಾಡಿಕೊಂಡಿದ್ದ



ಆರೆನ್ನೆನ್ ಕೆಲ ತಿಂಗಳ ಹಿಂದೆ ಡಾಕ್ಟರೇಟ್ ವಿವಾದದಲ್ಲಿ ಸಿಕ್ಕಿಬಿದ್ದಿದ್ದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಈತನಿಗೆ ಗೌರವ ಡಾಕ್ಟರೇಟ್ ಘೋಷಿಸಿ ಬಿಟ್ಟಿತ್ತು. ಇತ್ತ ಅಂಕೋಲೆಯಲ್ಲಿ ಡಾ. ಆರ್.ಎನ್.ನಾಯಕ್‌ಗೆ ಸನ್ಮಾನಕ್ಕೆ ಸಿದ್ಧತೆಯೂ ಶುರುವಾಗಿ ಹೋಗಿತ್ತು. ಸಮಾಜಸೇವೆಗಾಗಿ ಆರೆನ್ನೆನ್‌ಗೆ ಡಾಕ್ಟರೇಟ್ ಸಿಕ್ಕಿದೆಯೆಂಬ ಸಂಭ್ರಮದ ಜಾಹೀರಾತುಗಳು ರಾರಾಜಿಸಲಾರಂಭಿಸಿತ್ತು. ಒಟ್ಟಿನಲ್ಲಿ ಆರೆನ್ನೆನ್ ತನಗೆ ತಾನೇ ತಾರೀಫು ಮಾಡಿಕೊಳ್ಳಲು ಹಣ ಹರಿಸುತ್ತಿದ್ದರು.

ಆದರೆ ಅತ್ತ ರಾಜ್ಯಪಾಲರ ಅಂಗಳಕ್ಕೆ ಆರೆನ್ನೆನ್ ಡಾಕ್ಟರೇಟ್‌ಗೆ ಅನರ್ಹನೆಂಬ ದೂರು ಹೋಗಿತ್ತು. ಕೆಯುಡಿಯ ಸೆನೆಟ್ ಸಭೆಯಲ್ಲಿ ಸದಸ್ಯರಾದ ಡಾ. ಎಂಪಿ.ಕರ್ಕಿ (ಮಾಜಿ ಶಾಸಕ) ಮತ್ತು ಜಯಂತ್ ಎಂಬುವರು ಆರೆನ್ನೆನ್‌ಗೆ ಡಾಕ್ಟರೇಟ್ ಬೇಡವೆಂದು ತಕರಾರು ತೆಗೆದಿದ್ದರು. ಸಮಾಜಕ್ಕೆ ಒಳ್ಳೆಯದಾಗುವಂಥ ಸಾಹಸ ಆರೆನ್ನೆನ್‌ರಿಂದೇನೂ ಆಗಿರಲಿಲ್ಲ ಎಂಬುದು ಸೆನೆಟ್ ಖಾತ್ರಿಯಾಗಿತ್ತು, ಕೈಗೆ ಬಂದ ತುತ್ತು ಬಾಯಿಗೆ ಬರಲೇ ಇಲ್ಲ. ವಿಶ್ವವಿದ್ಯಾಲಯ ಡಾಕ್ಟರೇಟ್ ವಾಪಸ್ ಪಡೆದಿತ್ತು. ಈ ಡಾಕ್ಟರೇಟ್ ಹೈಡ್ರಾಮಾದ ಹಿಂದೆ ಸೂಟ್‌ಕೇಸ್ ವ್ಯವಹಾರ ನಡೆದಿತ್ತೆಂದು ಗುಲ್ಲೂ ಎದ್ದಿತು. ಆರೆನ್ನೆನ್‌ರ ಜಾತಿಬಂಧುವಾದ ಕಾರವಾರದ ಪ್ರಿನ್ಸಿಪಾಲ್ ಒಬ್ಬ ದುಡ್ಡಿನ ಚೀಲ ಹಿಡಿದುಕೊಂಡು ಧಾರವಾಡದ ವಿವಿ ಕ್ಯಾಂಪಸ್‌ನಲ್ಲಿ ಲಾಬಿ ಮಾಡಿದ್ದನೆಂಬುದು ಜಗಜ್ಜಾಹೀರಾಗಿತ್ತು.

ಎಲ್ಲ ಎಮ್ಮೆಲ್ಸಿಗಿರಿಗಾಗಿ

ಆರೆನ್ನೆನ್‌ರ ಢೋಂಗಿ ಸಮಾಜಸೇವೆಯ ಹಿಂದಿದ್ದದ್ದು ಒಂದೇ ಗುರಿ. ಹಣ ಹಾಕಿ ವಿಧಾನ ಪರಿಷತ್ ಸದಸ್ಯನಾಗಬೇಕೆಂಬುದೇ ಆರೆನ್ನೆನ್‌ರ ಕೊನೆಯ ಆಸೆಯಾಗಿತ್ತು. ಏಕೈಕ ವಂಶೋದ್ಧಾರಕನನ್ನು ತನ್ನ ತರಹೇವಾರಿ ಬಿಸ್ನೆಸ್ ಸಾಮ್ರಾಜ್ಯದ ಅಧಿಪತಿಯಾಗಿ ಪ್ರತಿಷ್ಠಾಪಿಸಿದ್ದ ಆತ ಬಿಜೆಪಿಯಲ್ಲಿ ಹಣ ಹಾಕಿದರೆ ಎಂಪಿ-ಎಮ್ಮೆಲೆ-ಶಾಸಕನಾಗೋದು ಕಾಂಗ್ರೆಸ್‌ಗಿಂತಲೂ ಸುಲಭ ಎಂದು ಲೆಕ್ಕಾಚಾರ ಹಾಕಿದ್ದರು. ಶಾಸಕ ಕಾಗೇರಿ, ಸಂಸದ ಅನಂತಕುಮಾರ್ ಹೆಗಡೆಗಳ ಲಿಂಕ್‌ನಿಂದ ದಿಲ್ಲಿ ದರ್ಬಾರಿನಲ್ಲಿ ಪ್ರಭಾವವಿರುವ 'ಅನಂತಕುಮಾರ್-ಈಶ್ವರಪ್ಪರ ಅಂತಃಪುರದವರೆಗೂ ಆರೆನ್ನೆನ್ ಹೋಗಿಬರತೊಡಗಿದ್ದರು. ಅತ್ತ ಗೋವಾದ ಬಿಜೆಪಿ ಲೀಡರ್‌ಗಳ ಮೂಲಕವೂ ಲಾಬಿ ನಡೆಸಿದ್ದರು.


ಆನಂದ್ ಅಸ್ನೋಟಿಕರ್‌ಗೆ ಬಿಜೆಪಿಯಲ್ಲಿ ನೆಲೆ-ಬೆಲೆಯಿಲ್ಲ ಎಂಬುದು ಗೊತ್ತಾಗಿದ್ದೇ ತಡ, ಆರೆನ್ನೆನ್ ಆತನಿಂದ ನಿಧಾನಕ್ಕೆ ದೂರ ಸರಿದಿದ್ದರು. ಕಳೆದ ಅಸೆಂಬ್ಲಿ













ಲೆಕ್ಷನ್‌ನಲ್ಲಿ ಅಸ್ನೋಟಿಕರ್ ಕಾಂಗ್ರೆಸ್‌ಗೆ ನೆಗೆಯಲು ಸರ್ಕಸ್ ಾಡುತ್ತಿದ್ದಾಗ ಬಿಜೆಪಿಯಲ್ಲಿ ಕಾರವಾರ-ಅಂಕೋಲಾ ಕ್ಷೇತ್ರದ ಕೆಟ್ ಆರೆನ್ನೆನ್‌ಗೆ ಕೊಡುವ ಚಿಂತನೆಯೂ ನಡೆದಿತ್ತು. ದರೆ ಆತ ಅಸೆಂಬ್ಲಿಗೆ ಸ್ಪರ್ಧಿಸಲು ಮುಂದಾಗಲಿಲ್ಲ. ಸಣ್ಣ ಾತಿಯಾದ ನಾಡವ ಸಮಾಜದ ತನಗೆ ಇತರ ಜಾತಿಯ ು ಬರದೆಂಬುದು ಆತನಿಗೆ ಗೊತ್ತಿತ್ತು. ಹಾಗೆಯೇ ದೆಷ್ಟೇ ದಾನ-ಧರ್ಮ ಮಾಡಿದರೂ ಅದಿರು-ಫೈನಾನ್ಸ್-ಬರ್‌ನಂಥ ಧೋಖಾ ದಂಧೆಗಳು ತನಗೆ ಓಟು ತರಲು ್ಡಿಯಾಗುವುದು ಆರೆನ್ನೆನ್‌ಗೆ ಅರಿವಿತ್ತು. ತನ್ನ ರ್ವಾಶ್ರಮದ ಸಾಹಸ-ಸಾಧನೆ ಎಮ್ಮೆಲ್ಲೆ ಆಗಲು ಡಲಾರದೆಂದು ಗೊತ್ತಾಗಿತ್ತು. ಹೀಗಾಗಿ ಆತ ಬಾಗಿಲಿಂದ ವಿಧಾನ ಪರಿಷತ್ ಸದಸ್ಯನಾಗುವ ಪ್ಲಾನ್ ಿ ಧನ ಬಲದಿಂದ ವರ್ಕ್‌ಔಟ್ ಮಾಡುತ್ತಲೇ ಇದ್ದರು.

ಅಸ್ನೋಟಿಕರ್ ಅಸೂಯೆ!

ಅಸ್ನೋಟಿಕರ್‌ನ 'ಸಿಜರೀನ್ ಸಚಿವಗಿರಿ'ಯ ಂಭದಿಂದ ಮಧ್ಯದ ಅವಧಿಯವರೆಗೂ ಆತನ ದೋಸ್ತಿ ರೆನ್ನೆನ್ ಸಂಗಡ ಗಾಢವಾಗೇ ಇತ್ತು. ಆರೆನ್ನೆನ್ ಕಪ್ಪು-ುಪಿನ ಬಿಸ್ನೆಸ್‌ಗೆ ಮಂತ್ರಿ ಮಾನ್ಯನ ಬೆಂಬಲವೂ ಸಿಕ್ಕಿತ್ತು. ಾವಾಗ ಅದಿರು-ರಿಯಲ್ ಎಸ್ಟೇಟ್-ಬಿಲ್ಡರ್ ದಂಧೆ ೀರಾಯ್ತೋ, ಆಗ ಆರೆನ್ನೆನ್ ಸಾವಕಾಶವಾಗಿ ಕಾಗೇರಿ, ಂತ್ ಹೆಗಡೆ, ಈಶ್ವರಪ್ಪ ಗೋವಾ ಸಿಎಂ ಮನೋಹರ್ ರೀಕರ್, ಅನಂತಕುಮಾರ್ ಸಂಗ ಶುರು ಮಾಡಿದರು. ಷ್ಟೇ ಅಲ್ಲ, ಅಸ್ನೋಟಿಕರ್‌ನಿಂದ ದೂರ ಯಲಾರಂಭಿಸಿದರು. ಇದು ಸಹಜವಾಗೇ ಡಾನ್ ಾಧರ್ಮದ ಅಸ್ನೋಟಿಕರ್‌ನಲ್ಲಿ ಅಸೂಯೆ ಮೂಡಿಸಿತು.

ಆರೆನ್ನೆನ್ ಜತೆ ಸುಮಧುರ ಸಂಬಂಧ ಹೊಂದಿರುವಂತೆ ಸುತ್ತ ಆತನ ಬಾಲ ಕಟ್ ಮಾಡಲು ಹವಣಿಸಿದರು. ೆನ್ನೆನ್ ಹಿಂದೆ ಗೂಢಚಾರರ ಬಿಟ್ಟ ಅಸ್ನೋಟಿಕರ್ ತನ ಉದ್ಯಮಗಳ ವಹಿವಾಟಿನ ಮೇಲೊಂದು ್ಟಿದ್ದರಂತೆ. ಹಾಗಂತ ಈಗ ಕಾರವಾರ-ಅಂಕೋಲಾ ಡೂ ಕಡೆ ಗುಸುಗುಸುಗಳೆದ್ದಿವೆ. ಸೈಲ್ ಶಾಸಕನಾಗುವ ಮೊದಲು ಆತನ ಮನೆ ಮುಂದೆ ಶೂಟೌಟ್ ನಡೆದಿತ್ತು. ಅಂದು ಸೈಲ್ ಮನೆಯಲ್ಲಿ ಇರಲಿಲ್ಲ. ಸೈಲ್‌ನ ಬೆದರಿಸಿ ರಾಜಕೀಯದಿಂದ ದೂರ ಮಾಡಲು ಅಸ್ನೋಟಿಕರನೇ ಅಂಡರ್ ವರ್ಲ್ಡ್‌ನವರಿಂದ ಈ ಹೆದರಿಸುವ ತಂತ್ರ ಮಾಡಿದ್ದಾನೆಂದು ಸುದ್ದಿಯಾಗಿತ್ತು. ಅಂದು ಜನರ ಕಣ್ಣಲ್ಲಿ ರಾಜಕೀಯ-ನೈತಿಕವಾಗಿ ಕೀಳಾಗಿದ್ದ ಅಸ್ನೋಟಿಕರ್‌ಗೆ ಸೈಲ್ ಎದುರು ಗೆಲ್ಲುವ ಧೈರ್ಯ ಉಡುಗಿಹೋಗಿತ್ತು. ನಂತರ ಸೋತು ಹೋದ ಬಿಡಿ.

ಆಗ ಶೂಟರ್‌ಗಳ ಜಾಡು ಹಿಡಿದುಹೋದ ಪೊಲೀಸರಿಗೆ ಉತ್ತರ ಪ್ರದೇಶದಲ್ಲಿ ಕೆಲವು ಸುಳಿವುಗಳು ಸಿಕ್ಕಿದ್ದವಂತೆ. ಕೆಲವು ಶಾರ್ಪ್‌ಶೂಟರ್‌ಗಳ ಬಳಿ ಆರೆನ್ನೆನ್‌ರ ಭಾವಚಿತ್ರವೂ ಇತ್ತಂತೆ. ಅಂದರೆ ಆರೆನ್ನೆನ್‌ರ ಆಪ್ತನಂತೆ ನಟಿಸುತ್ತಿದ್ದ ಪುಢಾರಿಯೊಬ್ಬ ಆತನ ತಲೆ ತೆಗೆವ ಸುಪಾರಿ ನೀಡಿದ್ದ ಅನುಮಾನ ಅಂದೇ ಬಂದಿತ್ತು. ರಾಜಕೀಯವಾಗಿ ಮೇಲೇರುತ್ತಿದ್ದ ಆರೆನ್ನೆನ್ ಕಾರವಾರ-ಅಂಕೋಲೆಯ ಪಾಳೇಗಾರನೊಬ್ಬನ ಕಣ್ಣು ಕೆಂಪಾಗಿಸಿತ್ತು. ಇಂಥ ಚರ್ವಿತ-ಚರ್ವಣ ಈಗ ಕರಾವಳಿಯ ರಾಜಕೀಯ-ಭೂಗತ-ಪೊಲೀಸ್ ವಲಯದಲ್ಲಿ ನಡೆಯುತ್ತಿದೆ. ಶಾಸಕನಾಗಿದ್ದ ವಸಂತ ಅಸ್ನೋಟಿಕರ್‌ನ ಹತ್ಯೆ ಮಾಡಿಸಿದ್ದ ಭೂಗತ ರೌಡಿ ದಿಲೀಪ್ ನಾಯ್ಕ್ ಕೊಚ್ಚಿ ಕೊಲ್ಲಿಸಿದ 'ಡಾನ್'ನೇ ಆರೆನ್ನೆನ್‌ರ ಮುಗಿಸಿದನಾ? ಇಂಥದೊಂದು ಅನುಮಾನ ಎಲ್ಲರಿಗೂ ಈಗ ನಿಧಾನಕ್ಕೆ ಬರುತ್ತಿದೆ!

ಅಂಡರ್‌ವರ್ಲ್ಡ್ ಥ್ರೆಟ್

ಆರೆನ್ನೆನ್‌ಗೆ ಐದು ವರ್ಷದ ಹಿಂದೆ ಭೂಗತಲೋಕದಿಂದ ಬೆದರಿಕೆ ಬಂದಿತ್ತು. ವಿದೇಶದಲ್ಲಿ ತಲೆ ಮರೆಸಿಕೊಂಡಿರುವ ಮಲ್ಪೆ (ಉಡುಪಿ) ಮೂಲದ ರಾಜೇಂದ್ರಕುಮಾರ್ ಯಾನೆ ಬನ್ನಂಜೆ ರಾಜಾನ ಹೆಸರಲ್ಲಿ ಆರೆನ್ನೆನ್‌ಗೆ ಹಫ್ತಾ ಬೇಡಿಕೆ ಬಂದಿತ್ತು. ಆಗ ಆರೆನ್ನೆನ್‌ನ ಸಮಾಜಸೇವೆಯ ವಿಜೃಂಭಣೆಯ ಗೌಜಿ ಜೋರಾಗಿತ್ತು; ಫೈನಾನ್ಸ್ ಮತ್ತು ಅದಿರು ವ್ಯವಹಾರದ ಗ್ರಾಫು ಮೇಲಮೇಲಕ್ಕೇರಿತ್ತು. 'ಆಗದವರ' ಕಣ್ಣು ಕುಕ್ಕುವಂತೆ ಆರೆನ್ನೆನ್ ಹಾರಾಡತೊಡಗಿದ್ದ ಕಾಲವದು. ತಾನು ಆರ್ಥಿಕ ಸಾಮಾಜಿಕವಾಗಿ ಸರ್ವಶಕ್ತನೆಂದು ಬಿಂಬಿಸಿಕೊಳ್ಳುವ ತೆವಲಿಗೆ ಆಗ ಆರೆನ್ನೆನ್ ಬಿದ್ದಿರು. ಇದು 'ಅಡ್ಡ ಪರಿಣಾಮ' ಬೀರಬಹುದೆಂಬ ಸಣ್ಣ ಯೋಚನೆಯೂ ಹುಂಬ ಆರೆನ್ನೆನ್ ತಲೆಯಲ್ಲಿ ಸುಳಿದಿರಲಿಲ್ಲ.

ಆದರೂ ಆತ ಭಯ ಬಿದ್ದಿದ್ದರು. ಅಂಡರ್‌ವರ್ಲ್ಡ್‌ನವರು ತನ್ನ ಹಿಂದೆ ಬಿದ್ದಿದ್ದಾರೆಂದು ಕಂಗಾಲಾಗಿದ್ದರು. ಪೊಲೀಸರಿಗೂ ದೂರು ಕೊಟ್ಟಿದ್ದರು. ಆಗಾತನಿಗೆ ಪೊಲೀಸ್ ಗನ್‌ಮ್ಯಾನ್ ಕೊಡಲಾಗಿತ್ತು. ಆತನೂ ಆರೆಂಟು ಖಾಸಗಿ ರೌಡಿಗಳನ್ನು ಸೆಕ್ಯುರಿಟಿಗೆ ನೇಮಿಸಿಕೊಂಡಿದ್ದರು.

ಇದೇ ರೀತಿ ಈಗ ಶಾಸಕನಾಗಿರುವ ಯಲ್ಲಾಪುರದ ಗಣಿ ಉದ್ಯಮಿ ಶಿವರಾಮ ಹೆಬ್ಬಾರ್, ಆತನ ಮಗ ವಿವೇಕ್ ಹೆಬ್ಬಾರ್, ಸತೀಶ್ ಸೈಲ್, ಕುಮಟಾದ ಗ್ಯಾಸ್ ಉದ್ಯಮಿಯೊಬ್ಬನಿಗೂ ಭೂಗತ ಪಾತಕಿಗಳಾದ ರವಿ ಪೂಜಾರಿ ಮತ್ತು ಬನ್ನಂಜೆ ರಾಜಾನ ಹೆಸರಲ್ಲಿ ಹಫ್ತಾ ಕರೆಗಳು ಬಂದಿದ್ದವು. ಇವರೆಲ್ಲ ಕೋಟಿಯಲ್ಲ, ಬರೀ ಬೆರಳೆಣಿಕೆಯ ಲಕ್ಷ ಕೊಟ್ಟು 'ಕೇಸ್ ಸೆಟ್ಲ್' ಮಾಡಿಕೊಂಡಿದ್ದರು. ಉತ್ತರ ಕನ್ನಡ ಮೂಲದ-ಮಂಗಳೂರಲ್ಲಿರುವ ಪೊಲೀಸ್ ಅಧಿಕಾರಿ ಮಧ್ಯಸ್ಥಿಕೆಯಲ್ಲಿ ಈ 'ರಾಜಿ' ನಡೆದಿತ್ತು. ಈ ಪೊಲೀಸ್ ಅಧಿಕಾರಿ ಅಂಡರ್‌ವರ್ಲ್ಡ್‌ನ ಡಾನ್-ಡಾಕೂಗಳ ಜತೆ ನಿಕಟ ನಂಟಿರುವ ಅಪಾಯಕಾರಿ. ಹಾಗಂತ ಆರೆನ್ನೆನ್ ಅಂಡರ್‌ವರ್ಲ್ಡ್‌ನೊಂದಿಗೆ ಸಂಧಾನಕ್ಕೇನೂ ಹೋಗಿರಲಿಲ್ಲ. ಅಂದರೆ ಆತನಿಗೆ ಕಪ್ಪು ಉದ್ಯಮದ ಕಾರಣ ದೊಡ್ಡ ಮಟ್ಟದ ಬೆದರಿಕೆಯೇನೂ ಬಂದಿರಲಿಕ್ಕಿಲ್ಲ. ಹಾಗೆ ಬಂದಿದ್ದರೆ ಜಾತಿ ಬಂಧುವೂ ಆಗಿರುವ ಸದ್ರಿ ಪೊಲೀಸ್ ಅಧಿಕಾರಿಯ ರಾಯಭಾರದಲ್ಲಿ ಆರೆನ್ನೆನ್ ಬಚಾವಿಗೆ ಪ್ರಯತ್ನಿಸುತ್ತಿರಲಿಲ್ಲವಾ? ಇದು ಸರಳ ತರ್ಕ.

ಅಷ್ಟೇ ಅಲ್ಲ, ಆರೆನ್ನೆನ್‌ಗೆ ಕಳೆದ ಎರಡು ವರ್ಷದಿಂದ ಭೂಗತರಿಂದ ಬೆದರಿಕೆಯೇನೂ ಬಂದಿರಲಿಲ್ಲ. ಬೇಲೇಕೇರಿ ಬಂದರಿನಲ್ಲಿ ಅದಿರು ರಫ್ತು ಬಂದಾದಾಗಂತೂ ಭೂಗತರ ಕಣ್ಣು ಅದಿರು ಉದ್ಯಮಿಗಳಿಂದ ಬೇರೆಡೆ ಹೊರಳಿತ್ತು. ಹಾಗೆಯೇ ಯಾರೇನೇ ಹೇಳಲಿ, ಆರೆನ್ನೆನ್‌ರ ಆಸ್ತಿ-ಅಕೌಂಟ್‌ಗಳೆಲ್ಲ ಒಂದು ನೂರು ಕೋಟಿ ಮೀರುವುದಿಲ್ಲ. ಐದು ಸಾವಿರ ಕೋಟಿ ಆತನಲ್ಲಿತ್ತು ಎಂಬುದೆಲ್ಲ ನಂಬಲಾಗದ ಕತೆ. ಬನ್ನಂಜೆ ರಾಜಾನ ಹೆಸರಲ್ಲಿ ಟಿವಿ ವಾಹಿನಿಗಳಿಗೆ ಬರುತ್ತಿರುವ ಫೋನುಗಳ ಬಗ್ಗೆಯೇ ಅನುಮಾನಗಳೆದ್ದಿವೆ. 'ಐದು ಕೋಟಿ ಕೇಳಿದರೆ ಕೊಡಲಿಲ್ಲ' ಎಂದು ಬನ್ನಂಜೆ ಹೇಳಿದ್ದಾನೆಂಬುದೇ ಸಂಶಯಾಸ್ಪದ ಸಂಗತಿ. ಈ ರವಿ ಪೂಜಾರಿ ಅಥವಾ ಬನ್ನಂಜೆ ರಾಜಾಗಳು ಹಣ ಕೊಡದ ಎಲ್ಲ ಉದ್ಯಮಿಗಳ ಕೊಲ್ಲಿಸಿದ್ದಾರಾ?

ಶೂಟೌಟ್ ಸುತ್ತ

ಒಂದಂತೂ ಖರೆ. ಆರೆನ್ನೆನ್ ಮೇಲೆ ಗುಂಡಿನ ದಾಳಿ ಮಾಡಿರುವವರು ಅಂಡರ್‌ವರ್ಲ್ಡ್ 'ಡಾನ್'ನ ಶಾರ್ಪ್ ಶೂಟರ್ ಹುಡುಗರೇ. ಇವರು ಹಫ್ತಾಕ್ಕಾಗಿ ಕೊಂದಿದ್ದಾರೆಂಬುದಕ್ಕೆ ಸಬಲ ಕಾರಣಗಳೇನೂ ಸದ್ಯಕ್ಕೆ ಸಿಗುತ್ತಿಲ್ಲ. ಹಣದಾಸೆಗೇ ಮಾಡಿದಿದ್ದರೆ ಕೊಂದೇ ಕೆಡಹುತ್ತಿರಲಿಲ್ಲ. ಸೈಲ್ ಮನೆಗೆ ಮೇಲೆ ದಾಳಿ ಮಾಡಿದಂತೆ ಅಥವಾ ಹೆಬ್ಬಾರ್‌ನ ಹೆದರಿಸಿದಂತೆ ತಂತ್ರ ಮಾಡಿ ಕಾಸು ಕಸಿಯುತ್ತಿದ್ದರು. ಆರೆನ್ನೆನ್‌ನ ಕೊಲ್ಲುವ ಉದ್ದೇಶದಿಂದಲೇ ಗುಂಡಿನ ಮಳೆ ಸುರಿಸಲಾಗಿದೆ. ಸ್ಥಳೀಯರ ನೆರವಿನಿಂದ ಆತನ ಚಲನವಲನ ಕರಾರುವಾಕ್ಕಾಗಿ ವಾಚ್ ಮಾಡಲಾಗಿದೆ.

ಆರೆನ್ನೆನ್ ಪ್ರತಿ ಶನಿವಾರ ತನ್ನ 'ದ್ವಾರಕಾ ಬ್ಯಾಂಕ್'ಗೆ ಲೆಕ್ಕಪತ್ರ ತಪಾಸಣೆಗೆ ಮಧ್ಯಾಹ್ನದ ಹೊತ್ತಿಗೆ ಬರುವುದು ಹಂತಕರು ತಿಳಿದುಕೊಂಡಿದ್ದಾರೆ. ಉತ್ತರ ಪ್ರದೇಶ ಮತ್ತು ಬಿಹಾರದ ಕಡೆಯ ನಾಲ್ಕು ಕೊಲೆಗಡುಕರು ಮೊದಲ ದಿನ 35 ಕಿ.ಮೀ. ದೂರದ ಕುಮಟಾದ ವೈಭವ ಪ್ಯಾಲೇಸ್‌ನಲ್ಲಿ ಉಳಿದುಕೊಂಡು ಮರುದಿನ 7.30 ಕ್ಕೇ ಅಂಕೋಲೆ ಕಡೆ ಹೊರಟಿದ್ದಾರೆ. ಬಸ್‌ಸ್ಟ್ಯಾಂಡ್ ಎದುರಿನ ಆರೆನ್ನೆನ್‌ರ ದ್ವಾರಕಾ ಬ್ಯಾಂಕ್ ಬಳಿ ತಮ್ಮ ಮಾರುತಿ ಓಮ್ನಿ ನಿಲ್ಲಿಸಿ ಹೊಂಚು ಹಾಕಿದ್ದಾರೆ. ಮೈಸೂರು ರಿಜಿಸ್ಟ್ರೇಷನ್‌ನ ಈ ಕಾರನ್ನು ಅಂಕೋಲೆಯಲ್ಲೇ ಮಾರಲು ವ್ಯವಹಾರವೂ ಮೊದಲೇ ಕುದುರಿಸಿದ್ದಾರೆ. ಮುಂಗಡವಾಗಿ ಮುವ್ವತ್ತು ಸಾವಿರ ರೂ.ಗಳನ್ನೂ ಪಡೆದಿದ್ದಾರೆ. ಇದೆಲ್ಲಾ ಸ್ಥಳೀಯರ ನೆರವು ಈ ಪಾತಕಿಗಳಿಗೆ ಸಿಕ್ಕಿರುವುದನ್ನು ಸಾಬೀತುಪಡಿಸುವಂತಿದೆ.

ಆರೆನ್ನೆನ್ ಬ್ಯಾಂಕ್‌ನಿಂದ ಕಾರೇರುವತನಕ ಸುಮ್ಮನಿದ್ದ ಶೂಟರ್‌ಗಳು ಆತ ಕಾರಲ್ಲಿ ಕುಳಿತ ನಂತರವೇ ಕಾರಿನ ಕಿಟಕಿ ಗ್ಲಾಸಿಗೆ ರಿವಾಲ್ವರ್ ಹಿಡಿದು ಗುಂಡು ಹಾರಿಸಿದ್ದಾರೆ. ತಕ್ಷಣಕ್ಕೆ ಹಿಂಬದಿ ಸೀಟಿನಲ್ಲಿ ಕುಳಿತ ಆರೆನ್ನೆನ್‌ರ ಬಾಡಿಗಾರ್ಡ್ ಪೇದೆ ಹಂತಕರ ಅಟ್ಟಿಸಿಕೊಂಡು ಗುಂಡು ಹಾರಿಸಿದ್ದಾನೆ. ಆಗ ಒಬ್ಬ ಸತ್ತು ಹೋದರೆ ಮತ್ತೊಬ್ಬ ಹತ್ತಿರದ ಕೋಲ್ಡ್‌ಡ್ರಿಂಕ್ಸ್ ಅಂಗಡಿಗೆ ಗ್ರಾಹಕನಂತೆ ಪ್ರವೇಶಿಸಿ ಬಚಾವಿಗೆ ಹವಣಿಸಿದ್ದಾನೆ. ಉಳಿದಿಬ್ಬರು ಯದ್ವಾತದ್ವಾ ಗುಂಡು ಹಾರಿಸುತ್ತ- ಜನರ ಬೆದರಿಸುತ್ತ ಪರಾರಿಯಾಗಿದ್ದಾರೆ. ಓಮ್ನಿ ಬಿಟ್ಟು ಓಡಿರುವ ಈ ಹಂತಕರಿಗೆ ಅಂಕೋಲೆಯ ರಸ್ತೆಗಳ ಪರಿಚಯವಿದೆ ಎಂದಾಯ್ತಲ್ಲವಾ?

ಕೋಲ್ಡ್‌ಡ್ರಿಂಕ್ಸ್ ಅಂಗಡಿಯಲ್ಲಿದ್ದ ಹಂತಕನನ್ನು ಜನರೇ ಗುರುತಿಸಿ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಎಡ ಭುಜದಲ್ಲಿ ಪ್ರವೇಶಿಸಿದ ಗುಂಡು ಆರೆನ್ನೆನ್‌ರ ಶ್ವಾಸಕೋಶ ಒಡೆದು ಹಾಕಿ ಹೃದಯದಿಂದ ನುಸುಳಿ ಪಕ್ಕೆಲುಬೊಂದರ ಮೇಲೆ ಬಂದು ಕುಳಿತಿದೆ. ಕೊಸರಾಡಲೂ ಆಗದಂತೆ ಆರೆನ್ನೆನ್ ಅಸು ನೀಗಿದ್ದಾರೆ!! ಹಂತಕರ ಅವಾಂತರ, ಒಬ್ಬ ಸಿಕ್ಕಿಬಿದ್ದು ಮತ್ತೊಬ್ಬ ಪೊಲೀಸ್ ಗುಂಡಿಗೆ ಬಲಿಯಾಗಿರುವುದು ಕಂಡರೆ ಅಷ್ಟೇನೂ ವೃತ್ತಿ ಪರಿಣತರಂತೆ ಕಾಣಿಸದು. ಟಿವಿ ವಾಹಿನಿಗಳಿಗೆ ಡಾನ್ ಬನ್ನಂಜೆ ರಾಜಾನ ಹೆಸರಲ್ಲಿ ಬರುತ್ತಿರುವ ಫೋನ್ ಡೈಲಾಗ್ ಡಿಲೆವರಿಗಳು ಆರೆನ್ನೆನ್ ಹತ್ಯೆ ಹಫ್ತಾಕ್ಕಾಗಿ ನಡೆದುದೆಂಬಂತೆ ಬಿಂಬಿಸಿ ತನಿಖೆಯ ದಿಕ್ಕು ತಪ್ಪಿಸಲು 'ಅಸಲೀ ಹಂತಕ' ಹಿಕಮತ್ತು ಮಾಡುತ್ತಿರುವ ಶಂಕೆ ಮೂಡುತ್ತದೆ!


ಯಾವ ದೃಷ್ಟಿಕೋನದಿಂದ ಆರೆನ್ನೆನ್ ಸುಪಾರಿ ಹತ್ಯೆಯ ಬಗ್ಗೆ ತರ್ಕ ಮಾಡಿದರೂ ಇದು ಸೇಡಿನ ಕಾರ್ಯಾಚರಣೆ ಎಂಬ ಭಾವನೆ ಬರುತ್ತದೆ; 'ಅದಿರು ಕಾರಣ'ವಿದ್ದ ಆಹುತಿಯಿದು!!

■ ವರದಿಗಾರ

ಬನ್ನಂಜೆ ಬಾತ್ಮಿದಾರ ಯಾರು?

ಬೇಲೇಕೇರಿ ಬಂದರಿಂದ ವಿದೇಶಕ್ಕೆ ರಫ್ತಾದ ಬಹುಕೋಟಿ ರೂ. ಅಕ್ರಮ ಿರು ಕರ್ಮಕಾಂಡ ಈಗ ಅಂಡರ್‌ವರ್ಲ್ಡ್ ಅಂಗಳಕ್ಕೆ ಬಂದು ನಿಂತಿದೆ! ಅಂಕೋಲಾದ ಿರು ಹ್ಯಾಂಡಲಿಂಗ್ ಉದ್ಯಮಿ ಆರ್.ಎನ್. ನಾಯಕ್ ಹತ್ಯೆ ಹಿಂದೆ ಅದಿರು ದ್ಯಮದ ದ್ವೇಷಾಸೂಯೆ ಅಡಗಿರುವುದು ನಿಧಾನಕ್ಕೆ ಬಹಿರಂಗವಾಗುತ್ತಿದೆ. ಉತ್ತರ ಡದ ಹಫ್ತಾ ಡಾನ್ ಆಗಿ ಬನ್ನಂಜೆ ರಾಜಾ ಅವತರಿಸಿದ್ದಾನೆ. ರವಿ ಪೂಜಾರಿ ಡುಪಿ-ದಕ್ಷಿಣ ಕನ್ನಡವನ್ನು ತನ್ನ ಭೂಗತ ಸಾಮ್ರಾಜ್ಯದಲ್ಲಿಟ್ಟುಕೊಂಡು ಬನ್ನಂಜೆಗೆ ತ್ತರ ಕನ್ನಡದ ಆಧಿಪತ್ಯ ವಹಿಸಿದ್ದಾನಂತೆ.

ಬನ್ನಂಜೆ ರಾಜಾ ಉತ್ತರ ಕನ್ನಡದ ಕಪ್ಪು ಹಣದ ಕುಬೇರರ ತಯಾರಿಸಿಕೊಂಡು ಕಾರ್ಯಾಚರಣೆ ಶುರು ಹಚ್ಚಿಕೊಂಡಿದ್ದಾನೆ. ಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ್, ಕಾರವಾರ ಶಾಸಕ ೀಶ್ ಸೈಲ್, ಅಂಕೋಲಾದ ಆರ್.ಎನ್.ನಾಯಕ್, ಅವಸಾನದ ಂಗಲದಾಸ ಕಾಮತ್, ಕಾರವಾರದ ಕೃಷ್ಣ ಕೇಳಕರ್... ಮುಂತಾದ ರು, ಲ್ಯಾಂಡ್ ಬಿಸ್ನೆಸ್‌ದಾರರಿಂದ ಹಫ್ತಾ ವಸೂಲಿ ಮಾಡಲು ್ ಹಾಕಿದ್ದಾನೆ. ಇವರಲ್ಲಿ ಕೆಲವರು ಹಫ್ತಾ ಕೊಟ್ಟು, ಂಗಾಗದವರ ಬಗ್ಗೆ ಬನ್ನಂಜೆ ರಾಜಾನಿಗೆ ಅತಿಶಯೋಕ್ತಿಯ ಹಿತಿ ಕೊಟ್ಟು ಬಂದಿದ್ದಾರೆ.



ಅಂಥವರಲ್ಲಿ ಅವಸಾನದ ಅದಿರು ಹ್ಯಾಂಡಲಿಂಗ್ ಏಜೆಂಟ್ ಂಗಲದಾಸ ಕಾಮತ್ ಒಬ್ಬ ಬಾತ್ಮಿದಾರ ಅಂಡರ್‌ವರ್ಲ್ಡ್ ರ್‌ಗಳಿಗೆ. ಈ ಕಾಮತ್ ಶಾಸಕ ಸತೀಶ್ ಸೈಲ್‌ನ ರಫ್ತು ಕಂಪನಿಯ ಸ್ಟೀವೊಡೋರ್ ಜೆಂಟ್. ಕಾಮತ್‌ಗೆ ಈಚೆಗೆ ಬನ್ನಂಜೆ ರಾಜಾ ಫೋನಾಯಿಸಿ ಹಫ್ತಾ ಬೇಡಿಕೆ ಇಟ್ಟಿದ್ದನಂತೆ. ಕಪ್ಪು ಕಾಣಿಕೆ ಕೊಡಲು ಹೋದಾಗ ಆರ್.ಎನ್.ನಾಯಕ್ ಬಗ್ಗೆ ಬನ್ನಂಜೆ ಬಳಿ ಹೇಳಿ ಕಳಿಸಿ ಬಂದಿದ್ದನಂತೆ. ಆರೆನ್ನೆನ್ ವ್ಯವಹಾರ-ಚಲನವಲನ ನಿಖರವಾಗಿ ಂಜೆ ಬಳಗಕ್ಕೆ ಕೊಟ್ಟದ್ದೇ ಈ ಮಂಗಲದಾಸ್ ಕಾಮತ್ ಎಂಬ ಸುದ್ದಿ ಈಗ ಾಗಿ ಹಬ್ಬಿದೆ. 5000 ಕೋಟಿ ವ್ಯವಹಾರ ಆರೆನ್ನೆನ್ ಮಾಡಿದ್ದಾನೆಂದು ಬನ್ನಂಜೆಗೆ ಹೇಳಿದ್ದೇ ಕಾಮತ್; ಹಂತಕರಿಗೆ ಕಾರು ಮಾರಲು ಗಿರಾಕಿ ಕೂಡಿಸಿದ್ದೇ ಅಂತೆ!


ಎರಡು ವರ್ಷದ ಹಿಂದೆ ಬನ್ನಂಜೆ ರಾಜಾನಿಂದ ಬೆದರಿಕೆ ಫೋನು ಕರೆ ಬಂದಾಗ ಆರೆನ್ನೆನ್ ಅಷ್ಟೇ ಒರಟಾಗಿ ಮಾತಾಡಿದ್ದಾನೆ. ತನಗೆ ಮಂತ್ರಿ ಅಸ್ನೋಟಿಕರ್ ಬಲ ಇರುವುದರಿಂದ ಈ ಬನ್ನಂಜೆ ಏನೂ ಮಾಡಲಾರನೆಂಬ ಹುಂಬತನ ಆರೆನ್ನೆನ್‌ದಾಗಿತ್ತು. ಅಷ್ಟೇ ಅಲ್ಲ, ಅಸ್ನೋಟಿಕರ್‌ಗೆ ಅಂಡರ್‌ವರ್ಲ್ಡ್ ಡಾನ್ ಒಬ್ಬನ ಸಖ್ಯವಿರುವುದೂ ಆರೆನ್ನೆನ್ ಸೊಕ್ಕಿಗೆ ಕಾರಣವಾಗಿತ್ತು. ಉತ್ತರ ಕನ್ನಡದ 'ಅದಿರು ಕಾರಣಿ'ಗಳು ಒಂದೊಂದು ಭೂಗತ ಲೋಕದ ಆಶ್ರಯ ಪಡೆದಿದ್ದಾರೆ. ಆಗ ಆರೆನ್ನೆನ್ ಅಹಂಕಾರದಲ್ಲಿ ಮಾತಾಡಿದ್ದು ಈಗ ಬನ್ನಂಜೆಯ ತಲೆ ತಿರುಗಿಸಲು ಕಾಮತ್‌ಗೆ ಅಸ್ತ್ರವಾಗಿದೆ.

ಅಷ್ಟಕ್ಕೂ ಕಾಮತ್ ಪಡೆಗೆ ಆರೆನ್ನೆನ್ ಮೇಲೇಕೆ ಸಿಟ್ಟು? ಕಾರಣ ಹುಡುಕುತ್ತ ಹೋದರೆ ಬೇಲೇಕೇರಿ ಬಂದರಿನ ಅದಿರುಪ್ಪ ಅವ್ಯವಹಾರದ ತನಿಖೆ ನಡೆಸುತ್ತಿರುವ ಸಿಬಿಐ ಬಿಗಿಧೋರಣೆ ಬಳಿ ಬಂದು ನಿಲ್ಲಬೇಕಾಗುತ್ತದೆ. ಬೇಲೇಕೇರಿ ಅದಿರು ಪ್ರಕರಣದಲ್ಲಿ ಸಿಬಿಐ 'ಆದಾನಿ' ಎಂಬ ರಫ್ತುದಾರರ ಕಂಪನಿಯ ಹ್ಯಾಂಡಲಿಂಗ್ ಏಜೆಂಟನಾಗಿದ್ದ ಆರೆನ್ನೆನ್‌ರನ್ನು ಐ-ವಿಟ್ನೆಸ್ ಮಾಡಿದೆಯಂತೆ. ಈತನ ಸಾಕ್ಷ್ಯ ಬಲಾಢ್ಯ ಆದಾನಿ ಕಂಪನಿ, ಸತೀಶ್ ಸೈಲ್, ಮಂಗಲದಾಸ್ ಕಾಮತ್ ವಗೈರೆ ಅದಿರು ಅವ್ಯವಹಾರಿಗಳಿಗೆ ಮುಳುವಾಗುತ್ತಿತ್ತು! ಬೆದರಿದ ಕಾಮತ್, ಆದಾನಿ ವಗೈರೆ ಅದಿರು ಕಳ್ಳರು ಭೂಗತ ಪಾತಕಿ ಬನ್ನಂಜೆ ರಾಜಾ ಕೆರಳುವಂತೆ ಆತನಿಗೆ ಆರೆನ್ನೆನ್ ಬಗ್ಗೆ ಇಲ್ಲ-ಸಲ್ಲದ ಮಾಹಿತಿ ನೀಡಿ ಕೊಲೆಗೆ ಕುಮ್ಮಕ್ಕು ನೀಡಿದ್ದಾರೆ!!

ಇದರಿಂದ ಏಕಾಏಕಿ ಬನ್ನಂಜೆ ಕೆರಳಿದ್ದಾನೆ. ಎರಡು ವರ್ಷದಿಂದ ಸುಮ್ಮನಿದ್ದ ಬನ್ನಂಜೆ ಒಂದೇ ಏಟಿಗೆ ಆರೆನ್ನೆನ್ ಬಲಿ ಪಡೆದಿದ್ದಾನೆ. ಈಗ ಸಮಾಜ ಸುಧಾರಕನಾಗಿರುವ ಭೂಗತ ಪಾತಕಿಯೊಬ್ಬನ ಆಶ್ರಯದಲ್ಲಿರುವ ಅಸ್ನೋಟಿಕರ್‌ನ ಅಂಡರ್‌ವರ್ಲ್ಡ್‌ನ ಬಾಸ್‌ಗೂ-ಬನ್ನಂಜೆಗೂ ಬದ್ಧ ದ್ವೇಷ. ಒಟ್ಟಿನಲ್ಲಿ ಲೋಕಾಯುಕ್ತದವರು ಸೀಜ್ ಮಾಡಿದ ಅದಿರು ಕದ್ದು ವಿದೇಶಕ್ಕೆ ಕಳಿಸಿದ ಕಳ್ಳರು ಭೂಗತ ಲೋಕದ ಪಾತಕಿಗಳಿಂದ ಆರೆನ್ನೆನ್‌ರ ಮುಗಿಸಿರುವ ಸಾಧ್ಯತೆ ಬಗ್ಗೆ ಈಗ ಚರ್ಚೆಗಳಾಗುತ್ತಿವೆ.

ಪೊಲೀಸರು ಕನ್‌ಫ್ಯೂಸ್‌ನಲ್ಲಿದ್ದಾರೆ. ಈ ಕಗ್ಗೊಲೆಗೆ ಕಾರಣ ಉದ್ಯಮ ಸೇಡೋ? ರಾಜಕೀಯ ದ್ವೇಷಾಸೂಯೆಯೋ?

ಜೆ.ಎಸ್.ಎಸ್



ಶ್ರದ್ಧಾಂಜಲಿ


ನನ್ನ ವಿದ್ಯಾ ಗುರು ಮತ್ತು ಅನ್ನದಾತ

ಡಾ.ಜಿ.ಎಸ್.ಶಿವರುದ್ರಪ್ಪನವರು ನನ್ನ ವಿದ್ಯಾಗುರುಗಳು ಮತ್ತು ಅನ್ನದಾತರೂ ಕೂಡ. ನಾನು ಎಂ.ಎ ಪದವಿಯನ್ನು ಮುಗಿಸಿದನಂತರ ನಿರುದ್ಯೋಗಿಯಾಗಿ ಬಹಳ ಕಷ್ಟದಲ್ಲಿದ್ದೆ. ಒಂದು ಸಂಜೆ ಸೆಂಟ್ರಲ್ ಕಾಲೇಜಿನ ಗ್ರಂಥಾಲಯದ ಎದುರು ಇರುವ ಕಲ್ಲು ಬೆಂಚಿನ ಮೇಲೆ ಒಬ್ಬನೇ ಕುಳಿತಿದ್ದೆ. ಡಾ. ಕಾಳೇಗೌಡನಾಗವಾರ ಮತ್ತು ಡಾ.ಡಿ.ಆರ್.ನಾಗರಾಜ್ ಇವರಿಬ್ಬರೂ ನನ್ನನ್ನು ಹುಡುಕುತ್ತಾ ಅಲ್ಲಿಗೆ ಬಂದರು. "ನಿಮ್ಮನ್ನು ಎರಡು ಮೂರು ದಿನಗಳಿಂದ ಹುಡುಕುತ್ತಿದ್ದೇವೆ, ಎಲ್ಲಿ ಹೋಗಿದ್ದಿರಿ?" ಎಂದರು. ನಾನು ಆಶ್ಚರ್ಯದಿಂದ ಕಾರಣವೇನೆಂದು ಕೇಳಿದೆ. ಅವರು ಡಾ. ಜಿ.ಎಸ್.ಶಿವರುದ್ರಪ್ಪನವರು ನಿಮ್ಮನ್ನು ಬರಹೇಳಿದ್ದಾರೆಂದು ನಾಳೆ ಬೆಳಗ್ಗೆಯೇ ಅವರ ಮನೆಗೆ ಹೋಗಬೇಕೆಂದು ಹೇಳಿದರು. ಆಗ ಡಾ. ಜಿ.ಎಸ್.ಶಿವರುದ್ರಪ್ಪನವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದರು. ಮಾರನೆಯ ದಿನ ಬೆಳಗ್ಗೆ ನಾನು ಅವರ ಮನೆಗೆ ಹೋಗಿ ಅವರನ್ನು ಕಂಡು ನಮಸ್ಕರಿಸಿದೆ. ಅವರು ಕುಳಿತುಕೊಳ್ಳುವಂತೆ ಹೇಳಿ ಕಾಫಿ ತರಿಸಿಕೊಟ್ಟರು. ನಾನು ಅಳುಕುತ್ತಲೇ "ಸರ್, ತಾವು ಬರಹೇಳಿದಿರಂತೆ" ಎಂದು ಕೇಳಿದೆ. ಅವರು ಒಂದು ಖಾಲಿ ಹಾಳೆಯನ್ನು ಕೈಗೆ ಕೊಟ್ಟು, ಕನ್ನಡ ಅಧ್ಯಯನ ಕೇಂದ್ರದಲ್ಲಿ ಒಂದು ಸಂಶೋಧನ ಸಹಾಯಕರ ಹುದ್ದೆ ಖಾಲಿ ಇದೆ, ನೀವು ಆ ಹುದ್ದೆಗೆ ಅರ್ಜಿಯನ್ನು ಸಲ್ಲಿಸಬೇಕೆಂದು ಈ ಹಾಳೆಯಲ್ಲಿ ಈಗಲೇ ಬರೆದುಕೊಟ್ಟರೆ ಸಾಕೆಂದು ಹೇಳಿದರು. ನಾನು ಅಲ್ಲೇ ಅರ್ಜಿ ಬರೆದು ಅವರ ಕೈಗೆ ಕೊಟ್ಟೆ. ಅರ್ಜಿ ತೆಗೆದುಕೊಂಡ ಅವರು ಇಂಥ ದಿವಸ ಜ್ಞಾನಭಾರತಿಯ ಕನ್ನಡ ಅಧ್ಯಯನ ಕೇಂದ್ರದಲ್ಲಿ ತಮ್ಮನ್ನು ಕಾಣಬೇಕೆಂದು ಹೇಳಿದರು. ಅವರು ಹೇಳಿದಂತೆ ಒಂದು ಮಧ್ಯಾಹ್ನ ಜ್ಞಾನಭಾರತಿಯ ಕನ್ನಡ ಅಧ್ಯಯನ ಕೇಂದ್ರಕ್ಕೆ ಹೋದೆ. ಉರಿ ಬಿಸಿಲಿನಲ್ಲಿ ಕೇಂದ್ರ ಕಚೇರಿಯ ಕಡೆಯಿಂದ ಡಾ. ಜಿ.ಎಸ್.ಎಸ್. ಕನ್ನಡ ಅಧ್ಯಯನ ಕೇಂದ್ರದ ಕಡೆ ಬರುತ್ತಿದ್ದರು. ಅವರ ಕೈಯಲ್ಲಿ ಒಂದು ಲಕೋಟೆ ಇತ್ತು, ನಾನು ನಮಸ್ಕರಿಸಿದಾಗ "ಇದು ನಿಮ್ಮ ನೇಮಕಾತಿಯ ಆದೇಶ, ನಾಳೆಯೇ ಕೆಲಸಕ್ಕೆ ಹಾಜರಾಗಿ" ಎಂದು ಹೇಳಿದರು. ನಾನು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿ ಮಾರನೆಯ ದಿನ ಕೆಲಸಕ್ಕೆ ಹಾಜರಾದೆ. ನಾನು ಕೊಠಡಿಯಲ್ಲಿ ಕುಳಿತಿದ್ದಾಗ ಅವರು ಇದ್ದಕ್ಕಿದ್ದಂತೆ ಕೊಠಡಿಗೆ ಬಂದರು. ನಾನು ಎದ್ದು ನಿಲ್ಲುತ್ತಿದ್ದಂತೆ ಅವರು "ಕುಳಿತುಕೊಳ್ಳಿ, ನಿಮಗೆ ಸರಿಯಾಗಿ ಮೇಜು, ಕುರ್ಚಿ ಕೊಟ್ಟಿದ್ದಾರೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಬಂದೆ" ಎಂದರು.

ಅವರು ಎಂ.ಎ. ತರಗತಿಯಲ್ಲಿ ಅದ್ಭುತ ರೀತಿಯಲ್ಲಿ ಪಾಠ ಮಾಡುತ್ತಿದ್ದರು. ಪೂರ್ವಸಿದ್ಧತೆಯಿಲ್ಲದೆ, ಟಿಪ್ಪಣಿಗಳಿಲ್ಲದೆ ತರಗತಿಗೆ ಬಂದವರೇ ಅಲ್ಲ, ಅವರು ಭಾಗವಹಿಸುವ ಪ್ರತಿಯೊಂದು ಸಭೆ, ಸಮಾರಂಭಗಳಿಗೂ ಪೂರ್ವಸಿದ್ಧತೆ ಮತ್ತು ಟಿಪ್ಪಣಿಯೊಂದಿಗೆ ಹೋಗುತ್ತಿದ್ದರು. ಅವರು ಮಾಡುವ ಪ್ರತಿಯೊಂದು ಕೆಲಸವೂ ಅಚ್ಚುಕಟ್ಟಿನಿಂದ ಕೂಡಿತ್ತು, ಅವರು ಶಿಸ್ತು ಮತ್ತು ಶ್ರದ್ಧೆಯ ಪ್ರತೀಕವಾಗಿದ್ದರು. ಉಳಿದವರಿಂದಲೂ ಇದನ್ನು ನಿರೀಕ್ಷಿಸುತ್ತಿದ್ದರು. ವಿಶ್ವವಿದ್ಯಾಲಯದ ನೌಕರಿಯಲ್ಲಿದ್ದರೂ ಹೊರಗೆ ನಾನು ದಲಿತ ಚಳವಳಿಯನ್ನು ಸಂಘಟಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೆ. ರೈತ ಕಾರ್ಮಿಕರ ಹೋರಾಟದಲ್ಲೂ ಕಾಣಿಸಿಕೊಳ್ಳುತ್ತಿದ್ದೆ. ನನ್ನ ಭಾಷಣ, ಬಂಧನದ ವರದಿಗಳು ಪತ್ರಿಕೆಗಳ ಮೂಲಕ ಅವರ ಗಮನಕ್ಕೆ ಬಂದರೂ ಈ ಬಗ್ಗೆ ಎಂದೂ ಆಕ್ಷೇಪಣೆ ಮಾಡಲಿಲ್ಲ. ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದರೂ ಸಹ ಜೆ.ಪಿ. ಚಳವಳಿಯ ಮೊದಲ ದಿನಗಳಲ್ಲಿ ಚಳವಳಿಗೆ ಬೆಂಬಲಿಸಿ, ಭ್ರಷ್ಟಾಚಾರವನ್ನು ವಿರೋಧಿಸಿ ಪಿ. ಲಂಕೇಶ್, ನಂಜುಂಡಸ್ವಾಮಿ ಮತ್ತು ಚಂದ್ರಶೇಖರ ಪಾಟೀಲರು ಸಂಘಟಿಸಿದ್ದ ಮೆರವಣಿಗೆಯಲ್ಲಿ ಮೈಸೂರು ಬ್ಯಾಂಕ್ ಚೌಕದಿಂದ ವಿಧಾನಸೌಧದವರೆಗೆ ಭಾಗವಹಿಸಿದ್ದರು. ನಾನು ವಿದ್ಯಾರ್ಥಿಯಾಗಿದ್ದಾಗಲೇ ಪ್ರಕಟವಾಗಿದ್ದ ನನ್ನ 'ಹೊಲೆಮಾದಿಗರ ಹಾಡು' ಕೃತಿಗೆ ಒಳ್ಳೆಯ ಅಭಿಪ್ರಾಯವನ್ನು ನೀಡಿ ಪ್ರೋತ್ಸಾಹಿಸಿದ್ದರು. ಅಧ್ಯಯನ ಕೇಂದ್ರಕ್ಕೆ ಪ್ರಗತಿ ಪರವಾಗಿ ಚಿಂತಿಸುವ ವಿದ್ವಾಂಸರುಗಳನ್ನು ನೇಮಕ ಮಾಡಿಕೊಂಡರು. ಇದಕ್ಕೆ ಕುಲಪತಿಗಳಾಗಿದ್ದ ಡಾ.ಎಚ್.ನರಸಿಂಹಯ್ಯನವರ ಒತ್ತಾಸೆಯೂ ಇತ್ತು, ಡಾ.ಜಿ.ಎಸ್.ಎಸ್. ಅವರು ಕನ್ನಡ ವಿಭಾಗವನ್ನು ವಿಶೇಷ ರೀತಿಯಲ್ಲಿ ಕಟ್ಟಿ ಬೆಳೆಸಿದರು. ಅವರು ನಿರೀಕ್ಷಿಸಿದಂತೆ ಕೆಲಸವಾಗದೆ ಇದ್ದಾಗ ಕೋಪ ಮಾಡಿಕೊಳ್ಳುವುದೂ ಇತ್ತು. ಅವರ ಕೋಪದ ಬಗ್ಗೆ ತಿಳಿದಿದ್ದ ನಾನು ಅವರಿಗೆ ದೂರದಿಂದಲೇ ನಮಸ್ಕರಿಸಿ ಬಚಾವಾಗುತ್ತಿದ್ದುದೂ ಉಂಟು. ಆಗ ನಾನು ಡಾ. ಕೆ. ಮರುಳಸಿದ್ದಪ್ಪನವರ ನೆಚ್ಚಿನ ಶಿಷ್ಯನಾಗಿ ಓಡಾಡಿಕೊಂಡಿದ್ದೆ. ನನ್ನ ಡಾಕ್ಟರೇಟ್ ಸಂಶೋಧನೆಗೆ ಮಾರ್ಗದರ್ಶಕರಾಗಿದ್ದ ಡಾ. ಜಿ.ಎಸ್.ಎಸ್. ನನ್ನ ಸೋಮಾರಿತನವನ್ನು ಹೇಗೋ ಸಹಿಸಿಕೊಂಡರು. ನಾನು ಮಹಾಪ್ರಬಂಧದ ಅಧ್ಯಾಯವನ್ನು ಬರೆದು ಕೊಟ್ಟಾಗ ಅದನ್ನು ಎರಡು ಮೂರು ದಿನಗಳಲ್ಲಿ ಒಂದು ಶಬ್ದವನ್ನೂ ಬಿಡದಂತೆ ಓದಿ ಅಲ್ಲಲ್ಲಿ ಗುರುತು ಹಾಕಿ ತಿದ್ದುಪಡಿಗಳನ್ನು ಸೂಚಿಸುತ್ತಿದ್ದರು. ಮುಂದಿನ ಅಧ್ಯಾಯವನ್ನು ಬರೆಯುವಂತೆ ಪ್ರೋತ್ಸಾಹಿಸುತ್ತಿದ್ದರು. ಜ್ಞಾನಭಾರತಿಯಲ್ಲಿ ಎಂ.ಎ. ತರಗತಿಗಳಿಗೆ ಪಾಠ ಮಾಡಲು ಅವಕಾಶ ಮಾಡಿಕೊಟ್ಟಿದ್ದಲ್ಲದೆ, ಆಗತಾನೆ ಪ್ರಾರಂಭವಾಗಿದ್ದ ಸಂಜೆ ಕನ್ನಡ ಎಂ.ಎ. ಪದವಿ ತರಗತಿಗಳಿಗೂ ಪಾಠ ಮಾಡಲು ಅವಕಾಶ ಮಾಡಿಕೊಟ್ಟರು. ಎಂ.ಎ. ತರಗತಿಗಳು ಸೆಂಟ್ರಲ್ ಕಾಲೇಜಿನಲ್ಲಿ ಸಂಜೆ ಆರರಿಂದ ಒಂಬತ್ತು ಗಂಟೆಯವರೆಗೆ ನಡೆಯುತ್ತಿದ್ದವು. ಡಾ. ಜಿ.ಎಸ್.ಎಸ್. ಅಲ್ಲೂ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು.


ಕಳೆದ ಆರು ದಶಕಗಳಲ್ಲಿ ಡಾ.ಜಿ.ಎಸ್.ಎಸ್. ಕವಿಯಾಗಿ, ವಿಮರ್ಶಕರಾಗಿ, ಚಿಂತಕರಾಗಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಬೆಳೆಸಿದ್ದಾರೆ. ಕನ್ನಡ ಪ್ರಜ್ಞೆಯ ಪ್ರತೀಕವಾಗಿದ್ದಾರೆ. ಅವರು ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಅಪೂರ್ವವಾದ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಹಲವಾರು ವಿದ್ವಾಂಸರುಗಳಿಂದ ಲೇಖನಗಳನ್ನು ಬರೆಸಿ ಸಮಗ್ರಸಾಹಿತ್ಯ ಚರಿತ್ರೆಯ ಆರು ಸಂಪುಟಗಳನ್ನು ಪ್ರಕಟಣೆ ಮಾಡಿದರು. ಈ ಸಂಪುಟಗಳು ಸಾಹಿತ್ಯದ ವಿದ್ಯಾರ್ಥಿಗಳು, ಅಧ್ಯಾಪಕರು, ಸಂಶೋಧಕರಿಗೆ ಮಾರ್ಗದರ್ಶಿ ಆಗಿವೆ. ಜನಸಾಮಾನ್ಯರಿಗೆ ಕನ್ನಡ ಸಾಹಿತ್ಯವನ್ನು ತಲುಪಿಸಲು ಒಂದು ವಿಶೇಷ ಯೋಜನೆಯನ್ನು ಕೈಗೆತ್ತಿಕೊಂಡ ಡಾ. ಜಿ.ಎಸ್.ಎಸ್. ವಿದ್ವಾಂಸರುಗಳಿಂದ ಕೃತಿಗಳನ್ನು ಬರೆಸಿ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಎಂಬ ಮಾಲಿಕೆಯಡಿಯಲ್ಲಿ ಹತ್ತು ಸಂಪುಟಗಳನ್ನು ಪ್ರಕಟ ಮಾಡಿದರು. ಇವುಗಳನ್ನು ಆಗಿನ ಮುಖ್ಯ ಮಂತ್ರಿ ಡಿ. ದೇವರಾಜ ಅರಸು ಅವರು ಬಿಡುಗಡೆ ಮಾಡಿದರು. ಪ್ರತಿ ವರ್ಷ ಕನ್ನಡದಲ್ಲಿ ಪ್ರಕಟವಾಗುವ ಸಾಹಿತ್ಯದ ಎಲ್ಲ ಪ್ರಕಾರದ ಕೃತಿಗಳನ್ನು ವಿದ್ವಾಂಸರುಗಳಿಂದ ವಿಮರ್ಶೆಗೆ ಒಳಪಡಿಸಿ "ಸಾಹಿತ್ಯ ವಾರ್ಷಿಕ" ಎಂಬ ಕೃತಿಯನ್ನು ಅನೇಕ ವರ್ಷಗಳ ಕಾಲ ತಂದರು. ವಿದ್ವತ್ ಮತ್ತು ಸಂಶೋಧನಾ ಲೇಖನಗಳನ್ನು ತಜ್ಞರಿಂದ ಬರೆಯಿಸಿ "ಸಾಧನೆ" ಎಂಬ ತ್ರೈಮಾಸಿಕದ ಪ್ರಕಟಣೆಯನ್ನು ಪ್ರಾರಂಭಿಸಿದರು. ಕನ್ನಡ ಸಾಹಿತ್ಯ ಪರಂಪರೆಯ ಸಾಂಗತ್ಯದಲ್ಲಿ ನಂಬಿಕೆಯನ್ನು ಇಟ್ಟುಕೊಂಡ ಜಿ.ಎಸ್.ಎಸ್ ಅವರು ಕುವೆಂಪು, ತೀನಂಶ್ರೀ, ಡಿ.ಎಲ್.ಎನ್. ಅವರಿಂದ ಕನ್ನಡ ದೀಕ್ಷೆಯನ್ನು ಸ್ವೀಕರಿಸಿ ತಮ್ಮದೇ ಆದ ಮಾರ್ಗವನ್ನು ಕಂಡುಕೊಂಡರು.

ಡಾ.ಜಿ.ಎಸ್.ಎಸ್. ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬರು. ಸಾಮಗಾನದಿಂದ ಹಿಡಿದು ಚೆಲುವುಒಲವು, ದೇವಶಿಲ್ಪ, ತೀರ್ಥವಾಣಿ, ಕಾರ್ತೀಕ, ದೀಪದಹೆಜ್ಜೆ ಗೋಡೆ, ಪ್ರೀತಿ ಇಲ್ಲದ ಮೇಲೆ ಮತ್ತು ವ್ಯಕ್ತಮಧ್ಯದತನಕ ನಿರಂತರ ಕಾವ್ಯ ಕೃಷಿಯಲ್ಲಿ ತೊಡಗಿದ್ದರು. ನವೋದಯ ಕಾವ್ಯ ಪರಿವರ್ತನೆಯ ಹಾದಿಯಲ್ಲಿದ್ದಾಗ, ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಪಲ್ಲಟಗಳು ಉಂಟಾಗುತ್ತಿದ್ದಾಗ ಶ್ರೀ ಕುವೆಂಪು ಮಾರ್ಗದಲ್ಲಿ ಡಾ.ಶಿವರುದ್ರಪ್ಪನವರು ಕಾವ್ಯಕೃಷಿಯನ್ನು ಪ್ರಾರಂಭಿಸಿದರು. ನವೋದಯದ ಮೊದಲ ತಲೆಮಾರಿನ ಕವಿಗಳಾದ ಕುವೆಂಪು, ಬೇಂದ್ರೆ, ಪುತಿನ ಅವರು ಆಧ್ಯಾತ್ಮಕ್ಕೆ ಹೆಚ್ಚು ಒತ್ತು ಕೊಟ್ಟರೆ, ಎರಡನೆ ತಲೆಮಾರಿನ ಕವಿಗಳಾದ ಕೆ.ಎಸ್.ನ, ಚೆನ್ನವೀರ ಕಣವಿ ಮತ್ತು ಜಿ.ಎಸ್.ಎಸ್. ತಮ್ಮ ಕಾವ್ಯದಲ್ಲಿ ಹೊಸನಂಬಿಕೆ, ಆಶೋತ್ತರಗಳನ್ನು ಪ್ರತಿಬಿಂಬಿಸಿದರು. ಜಿ.ಎಸ್.ಎಸ್. ಅವರ ಕಾವ್ಯದಲ್ಲಿ ವಸ್ತುನಿಷ್ಠ ಮನೋಧರ್ಮ ಪ್ರಧಾನವಾಗಿದೆ. ನಂಬಿದ ನೆಲೆಯನ್ನು ಹಿಡಿದು ಮುನ್ನಡೆಯುವ ಛಲ, ಅದಮ್ಯವಾದ ಆಶಾವಾದ ಜಿ.ಎಸ್.ಎಸ್. ಕಾವ್ಯದಲ್ಲಿ ಕಂಡುಬರುತ್ತದೆ. ಆದ್ದರಿಂದಲೇ ಅವರ ಕಾವ್ಯ ಬೆಳಕಿನ ಪ್ರತಿಮೆಗಳಿಂದ ಕಿಕ್ಕಿರಿದಿದೆ. ಮನುಷ್ಯ ಇಕ್ಕಟ್ಟು, ಒತ್ತಡ, ಬಂಧನಗಳಿಗೆ ಸಿಕ್ಕಿದ್ದಾನೆ. ಇದನ್ನು ಮೀರಿ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂಬುದೇ ಜಿ.ಎಸ್.ಎಸ್. ಅವರ ಕಾವ್ಯದ ಕೇಂದ್ರ ಆಶಯವಾಗಿದೆ.



ದಿವಂಗತ ಜಿ.ಎಸ್.ಶಿವರುದ್ರಪ್ಪನವರು ಪಕ್ಕಾ ಜಾತ್ಯತೀತ ಮನಸ್ಸಿನವರು. 2006ರಲ್ಲಿ ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಆಯೋಜಿಸಿದ್ದ 'ಎಚ್ಚರಿಕೆ ಸಮಾವೇಶ'ದಲ್ಲಿ ಭಾಗವಹಿಸಬೇಕೆಂದು ಕೇಳಿಕೊಂಡಾಗ ಅನಾರೋಗ್ಯದ ಕಾರಣ ಆಗುವುದಿಲ್ಲ ಎಂದ ಅವರು "ಆದರೆ ಒಂದು ಕವನವನ್ನು ಕೊಡುತ್ತೇನೆ. ಅದನ್ನು ಸಮಾವೇಶದಲ್ಲಿ ಓದಿ" ಎಂದಿದ್ದರು. ಅವರು ಅವತ್ತು ಕಳುಹಿಸಿದ್ದ ಕವನವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಅಗ್ನಿಪರ್ವ



ಕಾಲಿನ ಕೆಳಗೆ ಸಾನಿದುವರೆಗೆ ನಿಂತ ಹಚ್ಚನೆ ಹಸಿರು ಯಾವತ್ತೋ ಮರುಭೂಮಿಯಾಗಿ ಹೋಗಿದೆ. ಮೇಲಿನಾಕಾಶದಲ್ಲಿ ಒಂದಾದರೂ ಮೋಡಗಳಿಲ್ಲ, ತಲೆ ಎತ್ತಿ ನೋಡಿದರೆ ರಣ ಹದ್ದುಗಳ ರೆಕ್ಕೆಯ ನೆರಳು. ನೆಲ ಹತ್ತಿ ಉರಿಯುತ್ತಿದೆ ನಂದಿಸಲು ನೀರೆ ಇಲ್ಲ! ಒಲೆ ಹತ್ತಿ ಉರಿದಡೆ ನಿಲ್ಲಬಹುದಲ್ಲದೆ ಧರೆ ಹತ್ತಿ ಉರಿದಡೆ ಎಲ್ಲೋಡಬಹುದೋ? ಧಗದ್ ಧಗದ್ ಧಗಾಯಮಾನವಾದ ಈ ಬಕಾಸುರ ಬೆಂಕಿಗೆ ಭಯಂಕರ ಹಸಿವು. ತಳಿರುಗಳನ್ನು ಹೂವುಗಳನ್ನು, ಹೀಚುಗಳನ್ನು, ಹಣ್ಣುಗಳನ್ನು ಒಂದೇ ಸಮನೆ ತಿನ್ನುವುದೆ ಕೆಲಸ. ಹೊತ್ತಿಕೊಂಡಿದೆ ಬೆಂಕಿ ಮಂದಿರಕ್ಕೆ, ಮಸೀದಿಗೆ, ಚರ್ಚಿಗೆ, ಚಲಿಸುತ್ತಿರುವ ರೈಲಿಗೆ, ಓಡುತ್ತಿರುವ ಬಸ್ಸಿಗೆ, ಹಾರುವ ವಿಮಾನಕ್ಕೆ, ಆಕಾಶಕ್ಕೆ ಮುಡಿಯೆತ್ತಿ ನಿಂತಿರುವ ಸೌಧಗಳಿಗೆ, ಬಡವರ ಜೋಪಡಿಗಳಿಗೆ, ತಿನ್ನುವ ಅನ್ನಕ್ಕೆ, ಕುಡಿಯುವ ನೀರಿಗೆ, ಉಸಿರಾಡುತ್ತಿರುವ ಗಾಳಿಗೆ, ಬಹುಕಾಲದಿಂದ ಹೇಗೋ ಕಾಪಾಡಿಕೊಂಡು ಬಂದಿರುವ ಪಾರಿವಾಳಗಳ ಕನಸಿನ ಗೂಡಿಗೆ. ಈ ಉರಿವ ಬೆಂಕಿಯ ಸುತ್ತ ಛಳಿ ಕಾಯಿಸಿಕೊಳ್ಳುತ್ತ ಆಗಾಗ ಎಣ್ಣೆ ಹೊಯ್ಯುತ್ತ ಕೂತ ಮಹನೀಯರೆ, ನೀವು ಯಾರು? ಮಾತನಾಡಿಸಲೆಂದು ಬಂದರೆ ಹತ್ತಿರ, ನಿಮಗೆ ಮುಖವೇ ಇಲ್ಲ! ಬರೀ ಮುಖವಾಡ. ಸಾಧ್ಯವೇ ಸಂವಾದ ಮುಖವಾಡಗಳ ಜತೆಗೆ? ಆಡಬೇಕೆಂದಿದ್ದ ಮಾತೆಲ್ಲವೂ ಸವೆದ ನಾಣ್ಯಗಳಾಗಿ ವ್ಯರ್ಥವಾಗಿವೆ ಕೊನೆಗೆ. ಇಷ್ಟೊಂದು ಹತ್ತಿರವಿದ್ದೂ ದೂರಕ್ಕೆ ನಿಲ್ಲುವ ನೆರಳುಗಳೇ ನೀವು ಯಾರು? ಏನೂ ಅನ್ನಿಸುವುದಿಲ್ಲವೇ ನಿಮಗೆ ನಿರ್ದಯವಾಗಿ ದಹಿಸುತ್ತಿರುವ ಈ ಬೆಂಕಿಯನ್ನು ಕುರಿತು. ಏನೂ ಅನ್ನಿಸುವುದಿಲ್ಲವೇ ಈ ಅಗ್ನಿಯಲ್ಲಿ ದಗ್ಧವಾಗುತ್ತಿರುವ ಸರ್ವೋದಯದ ಸ್ವಪ್ನಗಳನ್ನು ಕುರಿತು? ಏನೂ ಅನ್ನಿಸುವುದಿಲ್ಲವೇ ನಿಮಗೆ ರಕ್ತಸಿಕ್ತವಾಗುತ್ತಿರುವ ಈ ಚರಿತ್ರೆಯನ್ನು ಕುರಿತು? ಏನೆಂದು ಗುರುತಿಸಲಿ ಹೇಳಿ ನಿಮ್ಮನ್ನು? ಈ ಮಹಾಜನದ ಪ್ರತಿನಿಧಿಗಳೆಂದೇ? ಗದ್ದುಗೆ ಏರಿ ಕೂತಿರುವ ಪ್ರಭುಗಳೆಂದೇ? ಅಥವಾ ನಮ್ಮೊಳಗೆ ಮನೆ ಮಾಡಿರುವ ತಲಾ ತಲದ ವಿಕೃತಿಗಳ ಮೂರ್ತರೂಪಗಳೆಂದೆ? ಹಳೆಯ ಗುಡಿಗೋಪುರದ ಕಲಶಗಳನ್ನು ಈಟಿಯ ಮಾಡಿ ನೀಲಾಕಾಶದೆದೆ ಸೀಳಿ ಕತ್ತಲನು ಕರೆದವರೆ, ಗರ್ಭಗುಡಿಯೊಳಗುರಿವ ನಂದಾದೀಪಗಳಿಂದ ಪಂಜು ಹೊತ್ತಿಸಿಕೊಂಡು ದೆವ್ವಂಗುಣಿವ ತಮಸ್ಸಿನಾರಾಧಕರೆ, ಹಿಂಸಾರತಿಯ ಪೂಜಾರಿಗಳೆ, ಎಲ್ಲಿದ್ದರೂ ನೀವು ಒಂದೆ ಜಾತಿಯ ಜನವೆ! ಜಗತ್ತಿನಾದ್ಯಂತ ಭಯೋತ್ಪಾದನೆಯ ಬಲೆನೆಯ್ದು ಪೆಡಂಭೂತ ಜೇಡಗಳೆ, ಏನಾಗಿದೆ ನಿಮಗೆ, ಇನ್ನೂ ಏನಾಗಬೇಕಾಗಿದೆ ಈ ಮನುಕುಲಕ್ಕೆ? ಪಾಚಿಗಟ್ಟುತ್ತಿರುವ ಈ ನೀರುಗಳನ್ನು ಶುದ್ಧೀಕರಿಸುವುದು ಹೇಗೆ? ಶತಚ್ಛಿದ್ರವಾಗುತ್ತಿರುವ ಈ ಮನಸ್ಸುಗಳನ್ನು ಹಿಡಿದು ಕೂಡಿಸುವುದು ಹೇಗೆ? ಪುರಾಣಗಳಲ್ಲಿ ಸ್ಥಗಿತಗೊಳ್ಳುತ್ತಿರುವ ಬುದ್ಧಿಗಳನ್ನು ವರ್ತಮಾನದ ವಾಸ್ತವದೊಳಕ್ಕೆ ತರುವುದು ಹೇಗೆ? ಗುಡಿ-ಚರ್ಚು ಮಸಜೀದಿಗಳನ್ನು ಬಿಟ್ಟು ಹೊರ ಬರುವಂತೆ ಮಾಡುವುದು ಹೇಗೆ? ವೇದ-ಖುರಾನು-ಬೈಬಲ್ಲಿನಿಂದಾಚೆ ಬಯಲ ಬೆಳಕಿನ ಕೆಳಗೆ ಬದುಕುವುದನ್ನು ಇನ್ನಾದರೂ ಕಲಿಯುವುದು ಹೇಗೆ?

■ ಜಿ.ಎಸ್. ಶಿವರುದ್ರಪ್ಪ

ಾರೋ ಬಡಿಯುತ್ತಿದ್ದಾರೆ / ಬಾಗಿಲ ಹೊರಗೆ ಒಂದೇ ನೆ / ಏಳು ಬಾಗಿಲ ತೆಗೆ / ಹೆದರದಿರು ಕೊನೆಗೆ." ಸಾಲುಗಳಲ್ಲಿ ಜಿ.ಎಸ್.ಎಸ್. ಅವರು ಬದುಕಿನ ಾಧತೆಯನ್ನು ವ್ಯಕ್ತಪಡಿಸಿದ್ದಾರೆ. ಮಬ್ಬಿನಿಂದ ಬಂದಿದ್ದೇವೆ, ನ್ನಿನ ಕಡೆಗೆ ಚಲಿಸುತ್ತೇವೆ. ಇದರ ನಡುವೆ ನಡೆಯುವ ಂಖ್ಯ ವಿದ್ಯಮಾನಗಳನ್ನು ನಾವು ನಿರಾಕರಿಸುವ ುಲ್ಲಿಲ್ಲ. ಮಾನವನ ಮಿತಿಯನ್ನು, ಅಸಹಾಯಕತೆಯನ್ನು ಬಿಸುವ ಈ ಕವಿತೆ ಕೊನೆಗೆ ಆಶಾವಾದದ ಕಡೆಗೆ ಸುತ್ತದೆ. ರಾಕ್ಷಸೀ ರೂಪದಲ್ಲಿ ಬೆಳೆಯುತ್ತಿರುವ ನಗರದ ುಕಿಗೆ ಜಿ.ಎಸ್.ಎಸ್. ಅವರಂತೆ ಅಭಿವ್ಯಕ್ತಿ ನೀಡಿರುವ ಗಳು ವಿರಳ. ನಗರದ ಜೀವನ ಮಮತೆ, ಸ್ನೇಹ, ್ಯಾನ್ಯತೆಯನ್ನು ಕಳೆದುಕೊಂಡು ಯಾಂತ್ರಿಕವಾಗಿದೆ. ಹೀಯವಾಗಿದೆ. ಜಿ.ಎಸ್.ಎಸ್. ಕವಿತೆಗಳಲ್ಲಿ ಈ ಅಂಶ ಂತ ಮಾನವೀಯವೂ ಮಾರ್ಮಿಕವೂ ಆದ ರೀತಿಯಲ್ಲಿ ವ್ಯಕ್ತಿ ಪಡೆದಿದೆ. ಇದಕ್ಕೆ ಮುಂಬೈ ಜಾತಕ ಕವಿತೆಯ ುಕನ ಬದುಕು ಒಳ್ಳೆಯ ಉದಾಹರಣೆ;

ಹುಟ್ಟಿದ್ದು: ಆಸ್ಪತ್ರೆಯಲ್ಲಿ

ಬೆಳೆದದ್ದು: ಬಸ್ಸು, ಟ್ರಾಂ, ಕಾರುಟಾಕ್ಸಿ, ಎಲೆಕ್ಟ್ರಿಕ್ ುಗಳಲ್ಲಿ,


ಕುಡಿದದ್ದು: ಕಾಣದೆಮ್ಮೆಯ ಕೆಚ್ಚಲು ಕರೆದು ಕಳಿಸಿದ ್ಲಿ ಹಾಲು; ಗ್ರೈಪ್ ಸಿರಪ್, ಹಾರ್ಲಿಕ್ಸ್ ಇತ್ಯಾದಿ.

ಕಂಡದ್ದು: ಬೆಳಗಿನಿಂದ ಸಂಜೆಯತನಕ ಲಕ್ಷಚಕ್ರದ ಾಳು. ಅವಸರದ ಹೆಜ್ಜೆಯ ಮೇಲೆ ಸರಿವ ಸಾವಿರ ್ತಳು.

ಕಲಿತದ್ದು: ಕ್ಯೂ ನಿಲ್ಲು, ಘುಟ್ಪಾತಿನಲ್ಲೇ ಸಂಚರಿಸು, ದಾಟುವಾಗೆಚ್ಚರಿಕೆ, ಎಲ್ಲಿಯೂ ನಿಲ್ಲದಿರು.

ಹೀಗೆ ತನ್ನತನವನ್ನು ಕಳೆದುಕೊಂಡು ಮಾನವೀಯ ಂಧಗಳು ಕಣ್ಮರೆಯಾಗಿ, ಯಾರೂ ಯಾರನ್ನು ನಂಬದ ಿನಿಕ ಬದುಕಿನ ವಾತಾವರಣವನ್ನು ಈ ಕವಿತೆ ಸುತ್ತದೆ.

ರೂಪಕ ಒಂದರ ಸುತ್ತ ಜಿ.ಎಸ್.ಎಸ್. ಅವರ ಕವಿತೆ ುಯುವ ಕ್ರಮ ವಿಶಿಷ್ಟವಾಗಿದೆ. ಲಲನೆಯರ ಬೆನ್ನಿನೆಡೆ ಸೆನೊಲು ಜೋಲ್ವಜಡೆ- ಇಲ್ಲಿ ಆಕರ್ಷಣೆಯ ಜೊತೆಗೆ ರ್ಗಣೆಯೂ ಇದೆ. ಎಣ್ಣೆ ಕಾಣದೆ ಹಿಣಿಲು ಹಿಣಿಲಾಗಿ ಿದ ಜಡೆ ಎನ್ನುವಲ್ಲಿ ಸಂಕೀರ್ಣ ಸಮಾಜ ವ್ಯವಸ್ಥೆಯ ಂಧ್ಯಗಳನ್ನು ಹೇಳಿದ್ದಾರೆ. ಭಾಗವತ, ರಾಮಾಯಣ, ಾಭಾರತಗಳ ಚಿತ್ರ ಕೊಡುವ ಈ ಕವಿತೆ "ಜಡೆಯಾಚೆ ಗಿಸಿದ / ತಾಯಿ ಮುಖ ಮಾತ್ರ / ಇಂದಿಗೂ



ದಲ್ಲ" ಎಂದು ಹೇಳುವ ಮೂಲಕ ನಿಗೂಢವಾಗುತ್ತದೆ. ತೆಂಗಿನ ಮರ ಜಿ.ಎಸ್.ಎಸ್. ಅವರಿಗೆ ಆದರ್ಶ. ಂ ನೆಲದಾಳಕ್ಕೆ ಬೇರು ಬಿಟ್ಟು ಮುಗಿಲಿನೆತ್ತರ ಬೆಳೆದ . ಅದಕ್ಕೆ ಎದೆ ಸೆಟೆದು ನಿಲ್ಲುವ ಸ್ವತಂತ್ರ ವ್ಯಕ್ತಿತ್ವ "ಇದ್ದಕ್ಕಿದ್ದಂತೆ ಗರಿಗಳ ಕಳಚಿ ದಡಾರನೆ ಎಸೆದು / ಯಲ್ಲಿ ನಸುನಕ್ಕು ನಿಲ್ಲುವ ಭಂಗಿಯೇ ಭಂಗಿ/ ದೊಳಿದ್ದೂ ಸದಾ ನಿಸ್ಸಂಗಿ/ ಯಾವ ಕ್ಷಣವಾದರೂ ಕೊಂಡದ್ದೆಲ್ಲ ಬಿಟ್ಟು ನಿಲ್ಲಲು ಸಿದ್ಧ/ ನೆನಪಾಗುವರು ುದ್ಧ" ಜಿ.ಎಸ್.ಎಸ್. ಅವರ ವ್ಯಕ್ತಿತ್ವದ ವಿಕಸನ ತೆಯನ್ನು, ಅವರ ಜೀವನ ಧೋರಣೆಯನ್ನು ಅಭಿವ್ಯಕ್ತಿ ಸುವ ಕವಿತೆ ಇದಾಗಿದೆ. ಜಿ.ಎಸ್.ಎಸ್. ನಂಬಿಕೆಯನ್ನು ವಾಗಿಸುವ, ಸಮಕಾಲೀನ ಬದುಕಿನಲ್ಲಿ ಅರ್ಥಪೂರ್ಣತೆ ್ನ ಹಂಬಲಿಸುವ ಕವಿ. ಜಿ.ಎಸ್.ಎಸ್. ಅನೇಕ ಸಾದ ಭಾವಗೀತೆಗಳನ್ನು ಬರೆದು ಮನೆಮಾತಾಗಿದ್ದಾರೆ. ುಂಬಿ ಹಾಡಿದೆನು, ಪ್ರೀತಿ ಇಲ್ಲದ ಮೇಲೆ, ಹುಡುಗಣ ್ತ, ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೇ, ರಂಗನಾಥನ ೀಗನಿದ್ರೆಗೆ, ವೇದಾಂತಿ ಹೇಳಿದನು, ಹಾಡು ುದಾದರೇನು, ಶತಮಾನದಿಂದ ಹತಭಾಗ್ಯರಾಗಿ ಾದ ಭಾವಗೀತೆಗಳು ಜನಮಾನಸದಲ್ಲಿ ಬೇರೂರಿ ಎಸ್. ಕನ್ನಡಿಗರ ಪ್ರೀತಿ, ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಕನ್ನಡ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗೆ ಜಿ.ಎಸ್.ಎಸ್. ನೀಡಿದ ಕೊಡುಗೆ ಅನನ್ಯವಾಗಿದೆ. ರಿಯರ್ ಸಮೀಕ್ಷೆ, ಕಾವ್ಯಾರ್ಥ ಚಿಂತನ, ವಿಮರ್ಶೆಯ ಪರಿಭಾಷೆ, ಪಂಪಾಯಾತ್ರೆ, ಸಮೀಕ್ಷೆ- ಮೀಮಾಂಸೆಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿದೆ. ಮೂಲಕ ಜಿ.ಎಸ್.ಎಸ್. ಕನ್ನಡ ಕಾವ್ಯಮೀಮಾಂಸೆಗೆ

ಹೊಸ ಆಯಾಮ ತಂದುಕೊಟ್ಟರು. ವಿಮರ್ಶಾ ಕ್ಷೇತ್ರದಲ್ಲಿ ಪ್ರಾಚೀನ, ಆಧುನಿಕ ಕಾವ್ಯಗಳೆರಡಕ್ಕೂ ಹೊಸದೃಷ್ಟಿಕೋನ, ನೆಲೆಗಳನ್ನು ನಿರ್ಮಿಸಿದರು. ಪರಿಶೀಲನ, ನವೋದಯ, ಅನುಸಂಧಾನ ಮುಂತಾದ ಕೃತಿಗಳು ಇದಕ್ಕೆ ಉದಾಹರಣೆ ಆಗಿವೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದಾಗ ನಡೆಸಿದ ವಿಚಾರಸಂಕಿರಣಗಳು ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ದಾಖಲಾಗಿವೆ. ಭಿನ್ನಾಭಿಪ್ರಾಯವುಳ್ಳ ವಿದ್ವಾಂಸರು ನಾಡಿನ ಎಲ್ಲೆಡೆಯಿಂದ ಬಂದು ಭಾಗವಹಿಸುತ್ತಿದ್ದರು. ಜಿ.ಎಸ್.ಎಸ್. ಭಿನ್ನಭಿನ್ನ ವಿಚಾರಧಾರೆ, ದೃಷ್ಟಿಕೋನಗಳನ್ನು ಸಂಯೋಜಿಸಿ ಈ ವಿಚಾರ ಸಂಕಿರಣಗಳನ್ನು ಸಮಕಾಲೀನ ಚರ್ಚಾವೇದಿಕೆಯನ್ನಾಗಿ ಮಾಡಿದ್ದು ಅಪೂರ್ವ ಸಾಧನೆ. ತನಗೆ ವೈಯಕ್ತಿಕವಾಗಿ ಒಪ್ಪಿಗೆಯಾಗದ ಇನ್ನೊಂದು ಚಿಂತನಾಕ್ರಮದೊಂದಿಗೆ ಸಂವಾದ ಮತ್ತು ಸಹಯೋಗವನ್ನು ಏರ್ಪಡಿಸಿದ ಜಿ.ಎಸ್.ಎಸ್. ಅವರು ಭಿನ್ನವಿದ್ದರೂ ಬೆರೆಯಬಹುದು ಎಂಬುದನ್ನು ಸಾಧಿಸಿ ತೋರಿಸಿದರು. ಜಿ.ಎಸ್.ಎಸ್. ಅವರ ಈ ಕ್ರಮ ನಾಡಿನಾದ್ಯಂತ ಆರೋಗ್ಯಕರ ಚರ್ಚೆಗೆ ದಾರಿಯಾಯಿತು. ಪಂಪನೊಟ್ಟಿಗೆ ಷೇಕ್ಸ್‌ಪಿಯರ್‌ನನ್ನು, ಅಲ್ಲಮನೊಟ್ಟಿಗೆ ಕಾರ್ಲ್‌ಮಾರ್ಕ್ಸ್‌ನನ್ನು ಇಟ್ಟು ನೋಡಬಲ್ಲ ಶಕ್ತಿ ಕನ್ನಡಿಗರಿಗೆ ಬಂದಿದ್ದರೆ ಅದಕ್ಕೆ ಡಾ. ಜಿ.ಎಸ್. ಶಿವರುದ್ರಪ್ಪನವರೇ ಕಾರಣ ಎಂಬ ಮಾತು ಉತ್ಪ್ರೇಕ್ಷೆಯಲ್ಲ. ಕರ್ನಾಟಕ ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾಗಿದ್ದಾಗ ಡಾ. ಜಿ.ಎಸ್.ಎಸ್. ಕನ್ನಡ ಪ್ರಕಟಣೆಗಳಿಗೆ ಹೊಸ ಆಯಾಮವನ್ನು, ವೈಚಾರಿಕ ಆಕೃತಿಯನ್ನು ತಂದರು ಎಂದರೆ ಅತಿಶಯೋಕ್ತಿಯಲ್ಲ. ಭಾರತೀಯ ಸಾಹಿತ್ಯದ ಇತಿಹಾಸದ ಸಂಪುಟಗಳನ್ನು ಕನ್ನಡಕ್ಕೆ ತಂದದ್ದಲ್ಲದೆ 'ಸಾಲು ದೀಪಗಳು' ಕೃತಿಯನ್ನೂ ಪ್ರಕಟಿಸಿದರು. ಆಗ ನಾನು ಕೂಡ ಸಾಹಿತ್ಯ ಅಕಾಡಮಿಯ ಸದಸ್ಯನಾಗಿದ್ದೆ. ವಿಧಾನ ಪರಿಷತ್ತಿನ ಸದಸ್ಯನಾಗಿದ್ದುದರಿಂದ ನಾನು ಸಭೆಗಳಿಗೆ ಹೆಚ್ಚಾಗಿ ಬರಲಾಗುತ್ತಿರಲಿಲ್ಲ. ಆಗ ಸದಸ್ಯರಾಗಿದ್ದ ಶೂದ್ರ ಶ್ರೀನಿವಾಸರು ಜಿ.ಎಸ್.ಎಸ್. ಅವರ ಬಲಗೈ ಬಂಟನಾಗಿ ಕೆಲಸ ಮಾಡಿದರು. ಜಿ.ಎಸ್.ಎಸ್. ಅವರೊಂದಿಗೆ ಅಕಾಡಮಿ ಸದಸ್ಯರುಗಳೆಲ್ಲ ಮೈಸೂರಿನಲ್ಲಿ ಮಹಾಕವಿ ಕುವೆಂಪು ಅವರನ್ನು ಭೇಟಿ ಮಾಡಿ ಅವರ ಜೊತೆ ಫೋಟೋ ತೆಗೆಸಿಕೊಂಡದ್ದು ಒಂದು ವಿಶೇಷ. ಸಮಕಾಲೀನವಾದ ಎಲ್ಲ ಸಾಹಿತ್ಯಿಕ ಮತ್ತು ಸಾಮಾಜಿಕ ಚಳವಳಿಗಳೊಂದಿಗೆ ನಿರಂತರ ಸಂಪರ್ಕ ಹೊಂದಿ, ಸಕಾರಾತ್ಮಕವಾಗಿ ಸ್ಪಂದಿಸಿ, ಮಾರ್ಗದರ್ಶನ ಮಾಡಿದ್ದು ಜಿ.ಎಸ್.ಎಸ್. ಅವರ ಹೆಗ್ಗಳಿಕೆ. ಈಗ ಒಂದು ಹೊಸ ಜಗತ್ತನ್ನು ಕಟ್ಟಬೇಕಾಗಿದೆ. ಅದಕ್ಕೆ ಬೇಕಾಗಿರುವ ಮೂಲದ್ರವ್ಯ ಮನುಷ್ಯನ ಒಳ್ಳೆಯತನ. ಅದರ ಬಗ್ಗೆ-ಅಂದರೆ ಮನುಷ್ಯನ ಒಳ್ಳೆಯತನದ ಬಗ್ಗೆ - ನನಗೆ ಗಾಢವಾದ ನಂಬಿಕೆ ಇದೆ ಎಂದು ಜಿ.ಎಸ್.ಎಸ್. ಹೇಳಿದ್ದಾರೆ. "ಎಲ್ಲೋ ಹುಡುಕಿದೆ ಇಲ್ಲದ ದೇವರ/ ಕಲ್ಲು ಮಣ್ಣುಗಳ ಗುಡಿಯೊಳಗೆ / ಇಲ್ಲೇ ಇರುವ ಪ್ರೀತಿಸ್ನೇಹಗಳ ಗುರುತಿಸದಾದೆನು ನಮ್ಮೊಳಗೆ" ಈ ಸಾಲುಗಳನ್ನು ಕೇಳಿದಾಗ ಜಿ.ಎಸ್.ಎಸ್ ಅವರ ಕಾವ್ಯ ಮಾನವಸಂಬಂಧಗಳ ಉತ್ಸವ ಎಂಬುದು ಅರಿವಾಗುತ್ತದೆ.

ಜಿ.ಎಸ್.ಎಸ್. ಅವರು ಮಹಾನ್ ಕನ್ನಡ ಪ್ರೇಮಿ ಅಲ್ಲದೆ ಕನ್ನಡ ಸಂಸ್ಕೃತಿಯನ್ನು ಕಟ್ಟಲು ಅವರ ಶಿಷ್ಯಕೋಟಿಯನ್ನು ಪ್ರೇರೇಪಿಸಿದರು. ಜಿ.ಎಸ್.ಎಸ್. ಅವರು ಒಂದು ಕಡೆ, "ನಿಜ; ರಾಜ್ಯೋದಯವಾಗಿದೆ ಹೊರಗೆ/ ಇನ್ನೂ ಕನ್ನಡ ರಾಜ್ಯೋದಯವಾಗುವುದಿದೆ / ನಮಗೂ ನಿಮಗೂ ಒಳಗೆ" ಎಂದು ಹೇಳಿದ್ದಾರೆ. ಜಿ.ಎಸ್.ಎಸ್. ಅವರು ದಲಿತ ಬಂಡಾಯ ಸಾಹಿತ್ಯ ಚಳವಳಿಗೆ ಸಂಪೂರ್ಣ ಬೆಂಬಲ ಕೊಟ್ಟು ಪ್ರೋತ್ಸಾಹಿಸಿದರು. ನನ್ನ ಡಾಕ್ಟರೇಟ್ ಸಂಶೋಧನೆಗೆ ಮಾರ್ಗದರ್ಶಕರಾಗಿದ್ದರು ಮತ್ತು ನನ್ನ ಅನ್ನದಾತರಾಗಿದ್ದರು ಎಂಬುದು ನನಗೆ ಹೆಮ್ಮೆಯ ವಿಷಯ. ಅವರ ಬದುಕು ಮತ್ತು ಸಾಧನೆ ಮತ್ತು ನನಗೆ ಮಾಡಿದ ಉಪಕಾರವನ್ನು ನೆನೆದು ಕೃತಜ್ಞತೆಯ ಕಂಬನಿಯೊಂದಿಗೆ ಅವರ ಆಶಯಗಳ ಅನುಷ್ಠಾನಕ್ಕೆ ಬದ್ಧನಾಗಿರುತ್ತೇನೆ.



■ ಡಾ. ಸಿದ್ಧಲಿಂಗಯ್ಯ

ನನ್ನ ಓದಿನ ಎಳೆಹರೆಯ ಕಾಲದ 'ಮಾರ್ಗದರ್ಶಕ'

ಜಿ.ಎಸ್.ಎಸ್ ಶ್ರದ್ಧಾಂಜಲಿ



ಜಿ.ಎಸ್.ಶಿವರುದ್ರಪ್ಪ ಅವರು ನನ್ನ ಮೇಷ್ಟ್ರು. ಅವರನ್ನು ನಾನು ಮೊದಲ ಬಾರಿ ಕಂಡಿದ್ದು ಒಂದು ಯೋಗಾಯೋಗವೆಂದೇ ಹೇಳಬೇಕು. ನನ್ನಲ್ಲಿ ಚಿಕ್ಕಂದಿನಿಂದಲೂ ಒಳಬಯಕೆಯಾಗಿದ್ದ ಸಾಹಿತ್ಯದ ಆಸಕ್ತಿಯು, ವಿಜ್ಞಾನದ ಮುಖ್ಯದಾರಿಯನ್ನು ಬಿಟ್ಟು ಸಾಹಿತ್ಯದ ಕಡೆಗೆ ಒಂದು ಕಳ್ಳದಾರಿಯನ್ನು ಹುಡುಕಿಕೊಳ್ಳುತ್ತಿತ್ತು. ಕದ್ದುಮುಚ್ಚಿ ವಿಜ್ಞಾನದ ಪುಸ್ತಕದೊಳಗೆ ಎಸ್.ನರಸಿಂಹಯ್ಯ, ಜೇಮ್ಸ್ ಹ್ಯಾಡ್ಲಿ ಚೇಸ್ ಓದುತ್ತಿದ್ದವನು, ಕಾರಂತರ ಕಡೆಗೆ ಗಮನ ಹಾಯಿಸಿ ಕಾರಂತ ಕಾದಂಬರಿಗಳ ಲೋಕದಲ್ಲಿ ಮುಳುಗಿಹೋಗುತ್ತಿದ್ದೆ. ತ್ರಿವೇಣಿ, ಭೈರಪ್ಪನವರು ಬಂದುಹೋಗುತ್ತಿದ್ದರೂ ಕಾರಂತರು ಆ ಕಲ್ಪನಾಲೋಕದ ಸ್ಥಾಯಿಭಾವವಾಗಿದ್ದರು. ಮೆಡಿಕಲ್ ಓದಲು ಕಳುಹಿಸಬೇಕೆನ್ನುವ ನನ್ನ ಅಪ್ಪನ ಆಸೆಗೆ ತಣ್ಣೀರು ಎರಚಿ ನಾನು ಪಿಯುಸಿ ಆದಕೂಡಲೇ ಕನ್ನಡ ಮತ್ತು ಇಂಗ್ಲಿಷ್ ಆನರ್ಸ್‌ಗೆ ಅರ್ಜಿ ಗುಜರಾಯಿಸಿದ್ದೆ. ಎರಡರಲ್ಲೂ ಹೆಸರಿನ ಪಟ್ಟಿಯಲ್ಲಿ ಒಂದನೇ ಹೆಸರು ನನ್ನದು. ಕಾರಂತರ ಕಾರಣದಿಂದ ಒಲವು ಕನ್ನಡದ ಕಡೆಗಿತ್ತು. ಟಾಲ್‌ಸ್ಟಾಯ್, ದಸ್ತೊವೆಸ್ಕಿ ಕಥೆಗಳು ನನ್ನನ್ನು ಸೆಳೆದಿದ್ದಾದರೂ ಕಾರಂತರು ಹಾಕಿದ ಪಟ್ಟು ಗಟ್ಟಿ ಇತ್ತು. ಮೊದಲು ಇಂಗ್ಲಿಷ್ ವಿಭಾಗಕ್ಕೆ ಹೋದೆ. ಸೆಂಟ್ರಲ್ ಕಾಲೇಜು ಆವರಣದಲ್ಲಿ ಪಿ.ಲಂಕೇಶ್ ಅವರ ಒಂದು ಚಿಕ್ಕ ರೂಮು ಇತ್ತು. ಅವರು ಮಾತ್ರ ಕನ್ನಡದಲ್ಲಿ ಮಾತಾಡ್ತಾರೆ, ಅವರನ್ನು ಕಂಡರೆ ಸರಿಯಾದ ದಾರಿ ತೋರಿಸುತ್ತಾರೆ ಎಂದು ಅಲ್ಲಿ ಯಾರೋ ಹೇಳಿದ್ದು ನೆನಪು. ಆ ರೂಮಿಗೆ ಹೋದರೆ ಸಿಗರೇಟು ಹೊಗೆಯ ನಡುವೆ ಲಂಕೇಶ್ ಎನ್ನುವ ವ್ಯಕ್ತಿ ಸಿಡಿಮಿಡಿಗೊಂಡು ಮಾತನಾಡಲಿಕ್ಕೆ ಬಿಡದೆ ಕಳುಹಿಸಿದ್ದು, ಸೀದಾ ಜಿಎಸ್‌ಎಸ್ ಅವರ ಬಳಿಗೆ ಬರುವಂತೆ ಮಾಡಿತ್ತು.

ಸಾವಧಾನವಾಗಿ ಮಾತನಾಡಿ, ಕೂಡಿಸಿ, "ಕನ್ನಡದಲ್ಲಿ ಮೊದಲು ಮುಳುಗು, ಆಮೇಲೆ ಎಲ್ಲಾ ಕಡೆ ಈಜಲಿಕ್ಕೆ ಬರುತ್ತೆ ಮಗು" ಎಂದರು ಜಿಎಸ್‌ಎಸ್. ಹದಿನಾರನೇ ವಯಸ್ಸಿನ ನನಗೆ, ಅವರು ಪ್ರೀತಿಯಿಂದ ಕರೆದು ಮಾತನಾಡಿ ಕಲಿಸಿದ್ದು ಕನ್ನಡವನ್ನು, ಸಾಹಿತ್ಯವನ್ನು, ಲೋಕವನ್ನು ಎದುರಿಸಿಯಾದರೂ ಓದಬೇಕೆಂಬ ಅದಮ್ಯ ಆಸೆಯನ್ನು ಮೂಡಿಸಿತು. "ಕಾರಂತರನ್ನು ಓದಿದ್ದೇನೆ" ಎಂದು ಅವರಿಗೆ ಹೇಳಿದಾಗ ಅವರು "ಕಡಲು ನೋಡಿದ್ದೀಯಾ?" ಎಂದು ಕೇಳಿದ್ದು ಇನ್ನೂ ಸ್ಪಷ್ಟವಾಗಿ ನೆನಪಿದೆ. ನಾನು "ಇಲ್ಲ ಕಾರಂತರಲ್ಲಿ ಕಂಡಿದ್ದೇನೆ" ಎಂದಿದ್ದೆ. ಕುವೆಂಪು, ಬೇಂದ್ರೆಯವರ ಬಗ್ಗೆ ಕೇಳಿದರು. ಓದಿಲ್ಲ ಅಂತ ಹೇಳಿದ್ದೆ. "ಕರ್ನಾಟಕ, ಕನ್ನಡ ತಿಳೀಬೇಕಾದ್ರೆ ಈ ಮೂವರು ಬೇಕು" ಅಂದಿದ್ದರು. ಘಟ್ಟ, ಮಲೆನಾಡು, ಬಯಲುಸೀಮೆ - ಕನ್ನಡದ ಮೂರು ಅನುಭವಗಳಾಗಿ ನನ್ನ ಒಳಗೆ ಇಳಿಯಬೇಕಾದ ಅಂಶವನ್ನು ಬಹಳ ಸರಳವಾಗಿ ಮನದಟ್ಟು ಮಾಡಿಕೊಟ್ಟಿದ್ದರು.

ಜಿ.ಎಸ್.ಶಿವರುದ್ರಪ್ಪ ಅವರ ಕನ್ನಡ ಸಾಹಿತ್ಯ ಅಧ್ಯಯನದಲ್ಲಿ ಕನ್ನಡದ ಚಂಪೂ ಕ್ಲಾಸಿಕಲ್ ಕವಿಗಳಷ್ಟು ವಚನಕಾರರಾಗಲೀ, ದೇಸೀ ಛಂದಸ್ಸಿನ ಕವಿಗಳಾಗಲೀ ಲಕ್ಷ ಸೆಳೆದದ್ದು ಇಲ್ಲ. ಜಿಎಸ್‌ಎಸ್ ಅವರ ಕಾವ್ಯ ಕೃಷಿಗೂ, ಕನ್ನಡದ ಚಂಪೂ ಕವಿಗಳ ಕಾವ್ಯ ರಚನೆಗೂ ಒಂದು ಪ್ರಮುಖ ಸಾಮ್ಯ ಇದೆ. ನಮ್ಮ ಚಂಪೂ ಕವಿಗಳಾದ ಪಂಪ,ನಾಗಚಂದ್ರ, ನಾಗವರ್ಮರು ಅನುಭವವನ್ನು ಶಬ್ದಾಲಂಕಾರ ಗಳಲ್ಲಿ ಹಿಡಿಯುವ ಪ್ರಯತ್ನದಿಂದ ಕವಿ ಪಾಂಡಿತ್ಯವನ್ನು ಸಾಧಿಸಲು ಪ್ರಯತ್ನಿಸಿದರು. ಅವರ ಹಾಗೆಯೇ ಅನುಭವವನ್ನು ಭಾಷಿಕ ಲಯದಲ್ಲಿ ಹಿಡಿಯುವುದು ಕವಿ ಶಿವರುದ್ರಪ್ಪನವರ ಅಭಿವ್ಯಕ್ತಿಯ ಮುಖ್ಯ ಕ್ರಮವೂ ಆಗಿತ್ತು. ಓದುಗರಿಗೆ ಅಥವಾ ಕೇಳುವವರಿಗೆ ಅದು ಒಂದು ಚಮತ್ಕಾರವಾಗಿ ಒಳಹೋಗುತ್ತಿತ್ತು. ಆನರ್ಸ್ ಓದುವಾಗ ನಮಗೆ ಜಿಎಸ್‌ಎಸ್ ಅವರು ಪಂಪನ ಕಾವ್ಯ ಪಂಪ ಭಾರತದ ಯುದ್ಧ ಪ್ರಸಂಗದಲ್ಲಿ, ಯುದ್ಧ ಭೂಮಿಯಲ್ಲಿ ರಥದ ಚಕ್ರವು ಹೋಗುವ ರೀತಿಯನ್ನು ಪಂಪ ಒಂದು ವೃತ್ತದಲ್ಲಿ ಕೇವಲ 'ಟ'ಕಾರದ ಮೂರ್ಧನ್ಯಗಳನ್ನು ಬಳಸಿ ಚಲನೆಯ ಧ್ವನಿಯನ್ನು ಕೇಳಿಸುತ್ತಾನೆ. ಅದನ್ನು ಹದಿಹರೆಯದ ನಮಗೆ ಕಿವಿ, ಕಣ್ಣಿಗೆ ತಟ್ಟುವ ಹಾಗೆ ಹೇಳುತ್ತಿದ್ದರು ಶಿವರುದ್ರಪ್ಪನವರು. ಜಿಎಸ್‌ಎಸ್ ಅವರ ಕವನಗಳ ಪ್ರಧಾನ ಶ್ರುತಿಯೂ ಇದೇ ಆಗಿದೆ ಎನ್ನುವುದು ನನ್ನ ಭಾವನೆ. ಅವರ 'ಒಳದನಿ' ಕವನದ ಒಂದು ಭಾಗ ನೋಡಿ.

ಹಾರದಿರು ಹಾರದಿರು ಈಗಲೇ ಹಾರದಿರು
ಅನಂತ ವಿಸ್ತಾರದ ನೀಲನಭಕೆ
ರೆಕ್ಕೆ ಬಲಿಯದ ಮುನ್ನ, ಪುಕ್ಕಬೆಳೆಯದ ಮುನ್ನ
ಹಾರಲೆಳಸುವೆಯೇಕೆ
ಈ ನೀಲ ನಭಕೆ?
ಪುಟ್ಟ ಹಕ್ಕಿಯ ಅನುಭವವನ್ನು ಕವನದ ಭಾಷೆಯಲ್ಲಿ

ಭಾವವಾಗಿಸಿ ಅರ್ಥೈಸುವ ಈ ಧಾಟಿಯು ಜಿಎಸ್‌ಎಸ್ ಅವರ ಕವನಗಳ ಪ್ರಮುಖ ಸ್ರೋತವಾಗಿದ್ದುದರಿಂದ ಅವುಗಳು ಕೇಳುಗರ, ಓದುಗರ ಕಣ್ಣಿಗೆ, ಕಿವಿಗೆ ಥಟ್ಟೆಂದು ಒಳಹೋಗುವಂತಾಗಿ, ಜನಪ್ರಿಯಗೊಂಡವು. ಆನರ್ಸ್‌ನಲ್ಲಿ ಚಂಪೂ ಕವಿಗಳಂಥ ಘಟಾನುಘಟಿಗಳನ್ನು ನಮಗೆ ಹೃದ್ಯವಾಗಿಸಿದ ಜಿಎಸ್‌ಎಸ್ ಅವರ ಓದುವಿಕೆಯ ಈ ತಂತ್ರವು ಅತ್ಯದ್ಭುತ.

ಅಲ್ಲಿಯ ನಾಟಕೀಯತೆ, ಹಾವಭಾವ, ವಿನ್ಯಾಸಗಳನ್ನು ಓದುವುದರ ಮೂಲಕವೇ ನಮ್ಮ ಅನುಭವವಾಗಿಸುತ್ತಿದ್ದವರು ಅವರು. ಜಿಎಸ್‌ಎಸ್ ಅಂಥವರ ಈ ಪಾಠದ ಭಾಷೆಯಿಂದ ನಮಗೆ ಪಂಪನಂಥವರು ದೂರವಾಗಲೇ ಇಲ್ಲ. ಆಗ ನಮ್ಮ ವಿಭಾಗದಲ್ಲಿ 'ನವ್ಯ' ಕಾವ್ಯದ ಪ್ರಭಾವ ಮೆಲ್ಲಗೆ ಸುಳಿಯುತ್ತಿದ್ದ ಕಾಲ. ಎಸ್.ಎಸ್.ಲಕ್ಷ್ಮೀನಾರಾಯಣ ಭಟ್ಟರಿಗೆ ಹೇಗಾದರೂ ಮಾಡಿ ಈ ವಿದ್ಯಾರ್ಥಿಗಳಿಗೆ ನವ್ಯಕಾವ್ಯದ ಹುಚ್ಚು ಹಿಡಿಸಬೇಕೆಂಬ ಹಂಬಲ. 'ಅಡಿಗರ ಆಯ್ದ ಕವನಗಳು' ನಮಗೆ ಪಠ್ಯವಾಗಿ ಇಟ್ಟಿದ್ದರು. ಭಟ್ಟರಿಗೆ ಭೂಮಿಗೀತ ಕವನವನ್ನು ನಮ್ಮಿಂದ ಓದಿಸಬೇಕೆಂಬ ಆಸೆ. ಅದರಲ್ಲಿ ಐದನೇ ಸಾಲು ಬಹುಪಾಲು ಶೂದ್ರ ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆ. ಆ ಸಾಲು ಹೀಗಿದೆ:

'ಕಬ್ಬಿನಾಲೆಯ ತಿರುಪಿನಲ್ಲಿ ಕುಳಿತೆರೆದರು ಅಜಸ್ರಧಾರೆಯ ಕರುಳ ತುಡಿತವನ್ನು' ಈ ಸಾಲು ಬಂದಕೂಡಲೇ 'ಅಜಸ್ರಧಾರೆ' ಎನ್ನುವ ಪದವನ್ನು ಸುಮಾರು ಜನ 'ಅಜಸ್ರಧಾರೆ' ಎಂದೇ ಓದುತ್ತಿದ್ದರು. ಲಕ್ಷ್ಮೀನಾರಾಯಣ ಭಟ್ಟರಿಗೆ ಅದನ್ನು ಪುನಃ ಪುನಃ ಓದಿಸಿ ಸಾಕಾಗಿಹೋಗುತ್ತಿತ್ತು. ಶಿವರಾಂ ಎಂಬ ನನ್ನ ಗೆಳೆಯ "ಬಡ್ಡೆತ್ತದು, ಅದೆಂಥಾ ಪದ ಇಕ್ಕವ್ನೆ ಈ ಕವಿ, ಉಚ್ಚಾರಕ್ಕೂ ಇಲ್ಲ, ಅರ್ಥಕ್ಕೂ ಇಲ್ಲ" ಎಂದು ಹೇಳಿ ಅಡಿಗರನ್ನು ದೂರ ಸರಿಸಿದ್ದ. ಅನುಭವ ಮತ್ತು ಭಾಷಿಕ ಆಕೃತಿಯಲ್ಲಿ ಅದರ ಮೂರ್ತಗೊಳಿಸುವಿಕೆಯ ಈ ತಂತ್ರದಿಂದಾಗಿ ನಮಗೆ ಪಂಪ, ಕುವೆಂಪು, ಶಿವರುದ್ರಪ್ಪ ಆಗ ಬಹಳ ಹತ್ತಿರವಾದರು.

ಜಿಎಸ್‌ಎಸ್ ಅವರಿಗೆ ವಿದ್ಯಾರ್ಥಿಗಳ ಬುದ್ಧಿಮಟ್ಟ ಹೆಚ್ಚುವುದಕ್ಕೆ ವಿಭಿನ್ನ ಶಿಸ್ತುಗಳ ಅಧ್ಯಯನದ ಅಗತ್ಯ ಅನಿವಾರ್ಯವೆನ್ನುವುದು ಗೊತ್ತಿತ್ತು. ಹೀಗಾಗಿ ನಾವು ಆನರ್ಸ್ ಮುಗಿಸುವುದರಲ್ಲಿ ಸಂಸ್ಕೃತ, ಹಿಂದಿ, ಕನ್ನಡ ಭಾಷೆಯ ಸ್ವರೂಪ - ಇವುಗಳ ಅಧ್ಯಯನಕ್ಕೆ ಬುನಾದಿಯನ್ನು ಹಾಕಿಕೊಟ್ಟರು. ಎಂ.ಎ. ಓದುವಾಗ, ಈ ಅಂತರ್‌ಶಿಸ್ತೀಯ ಅಧ್ಯಯನ ಇನ್ನೂ ವ್ಯಾಪಕವಾಗಿ ಅವರು ಪಾಶ್ಚಿಮಾತ್ಯ ಸಾಹಿತ್ಯ, ಶಾಸನಶಾಸ್ತ್ರದ ಅಧ್ಯಯನ, ಭಾಷಾವಿಜ್ಞಾನ ಮುಂತಾದ ಪೂರಕ ಶಿಸ್ತುಗಳನ್ನು ಅಗತ್ಯ ಐಚ್ಛಿಕವಾಗಿ ರೂಪಿಸಿದರು. ನನ್ನಂಥ ಅನೇಕರನ್ನು ಸಾಹಿತ್ಯ ಮತ್ತು ಅಂತರ್‌ಶಿಸ್ತೀಯ ಅಧ್ಯಯನದ ಅನೇಕ ಸೂಕ್ಷ್ಮಗಳಿಗೆ ಒಳಗಣ್ಣು ತೆಗೆಯುವಂತೆ ಮಾಡಿದರು.

ಜಿಎಸ್‌ಎಸ್ ಅವರು ನನ್ನಂಥ ಅನೇಕ ವಿದ್ಯಾರ್ಥಿಗಳಿಗೆ ಗುರುವಾಗಿ ಅನೇಕ ಮೌಲ್ಯಗಳನ್ನು ತಮ್ಮ ಬೋಧನೆ ಮತ್ತು ವ್ಯಕ್ತಿತ್ವದಿಂದ ಕಲಿಸಿಕೊಟ್ಟಿದ್ದಾರೆ. ಕನ್ನಡವೆಂಬ ವಸ್ತು ಮತ್ತು ಭಾವ ಪ್ರಪಂಚವನ್ನು ಪ್ರೀತಿಸುವುದು, ಸಾಹಿತ್ಯದ ಉತ್ಕೃಷ್ಟತೆಗೆ ಹಾತೊರೆಯುವುದು, ಸರ್ವರನ್ನು ಸಮಭಾವದಿಂದ ಪ್ರೀತಿಯಿಂದ ನೋಡುವುದು- ಇವುಗಳಲ್ಲಿ ಕೆಲವು.

ಜಿಎಸ್‌ಎಸ್ ಅವರು 'ಅಚ್ಚುಕಟ್ಟುತನ'ವೆನ್ನುವುದು ಒಂದು ಮುಖ್ಯ ಗುಣವೆಂಬಂತೆ ಬದುಕನ್ನು ಬದುಕಿದವರು. ಅಚ್ಚುಕಟ್ಟಾದ ಊಟ, ಪುಸ್ತಕಗಳನ್ನು ಅಚ್ಚುಕಟ್ಟಾಗಿಟ್ಟು ಓದಲು ಸಿಗುವಂತೆ ನೋಡಿಕೊಳ್ಳುವುದು - ಇವನ್ನು ಅವರ ಮನೆಯ ಲೈಬ್ರರಿಯನ್ನು ನೋಡಿದರೆ ಗೊತ್ತಾಗುತ್ತದೆ. ಒಂದು ಪುಸ್ತಕ ಆಚೆಈಚೆ ಆಗಿದೆ ಎಂದರೆ ಮನೆಯ ಮಂದಿಯ ಮೇಲೆ ಹರಿಹಾಯುವ ಅವರ ಗುಣವನ್ನು ಶ್ರೀಮತಿ ರುದ್ರಾಣಿಯವರಿಂದಲೇ ಕೇಳಿ ತಿಳಿಯಬೇಕು. ಈ ಅಚ್ಚುಕಟ್ಟುತನದ ಅವರ ಗುಣವೊಂದನ್ನು ಎಷ್ಟೇ ಪ್ರಯತ್ನಿಸಿದರೂ ನಾನು ಗಳಿಸಿಕೊಳ್ಳಲು ಆಗಲಿಲ್ಲ. ಅದಕ್ಕಾಗಿ ನಾನು ನನ್ನ ಗುಣವಾಗಿಯೇ ಉಳಿಸಿಕೊಂಡೆ. ಅದಕ್ಕಾಗಿ ಅನೇಕ ಬಾರಿ ಗುರುಗಳ ಸಿಟ್ಟಿಗೆ ಪಾತ್ರನೂ ಆದೆ. ಅಂಥ ಸಿಟ್ಟೇ ಅವರು ತೋರಿದ ಪ್ರೀತಿಯ ದ್ಯೋತಕವೆಂದು ನಾನು ತಿಳಿದಿದ್ದೇನೆ.


ಇವೆಲ್ಲವನ್ನು ತಮ್ಮ ಬದುಕಿನ ನಡವಳಿಕೆ ಮೂಲಕವೇ ಎಳೆಯ ಹುಡುಗರಿಗೆ ತೋರಿದ ಜಿಎಸ್‌ಎಸ್ ಅವರು ಇಂದು ನನಗೆ ಮಾದರಿಯಾಗಿ ಉಳಿದಿದ್ದಾರೆ.



■ ಡಾ.ಬಸವರಾಜ ಕಲ್ಗುಡಿ



ಐಪಿಎಸ್ ಕೆ.ಸಿ.ರಾಮಮೂರ್ತಿಯ ಲ್ಯಾಂಡ್ ಮಾಫಿಯಾ



ಸಾರ್ವಜನಿಕರ ಮಾನ-ಪ್ರಾಣ ರಕ್ಷಣೆ ಮಾಡಿ, ಕಾನೂನು ಸುವ್ಯವಸ್ಥೆ ಕಾಪಾಡುವ ಇಲಾಖೆಯ ಉನ್ನತ ಸ್ಥಾನದಲ್ಲಿರುವ ಐಪಿಎಸ್ ದರ್ಜೆಯ ಅಧಿಕಾರಿಗಳಿಗೆ ಹೆಚ್ಚಿನ ಕಾನೂನು ಜ್ಞಾನ ಇರುತ್ತದೆ ಮತ್ತು ಕ್ರಿಮಿನಲ್‌ಗಳನ್ನು ತಹಬಂದಿಗೆ ತರಲಿಕ್ಕೆ ಬೇಕಾದ ವಿಶೇಷ ಜ್ಞಾನ ಮತ್ತು ತರಬೇತಿಯೂ ಇರುತ್ತದೆ. ಇದೆಲ್ಲವೂ ಸಮಾಜದಲ್ಲಿ ಸ್ವಾಸ್ಥ್ಯವನ್ನು ಕಾಪಾಡಲಿ ಕ್ಕಾಗಿಯೇ.

ಆದರೆ ಇಂಥಾ ಐಪಿಎಸ್ ಅಧಿಕಾರಿಗಳು ತಮ್ಮ ದುಷ್ಟ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ತಮ್ಮ ಅಧಿಕಾರ ಮತ್ತು ಕ್ರಿಮಿನಾಲಜಿ ಜ್ಞಾನವನ್ನು ಬಳಸಿದರೆ ಅದರ ಪರಿಣಾಮ ಏನಾಗಬಹುದು? ಅದರ ಒಂದು ಸ್ಯಾಂಪಲ್ ಸ್ಟೋರಿ ಇಲ್ಲಿದೆ ನೋಡಿ.

ಐಪಿಎಸ್ ಅಧಿಕಾರಿ ಕೆ.ಸಿ.ರಾಮಮೂರ್ತಿ ಹೆಸರು ಕರ್ನಾಟಕದಾದ್ಯಂತ ಚಿರಪರಿಚಿತ. ಸನ್ಮಾನ್ಯರು ಕರ್ನಾಟಕಾದ್ಯಂತ ನಾನಾ ಹುದ್ದೆಗಳನ್ನು ನಿರ್ವಹಿಸಿ ಅಂತಿಮವಾಗಿ ಐಜಿಪಿ ಹುದ್ದೆಯನ್ನೇರಿ ನಿವೃತ್ತಿಯಾಗಿದ್ದಾರೆ. ಇಂಥಾ ಗೌರವಾನ್ವಿತ ಹುದ್ದೆಯಲ್ಲಿದ್ದ ವ್ಯಕ್ತಿಯ ಮೇಲೆ ಬೆಂಗಳೂರು ನಗರದ ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಕಳೆದ ಎರಡು ತಿಂಗಳಿನಿಂದೀಚೆಗೆ ಬರೋಬ್ಬರಿ ಹದಿನಾಲ್ಕು ಎಫ್‌ಐಆರ್‌ಗಳು ದಾಖಲಾಗಿವೆ. ಆ ಎಫ್‌ಐಆರ್‌ಗಳಲ್ಲಿ ನಮೂದಾಗಿರುವ ಐಪಿಸಿ ಸೆಕ್ಷನ್‌ಗಳ ಸಂಖ್ಯೆ ಎಷ್ಟಿರಬಹುದು ಎಂದುಕೊಂಡಿದ್ದೀರಿ? ಬರೋಬ್ಬರಿ 24!

ಐಪಿಸಿ 341, 350, 351, 506, 441, 425, 427, 463, 464, 466, 467, 468, 471, 474, 477, 415, 420, 107, 115, 116(1), 117, 118, 120, 120(ಬ)

ಕೊತ್ತನೂರು ಪೊಲೀಸರು ತಮ್ಮ ಮಾಜಿ ಮೇಲಧಿಕಾರಿಯ ಮೇಲೆ ಇಷ್ಟೊಂದು ಸೆಕ್ಷನ್‌ಗಳನ್ನು ಹಾಕಬೇಕೆಂದರೆ ಅದಕ್ಕೂ ಒಂದು ವಿಶೇಷ ಹಿನ್ನೆಲೆಯಿದೆ. ಅದೇನೆಂದರೆ ಈ ಐಪಿಎಸ್ ವಿರುದ್ಧ ದೂರು ಕೊಟ್ಟು ಹೋರಾಟ ನಡೆಸುತ್ತಿರುವವರಲ್ಲಿ ನಿವೃತ್ತ ಡಿವೈಎಸ್‌ಪಿ ಎ.ಮುನಿರೆಡ್ಡಿ ಎಂಬುವವರೂ ಇದ್ದಾರೆ. ಹೀಗಾಗಿ ಪೊಲೀಸ್ ಇಲಾಖೆಯ ಅತಿ ಉನ್ನತ ಹಂತದಲ್ಲಿದ್ದ ಅಧಿಕಾರಿಯ ವಿರುದ್ಧ ಮತ್ತೊಬ್ಬ ಕಿರಿಯ ಅಧಿಕಾರಿ ಸೆಡ್ಡು ಹೊಡೆದು ನಿಂತಿರುವ ಈ ಪ್ರಕರಣ ಭಾರೀ ಕುತೂಹಲಕರವಾಗಿದೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳನ್ನು ಗಮನಿಸಿದರೆ ಈ ಪ್ರಕರಣ ಒಂದು ರೋಚಕ ಸಿನಿಮಾದ ಕತೆಯಂತಿದೆ. ಚಿತ್ರವಿಚಿತ್ರ ಒಳಸುಳಿಗಳಿರುವ ಇದರ ವಿವರಗಳನ್ನು ನೋಡಿ.

ಬೆಂಗಳೂರಿನ ರಿಂಗ್‌ರೋಡಿನಲ್ಲಿ ಬರುವ ಹೆಣ್ಣೂರಿಗೆ ಕೇವಲ 3 ಕಿ.ಮೀ ದೂರದಲ್ಲಿ ದೊಡ್ಡಗುಬ್ಬಿ ಎಂಬ ಊರಿದೆ. 1994ರಲ್ಲಿ ಈ ಗ್ರಾಮದ ಸರ್ವೆ ನಂ. 12ರ ಜಮೀನನ್ನು ಕೇರಳ ಮೂಲದ ಉದ್ಯಮಿ ಜೋಸೆಫ್ ಚಾಕೋ ಎಂಬುವವರು ಖರೀದಿಸಿ, ಅಥಿನ ಟೌನ್‌ಶಿಪ್ ಎಂಬ ಬಡಾವಣೆಯೊಂದನ್ನು ನಿರ್ಮಿಸಿ 60x80 ಅಳತೆಯ ವಿಶಾಲವಾದ ವಿಲ್ಲಾ ಪ್ಲಾಟ್‌ಗಳಾಗಿ ವಿಂಗಡಿಸಿದರು. ಈ ಜಮೀನನ್ನು ಮಾರಾಟ ಮಾಡಲು ಸಂಬಂಧಿಸಿದ ಸ್ಥಳೀಯ ಸರ್ಕಾರಿ ಕಚೇರಿಯಿಂದ ಆದೇಶ ಸಂಖ್ಯೆ ಎಚ್‌ಒಎ/ಸಿಆರ್ 34/94-95 ಪ್ರಕಾರ ಅನುಮತಿಯನ್ನೂ ಪಡೆದುಕೊಂಡರು.

ಜೋಸೆಫ್ ಚಾಕೊಗೆ ಕೇರಳ ಮೂಲದ ಎನ್‌ಆರ್‌ಐಗಳ ಸಂಪರ್ಕ ಹೆಚ್ಚಾಗಿದ್ದುದರಿಂದ ಬಹುತೇಕ ಸೈಟುಗಳನ್ನು ಅನಿವಾಸಿ ಭಾರತೀಯರಿಗೆ ಮಾರಿ, ಒಂದಷ್ಟು ನಿವೇಶನಗಳನ್ನು ತನ್ನ ಒಡೆತನದಲ್ಲೇ ಉಳಿಸಿಕೊಂಡಿದ್ದಾರೆ. ಅನಿವಾಸಿಗಳ ಹೊರತಾಗಿ ಸೈಟು ಖರೀದಿಸಿದ್ದು ಬಹುಶಃ ಸ್ಥಳೀಯರಾದ ಆವಲಪ್ಪ ಎಂಬುವವರು ಮಾತ್ರ. ಆವಲಪ್ಪ ಈಗ ಹಾಲಿ ನಿವೃತ್ತರಾಗಿರುವ ಡಿವೈಎಸ್‌ಪಿ ಮುನಿರೆಡ್ಡಿ ಅವರ ತಂದೆ ಎಂಬುದು ಗಮನಾರ್ಹ.

ತಮ್ಮ ನಿವೃತ್ತ ಜೀವನದ ಭದ್ರತೆಗೆಂದು ನಿವೇಶನವನ್ನು ಖರೀದಿಸಿದ ಅನಿವಾಸಿಗಳು, ಪಂಚಾಯತಿಯಿಂದ ಖಾತಾಪತ್ರಗಳನ್ನು ಪಡೆದುಕೊಂಡು ಕಾಲಕಾಲಕ್ಕೆ ತೆರಿಗೆಯನ್ನೂ ಪಾವತಿಸುತ್ತಾ ಬಂದಿದ್ದಾರೆ. ತಮ್ಮ ಉದ್ಯೋಗ ನಿಮಿತ್ತ ವಿದೇಶದಲ್ಲಿ ನೆಲೆಸಬೇಕಾಗಿರುವುದರಿಂದ ತಮ್ಮ ನಿವೇಶನಕ್ಕೆ ಭದ್ರತೆ ಒದಗಿಸುವ ಜವಾಬ್ದಾರಿಯನ್ನು ಡೆವಲಪರ್ ಜೋಸೆಫ್ ಚಾಕೋಗೆ ವಹಿಸಿಕೊಟ್ಟರು. ಜೋಸೆಫ್ ಚಾಕೋ ಅಥಿನಾ ಟೌನ್‌ಶಿಪ್ ಬಡಾವಣೆಗೆ ಸಂಪೂರ್ಣ ಕಾಂಪೌಂಡ್ ನಿರ್ಮಿಸಿ ಸೆಕ್ಯುರಿಟಿ ಗಾರ್ಡ್‌ಗಳನ್ನು ನೇಮಿಸಿದರು. ಕೆಲವು ನಿವೇಶನದಾರರು ತಮ್ಮ ನಿವೇಶನಗಳಲ್ಲಿ ಸಣ್ಣಪುಟ್ಟ ಮನೆಗಳನ್ನೂ ಕಟ್ಟಿದ್ದರು.

ಬೆಂಗಳೂರು ನಗರ ಬೆಳೆಯುತ್ತ ಹೋದಂತೆ ದೊಡ್ಡಗುಬ್ಬಿ ಗ್ರಾಮವೂ ಬಿಬಿಎಂಪಿ ವ್ಯಾಪ್ತಿಗೆ ಸೇರಿಹೋಯಿತು. ಇಲ್ಲಿನ ನಿವೇಶನಗಳ ಬಹುತೇಕ ಮಾಲಿಕರು ಬಿಬಿಎಂಪಿಯಿಂದ ಖಾತಾಪತ್ರಗಳನ್ನು ಪಡೆದು, ಆಸ್ತಿ ತೆರಿಗೆಯನ್ನೂ ಪಾವತಿಸುತ್ತಿರುವುದಕ್ಕೆ ರಾಶಿರಾಶಿ ದಾಖಲೆಗಳು ಸಿಗುತ್ತವೆ. ಹೀಗೆ ಹನ್ನೆರಡು ವರ್ಷ ಕಳೆದುಹೋಯಿತು.


ರಿಯಲ್ ಎಸ್ಟೇಟ್ ಮೌಲ್ಯ ಆಕಾಶಕ್ಕೇರುತ್ತಿದ್ದಂತೆ ಈ ಭೂಮಿಗೂ ಚಿನ್ನದ ಬೆಲೆ ಬಂದಿದೆ. ಇಲ್ಲಿ ಒಂದು ಅಡಿ ಭೂಮಿಯ ಬೆಲೆ ಈಗ ಎರಡರಿಂದ ಮೂರು ಸಾವಿರ ರೂಪಾಯಿ! ಹೀಗಾಗಿ ಈ ಭೂಮಿಯ ಮೇಲೆ ಭೂಗಳ್ಳರ, ಕ್ರಿಮಿನಲ್‌ಗಳ ಕಣ್ಣು ಬಿತ್ತು.

ಹೀಗೆ ಹೇಳೋರೂ ಕೇಳೋರೂ ಇಲ್ಲದೆ ಕೇವಲ ಸೆಕ್ಯುರಿಟಿ ಗಾರ್ಡ್‌ಗಳ ಸುಪರ್ದಿಯಲ್ಲಿದ್ದ ಅಥಿನಾ ಟೌನ್‌ಶಿಪ್‌ನ ಆಸ್ತಿ ಕೆ.ಸಿ. ರಾಮಮೂರ್ತಿ ಮತ್ತು ಪಟಾಲಂ ಕಣ್ಣಿಗೆ ಬಿತ್ತು. ನೂರಾರು ಕೋಟಿ ಬೆಲೆಬಾಳುವ ಈ ಆಸ್ತಿಯನ್ನು ಕಬಳಿಸಲು ಪಕಡ್‌ಬಂಧಿ ತಂತ್ರಗಳು ರೂಪುಗೊಂಡವು. ಈಗ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳ ಪ್ರಕಾರ ಈ ಇಡೀ ಲ್ಯಾಂಡ್ ಮಾಫಿಯಾದ ರಿಂಗ್ ಲೀಡರ್ ಸ್ವತಃ ಐಪಿಎಸ್ ಕೆ.ಸಿ.ರಾಮಮೂರ್ತಿ. ಆತ ಹೂಡಿದ ತಂತ್ರಗಳು ಬಹುಶಃ ಬೆಂಗಳೂರು ಲ್ಯಾಂಡ್ ಮಾಫಿಯಾದ ಚರಿತ್ರೆಯಲ್ಲೇ ವಿಶಿಷ್ಟವಾದವು.

ಜೋಸೆಫ್ ಚಾಕೊ ಭೂಮಿ ಖರೀದಿಸುವುದಕ್ಕೂ ಹಿಂದಿನ ಮೂಲ ಭೂಮಾಲಿಕರಾದ ರೈತರ ಹೆಸರಿನಿಂದ ರಾಮಮೂರ್ತಿಯ ಬಂಧು ಕೆ.ಎಸ್.ಬಾಲಸುಂದರ್ ರೆಡ್ಡಿಯ ಹೆಸರಿಗೆ ಒಂದು ಡೂಪ್ಲಿಕೇಟ್ ಜಿಪಿಎ ಪತ್ರವನ್ನು ರಿಜಿಸ್ಟರ್ ಮಾಡಿಸಲಾಯಿತು. ಈ ಡೂಪ್ಲಿಕೇಟ್ ದಾಖಲಾತಿ ಸೃಷ್ಟಿಯಾಗಿದ್ದು ಸಂಬಂಧಿಸಿದ ಕೆ.ಆರ್.ಪುರಂ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಲ್ಲ, ಬದಲಿಗೆ ಇಲ್ಲಿಂದ ಸುಮಾರು 60-70 ಕಿ.ಮೀ ದೂರದಲ್ಲಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ!!

ಟೋಪಿ ಹಾಕಲಿಕ್ಕೂ ಶುಲ್ಕ!!

ನಂಬಿಸಿ ಟೋಪಿ ಹಾಕುವ ನಾನಾ ರೀತಿಯ ಮಂದಿಯನ್ನು ನೀವು ನೋಡಿರುತ್ತೀರಿ. ಆದರೆ ಟೋಪಿ ಹಾಕಲಿಕ್ಕೂ ದುಬಾರಿ ಶುಲ್ಕ ವಸೂಲಿ ಮಾಡಿದೋರನ್ನು ನೋಡಿರಲಿಕ್ಕಿಲ್ಲ. ಇಂಥಾ ಒಂದು ಘನ ಸಾಧನೆ ಮಾಡಿದ ಐಪಿಎಸ್ ರಾಮಮೂರ್ತಿ ಶಿಷ್ಯರ ಚಾಣಾಕ್ಷತೆ ಇಲ್ಲಿದೆ ನೋಡಿ.



ಸ್ಟೀಫನ್ ಕೆ. ವರ್ಗೀಸ್

ಅಥಿನಾ ಟೌನ್‌ಶಿಪ್‌ನಲ್ಲಿ ನಿವೇಶನ ಖರೀದಿಸಿದ ಅನಿವಾಸಿ ಭಾರತೀಯರಲ್ಲಿ ಸ್ಟೀಫನ್ ಕೆ. ವರ್ಗೀಸ್ ಕೂಡ ಒಬ್ಬರು. ಕೇರಳ ಮೂಲದ ಸ್ಟೀಫನ್ ಸುಮಾರು 35 ವರ್ಷಗಳ ಕಾಲ ಗಲ್ಫ್ ದೇಶಗಳಲ್ಲಿ ದುಡಿದು ಹಣ ಸಂಪಾದಿಸಿದ್ದಾರೆ. 1994ರಲ್ಲಿ ಇದೇ ಕೇರಳ ಮೂಲದ ಜೋಸೆಫ್ ಚಾಕೋ ಎಂಬ ಡೆವಲಪರ್‌ನಿಂದ ಸುಮಾರು 12 ಲಕ್ಷ ಮೊತ್ತಕ್ಕೆ 60x80 ಅಳತೆಯ 4 ನಿವೇಶನಗಳನ್ನು ಖರೀದಿಸಿ, ಎಲ್ಲ ಕಾನೂನುಬದ್ಧ ದಾಖಲಾತಿಗಳನ್ನು ತಮ್ಮ ಬಳಿ ಭದ್ರವಾಗಿರಿಸಿಕೊಂಡು ನೆಮ್ಮದಿಯಾಗಿದ್ದರು.

ಆದರೆ 2006ರಲ್ಲಿ ಒಂದು ದಿನ ಇದ್ದಕ್ಕಿದ್ದಂತೆ 'ಅಥಿನಾ ಟೌನ್‌ಶಿಪ್ ವೆಲ್‌ಫೇರ್ ಸೊಸೈಟಿ'ಯ ಪರವಾಗಿ ಜಾರ್ಜ್ ವರ್ಗೀಸ್ ಎಂಬುವವರಿಂದ ಒಂದು ಇ-ಮೈಲ್ ಬಂತು. ಅದರ ಸಾರಾಂಶವೇನೆಂದರೆ ಡೆವಲಪರ್ ಜೋಸೆಫ್ ಚಾಕೋ ಈ ಇಡೀ ಪ್ರಾಪರ್ಟಿಯನ್ನು ಬಿಟಿ ಸ್ಟೋನ್‌ನವರಿಗೆ ಮಾರಾಟ ಮಾಡಿ, ಎಲ್ಲ ನಿವೇಶನದಾರರಿಗೂ ಮೋಸ ಮಾಡಿಬಿಟ್ಟಿದ್ದಾನೆಂದೂ ಅದ್ದರಿಂದ ಈ ವೆಲ್‌ಫೇರ್ ಸೊಸೈಟಿಯನ್ನು ಹುಟ್ಟುಹಾಕಿ ಜೋಸೆಫ್ ಚಾಕೊ ವಿರುದ್ಧ ಹೋರಾಟ ಮಾಡುತ್ತಿದ್ದೇವೆಂದೂ, ತಮ್ಮ ಸೈಟುಗಳನ್ನು ಉಳಿಸಿಕೊಳ್ಳಬೇಕೆಂದರೆ ಸ್ಟೀಫನ್ ಕೂಡ ಈ ಸೊಸೈಟಿ ಸದಸ್ಯರಾಗಿ ತಮ್ಮೊಂದಿಗೆ ಸೇರಬೇಕೆಂದೂ ತಿಳಿಸಲಾಗಿತ್ತು.

ಗಾಬರಿಗೊಂಡ ಸ್ಟೀಫನ್ ಇ-ಮೈಲ್‌ನಲ್ಲಿ ತಿಳಿಸಲಾಗಿದ್ದಂತೆ ವರ್ಗೀಸ್ ಮತ್ತು ತಂಡವನ್ನು ಭೇಟಿಯಾದರು. 'ಸೊಸೈಟಿ' ಹೆಸರಿನಲ್ಲಿ ಆಫೀಸ್, ಲೆಟರ್‌ಹೆಡ್, ಪದಾಧಿಕಾರಿಗಳ ಪಟ್ಟಿ ಎಲ್ಲವನ್ನೂ ರೆಡಿ ಇಟ್ಟುಕೊಂಡಿದ್ದ ಕೆಸಿಆರ್ ಶಿಷ್ಯವೃಂದ ಎನ್‌ಆರ್‌ಐ ಸ್ಟೀಫನ್‌ರಿಗೆ ತಾವು ಜೋಸೆಫ್ ಚಾಕೋ ವಿರುದ್ಧ ಬೆಂಗಳೂರು ಗ್ರಾಮಾಂತರ ನ್ಯಾಯಾಲಯದಲ್ಲಿ ಕೇಸು ಹಾಕಿರುವುದಾಗಿ ತಿಳಿಸಿ (ಒಎಸ್ ನಂಬರ್ 392/2007) ದಾಖಲಾತಿಗಳನ್ನೂ ತೋರಿಸಿದರು.

ತಮ್ಮಂತೆ ನಿವೇಶನ ಕಳೆದುಕೊಂಡ ಸಂತ್ರಸ್ತರ ಸೊಸೈಟಿ ಇದು ಎಂದು ಸ್ಟೀಫನ್‌ರವರು ನಂಬದೇ ಇರಲು ಯಾವುದೇ ಕಾರಣವಿರಲಿಲ್ಲ. ಇದೇ ನಂಬಿಕೆಯನ್ನು ಬಳಸಿಕೊಂಡ ಕೆಸಿಆರ್ ದುಷ್ಟಕೂಟದ ಖೊಟ್ಟಿ ಸೊಸೈಟಿಯ 420ಗಳು ಸ್ಟೀಫನ್‌ರಿಂದ ಸದಸ್ಯತ್ವ ಶುಲ್ಕ ಮತ್ತು ಕಾನೂನು ಹೋರಾಟ ಮತ್ತಿತರ ವೆಚ್ಚಗಳ ಹೆಸರಿನಲ್ಲಿ ಒಟ್ಟು 43,000 ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಅಷ್ಟೇ ಅಲ್ಲ ಅದಕ್ಕೆ 'ಸೊಸೈಟಿ'ಯ ರಸೀದಿ ಕೂಡ ಕೊಟ್ಟಿದ್ದಾರೆ. ಈ ಸೊಸೈಟಿ ಖೊಟ್ಟಿ ಎಂದೂ, ಇದರ ಪದಾಧಿಕಾರಿಗಳ ವೇಷಧಾರಿಗಳೆಲ್ಲಾ ಐಪಿಎಸ್ ರಾಮಮೂರ್ತಿ ಶಿಷ್ಯರೆಂದು ಅರ್ಥಮಾಡಿಕೊಳ್ಳಲು ಸ್ಟೀಫನ್‌ರಿಗೆ ತಿಂಗಳುಗಳೇ ಬೇಕಾಯ್ತು. ಈಗ ಸ್ಟೀಫನ್ ಕೆಸಿಆರ್ ವಂಚಕ ಕೂಟದ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದು ಕೋರ್ಟ್ ಕೇಸಿನ ಕಡತದಲ್ಲಿ ಈ ಮೋಸಕ್ಕೆ ಸಾಕ್ಷಿಯಾಗಿ 26.01.2007ರ ದಿನಾಂಕ ಹೊಂದಿರುವ ರಸೀದಿ ಸಂಖ್ಯೆ 1308 ಮತ್ತು 1309ನೇ ರಸೀದಿಗಳು ಭದ್ರವಾಗಿ ಕೂತಿವೆ.

ಐಪಿಎಸ್ ಬ್ರೈನ್ ಮತ್ತು ಕ್ರಿಮಿನಲ್ ಬ್ರೈನ್‌ಗಳು ಒಟ್ಟಾಗಿ ಬಿಟ್ಟರೆ ಎಂತೆಂಥಾ ಮನೆಹಾಳು ಐಡಿಯಾಗಳು ಹುಟ್ಟುತ್ತವೆ ನೋಡಿ.

ರಾಮಮೂರ್ತಿಯ ಶಿಕ್ಷಣ "ಸೇವೆ"!

ಕ್ರಿಮಿನಾಲಜಿ ಎಕ್ಸ್‌ಪರ್ಟ್ ಆಗಿರುವ ಮಾನ್ಯ ಐಪಿಎಸ್ ರಾಮಮೂರ್ತಿಯವರು 2002-03ರ ಅವಧಿಯಲ್ಲಿ ಬೆಂಗಳೂರು ಯೂನಿವರ್ಸಿಟಿಯ ರಿಜಿಸ್ಟ್ರಾರ್ ಆಗಿಯೂ 'ಸೇವೆ' ಸಲ್ಲಿಸಿದ್ದರು. ರಿಜಿಸ್ಟ್ರಾರ್ ಹುದ್ದೆ ಅಲ್ಪಾವಧಿಯದಾಗಿದ್ದರೂ ಅಲ್ಲಿ ಮಾನ್ಯರು ಗಳಿಸಿದ ಅನುಭವ ಅಪಾರವಾಗಿತ್ತು. ಬಹುತೇಕ ಎಲ್ಲ ರಾಜಕಾರಣಿಗಳು ತಮ್ಮದೇ ಆದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿರುವುದರ ಹಿಂದಿನ ಗುಟ್ಟನ್ನು ಚೆನ್ನಾಗಿ ಅರಿತಿದ್ದ ರಾಮಮೂರ್ತಿ ತಮ್ಮ ಉಳಿದ ಜೀವಿತಾವಧಿಯನ್ನು ಶಿಕ್ಷಣ ಕ್ಷೇತ್ರದ 'ಸೇವೆಗಾಗಿ' ಮೀಸಲಿಡಲು ನಿರ್ಧರಿಸಿಬಿಟ್ಟರು. ಹೀಗೆ ಸ್ವಯಂ ನಿವೃತ್ತಿ ಪಡೆದು ಹೊರಬಂದ ಈ ಅಧಿಕಾರಿ ಎರಡೂ ಕೈಗಳಿಂದಲೂ ಎಡಬಿಡದೆ ಸೇವೆಯಲ್ಲಿ ತೊಡಗಿದ್ದಾರೆ. ಪರಿಣಾಮವಾಗಿ ಸಿಎಂಆರ್ ಗ್ರೂಪ್ ಒಡೆತನದಲ್ಲಿ ಇಂದು ಹತ್ತಾರು ಶಾಲಾ ಕಾಲೇಜುಗಳು ತಲೆಯೆತ್ತಿವೆ. ನರ್ಸರಿ ಶಾಲೆಯಿಂದ ಹಿಡಿದು ಇಂಜಿನಿಯರಿಂಗ್, ಬ್ಯುಸಿನೆಸ್ ಮ್ಯಾನೇಜ್‌ಮೆಂಟ್‌ವರೆಗೆ ನಾನಾತರದ ಕೋರ್ಸ್‌ಗಳ ಬೋಧನೆ ಇಲ್ಲಿ ನಡೆಯುತ್ತಿದೆ. ಸಿಂಗಾಪುರಕ್ಕೂ, ತಮ್ಮ ಕೈಚಾಚಿರುವುದಾಗಿ ಸಂಸ್ಥೆಯ ವೆಬ್‌ಸೈಟ್‌ನ ಪ್ರಕಟಣೆಯೇ ಹೇಳುತ್ತದೆ.

ಸಿಎಂಆರ್ ಜ್ಞಾನಧಾರಾ ಟ್ರಸ್ಟ್ ಟ್ರಸ್ಟ್ ಎಂದರೆ ಕಾನೂನೇ ಹೇಳುವಂತೆ ಸಮಾಜಸೇವಾ ಕಾರ್ಯವಲ್ಲದೆ ಮತ್ತಾವ ವೈಯಕ್ತಿಕ ಅಥವಾ ವಾಣಿಜ್ಯ ಹಿತಾಸಕ್ತಿಯೂ ಇರುವಂತಿಲ್ಲ. ಆದರೆ ರಾಮಮೂರ್ತಿಯಂಥವರ ಸಮಾಜ ಸೇವೆಯ ಸ್ಟೈಲೇ ಬೇರೆ. ಅದನ್ನು ಇಲ್ಲಿ ವಿವರಿಸಿ ಹೇಳುವ ಬದಲಿಗೆ ಈ ಟ್ರಸ್ಟಿನಲ್ಲಿ ವಿರಾಜಮಾನರಾಗಿರುವ ಸಮಾಜಸೇವಕರ ಪಟ್ಟಿಯನ್ನೊಮ್ಮೆ ನೋಡಿದರೆ ಸಾಕು. ಈ ಸಮಾಜ ಸೇವಕರ ಗುಟ್ಟು ರಟ್ಟಾಗುತ್ತದೆ.

1. ಕೆ.ಸಿ.ರಾಮಮೂರ್ತಿ - ಚೇರ್‌ಮನ್
2. ಡಾ. ಕೆ.ಸಿ.ಸವಿತಾ ರಾಮಮೂರ್ತಿ - ಪ್ರೆಸಿಡೆಂಟ್
3. ಕೆ.ಸಿ. ಜಗನ್ನಾಥರೆಡ್ಡಿ - ಪ್ರಧಾನ ಕಾರ್ಯದರ್ಶಿ
4. ಡಾ. ಕೆ.ಸಿ.ರಾಜು ರೆಡ್ಡಿ - ಟ್ರಸ್ಟೀ
5. ಶ್ರೀಮತಿ ಅನಿತಾ ರಾಜಗೋಪಾಲರೆಡ್ಡಿ - ಟ್ರಸ್ಟೀ
6. ಶ್ರೀಮತಿ ಸರಳಾ ರಾಮಸ್ವಾಮಿರೆಡ್ಡಿ - ಟ್ರಸ್ಟೀ...

ಈ ಪಟ್ಟಿ ಹೀಗೇ ಮುಂದುವರೆಯುತ್ತದೆ. ಈ ಸಮಾಜ ಸೇವಾ ಧುರಂಧರರ ಹೆಸರೇ ಹೇಳುವಂತೆ ಇವರ ನಡುವೆ ಕೇವಲ ಜಾತಿ ಸಂಬಂಧ ಮಾತ್ರ ಎಂದುಕೊಳ್ಳಬೇಡಿ. ಈ ಸೇವಾಸಕ್ತರೆಲ್ಲಾ ಒಂದೇ ಕುಟುಂಬದ ರಕ್ತಸಂಬಂಧಿಗಳು!!


ಉದ್ಯಮಿಯನ್ನೇ ನುಂಗಿಹಾಕಿದ ಕೆ.ಸಿ.ಆರ್ ಮಾಫಿಯಾ

ಮೃದು ಸ್ವಭಾವದ ಉದ್ಯಮಿಯೊಬ್ಬರನ್ನು ಅಮರಿಕೊಂಡ ಲ್ಯಾಂಡ್ ಮಾಫಿಯಾ ಅವರ ಆಸ್ತಿ ಪಾಸ್ತಿಗಳನ್ನು ದೋಚಿದ್ದು ಮಾತ್ರವಲ್ಲದೆ ಆತನ ...ಮಕನ್ನೇ ಹೈರಾಣ ಮಾಡಿರುವ ದುರಂತ ಕತೆ ಒಬ್ಬ ಒಳ್ಳೆಯ ಸಿನಿಮಾ ...ರ್ದೇಶಕನ ಕೈಗೆ ಸಿಕ್ಕರೆ ಬಾಕ್ಸ್ ಆಫೀಸ್‌ನಲ್ಲಿ ಹಿಟ್ ಆಗುವಂಥಾ ಕ್ರಿಮಿನಲ್ ...ಸ್ಟೋರಿ.

ಕೆಸಿಆರ್ ತನ್ನ ಐಪಿಎಸ್ ಮದದಲ್ಲಿ ಪೊಲೀಸ್ ಇಲಾಖೆಯನ್ನು ತನ್ನ ...ಸ್ವಬಂದಂತೆ ಬಳಸಿಕೊಂಡ ಉದಾಹರಣೆ ನೋಡಿ. ಜೋಸೆಫ್ ಚಾಕೊ ...ಲ್ಕತ್ತದಲ್ಲಿರುವ ತನ್ನ ಮಿನರಲ್ ವಾಟರ್ ಪ್ಲಾಂಟ್‌ನ ಕೆಲಸದ ಮೇಲೆ ...ಲ್ಕತ್ತಾಗೆ ಹೋಗಿದ್ದರು. ಆ ಸಂದರ್ಭದಲ್ಲಿ ಆತನ ಮೇಲೆ ನೆಪಮಾತ್ರಕ್ಕೆ ...ಂದು ಸುಳ್ಳುಕೇಸು ಹಾಕಿಸಿ, ಕೊಲ್ಕತ್ತಾದಿಂದ ಆತನನ್ನು ಹಿಡಿದು ತರಲು ...ಂಗಳೂರಿನಿಂದ ಎಸಿಪಿ ಓಂಕಾರಯ್ಯ ಮತ್ತು ಇನ್‌ಸ್ಪೆಕ್ಟರ್ ಸಿದ್ದಪ್ಪ ನೇತೃತ್ವದಲ್ಲಿ ...ಲೀಸ್ ಪಡೆಯನ್ನು ರವಾನಿಸಿದ.

ಆದರೆ ಜೋಸೆಫ್ ಮೇಲಿದ್ದದ್ದು ಐಪಿಸಿ 506ರಡಿಯ ತೀರಾ ಮಾಮೂಲಿ ...ಸು. ಇಂಥಾ ಕೇಸಿಗಾಗಿ ಆರೋಪಿತನನ್ನು ಹುಡುಕಿ 4,000 ಕಿ.ಮೀ ...ರ್ಯಾಣ ಮಾಡಿದ್ದು ಬಹುಶಃ ಈ ದೇಶದ ಇತಿಹಾಸದಲ್ಲಿ ಇದೇ ಪ್ರಥಮ ...ರಬಹುದು. ಹೀಗಾಗಿ ಕೊಲ್ಕತ್ತಾ ಪೊಲೀಸರಿಗೆ ಬೆಂಗಳೂರು ಪೊಲೀಸರ ...ಕ್ರಮವನ್ನು ಕಂಡು ಆಶ್ಚರ್ಯವೋ ಆಶ್ಚರ್ಯ! ಕಾನೂನನ್ನು ಪಾಲಿಸುವ ...ದ್ದೇಶಕ್ಕಿಂತಲೂ ಬಹುಶಃ ಎನ್‌ಕೌಂಟರ್ ಮಾಡುವ ಉದ್ದೇಶವಿರಬಹುದೆಂದು ...ಲ್ಕತ್ತಾ ಪೊಲೀಸರು ಶಂಕಿಸಿ ಬೆಂಗಳೂರು ಪೊಲೀಸರ ವಶಕ್ಕೆ ಈ ...ದ್ಯಮಿಯನ್ನು ಒಪ್ಪಿಸದೆ ತಾವೇ ಖುದ್ದಾಗಿ ಬೆಂಗಳೂರಿಗೆ ಬಂದು ...ಯಾಲಯಕ್ಕೆ ಹಾಜರುಪಡಿಸಿದರು. ಬಹುಶಃ ಅಂದು ಕೊಲ್ಕತ್ತಾ ಪೊಲೀಸರು ...ಮುಂಜಾಗ್ರತಾ ಕ್ರಮ ತೆಗೆದುಕೊಳ್ಳದೇ ಹೋಗಿದ್ದರೆ ಈ ಉದ್ಯಮಿಯ ಕತೆ ...ಆಗುತ್ತಿತ್ತೋ ದೇವರೇ ಬಲ್ಲ.

ಇನ್ನೊಂದುಕಡೆ ಜೋಸೆಫ್‌ನ ಬೆಂಗಳೂರು ಅಪಾರ್ಟ್‌ಮೆಂಟ್, ಕಚೇರಿಗಳ



ಜೋಸೆಫ್ ಚಾಕೊ

ಮೇಲೆ ಪೊಲೀಸ್ ದಾಳಿ ನಡೆಸಲಾಯ್ತು. ಮತ್ತೊಂದು ಕಡೆ ಮಾಧ್ಯಮಗಳನ್ನು ಬಳಸಿಕೊಂಡು ಜೋಸೆಫ್ ಚಾಕೊನ ಬಂಧನವನ್ನು ಅಂಡರ್‌ವರ್ಲ್ಡ್ ಡಾನ್ ಒಬ್ಬನ ಬಂಧನ ಎಂಬಂತೆ ಬಿಂಬಿಸಿದರು. ಜೋಸೆಫ್ ಚಾಕೋ ನೂರಾರು ಜನರಿಗೆ ಸೈಟು ಕೊಡದೆ ವಂಚಿಸಿದ್ದಾನೆ ಎಂಬ ಸುಳ್ಳು ಸುದ್ದಿಗಳು ಮಾಧ್ಯಮದಲ್ಲಿ ವಾರವಿಡೀ ಪ್ರಚಾರವಾಯ್ತು.

ರಾಜ್ಯವನ್ನೇ ಬಿಟ್ಟುಹೋಗುವಂತೆ ಕೆಲವು ಕ್ರಿಮಿನಲ್‌ಗಳು ಜೋಸೆಫ್‌ಗೆ ಬೆದರಿಕೆ ಹಾಕಲು ಶುರು ಮಾಡಿದರು. ಇಷ್ಟಕ್ಕೂ ಆತ ಮಣಿಯದಿದ್ದಾಗ ಜೋಸೆಫ್ ಚಾಕೊನ ಇಬ್ಬರು ಮಕ್ಕಳನ್ನು ಬೆಂಗಳೂರು ಹೊರವಲಯದ ಬಾಗಲೂರಿನಿಂದ ಕಿಡ್ನಾಪ್ ಮಾಡಿಸಲಾಯ್ತು, ಪಾಪ! ಆ ಮಕ್ಕಳಿಗೆ ಆಗಿನ್ನೂ 12 ಮತ್ತು 14 ವರ್ಷ ವಯಸ್ಸು.

ಹೀಗೆ ಎಲ್ಲಾ ಕಡೆಯಿಂದಲೂ ದಾಳಿಗೊಳಗಾದ ಜೋಸೆಫ್‌ಗೆ ಶರಣಾಗತಿಯೊಂದೇ ಉಳಿದಿದ್ದ ಮಾರ್ಗ. ಪರಿಣಾಮವಾಗಿ ಜೋಸೆಫ್‌ನ ಒಡೆತನದಲ್ಲಿದ್ದ ಹತ್ತಾರು ಪ್ಲಾಟ್‌ಗಳು ಕೆಸಿಆರ್ ಬಂಧುಗಳ ಹೆಸರಿಗೆ ವರ್ಗಾವಣೆಯಾದವು. ಅಥಿನಾ ಟೌನ್‌ಶಿಪ್‌ನ ಜಾಗದ ಕಡೆ ಜೋಸೆಫ್ ತಲೆಹಾಕಿಯೂ ಮಲಗುತ್ತಿಲ್ಲ. ಈಗ ಹಾಲಿ ಜೋಸೆಫ್ ಪರಿಸ್ಥಿತಿ ಏನೆಂದರೆ ರಾಮಮೂರ್ತಿ ಹೆಸರು ಕೇಳಿದರೆ ನಿದ್ದೆಯಲ್ಲೂ ಜೀವಭಯದಿಂದ ಬೆಚ್ಚಿಬೀಳುತ್ತಾರೆ.

ಲ್ಯಾಂಡ್ ಮಾಫಿಯಾ ಜೋಸೆಫ್ ಚಾಕೋರನ್ನೇ ಟಾರ್ಗೆಟ್ ಮಾಡಿದ್ದೇಕೆ? ಇದಕ್ಕೆ ಉತ್ತರ ಬಹಳ ಸರಳವಿದೆ. ಕೇರಳ ಮೂಲದ ಈ ವ್ಯಕ್ತಿ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ತನ್ನ ಹಣಬಲದಿಂದ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ನೂರಾರು ಕೋಟಿ ವಹಿವಾಟು ನಡೆಸಿದ್ದಾರೆ. ಬಿಬಿಎಂಪಿ ವ್ಯಾಪ್ತಿಯ ದೊಡ್ಡಗುಬ್ಬಿಯಲ್ಲಿ 75 ಎಕರೆ, ದೇವನಹಳ್ಳಿ ಏರ್‌ಪೋರ್ಟ್ ಬಳಿಯ ಬೆಂಡಿಗಾನಹಳ್ಳಿಯಲ್ಲಿ 100 ಎಕರೆ, ದೊಡ್ಡ ನಲ್ಲೂರಹಳ್ಳಿಯಲ್ಲಿ 100 ಎಕರೆ ಹೀಗೆ ಭಾರೀ ಬೆಲೆಬಾಳುವ ಏರಿಯಾಗಳಲ್ಲೇ ಬಡಾವಣೆಗಳನ್ನು ನಿರ್ಮಿಸಿದ್ದಾರೆ. ಬೆಂಗಳೂರಿನ ರಿಂಗ್‌ರೋಡಿನಲ್ಲಿ ಕ್ರೌನ್ ಪ್ಲಾಜಾ ಇಂಟರ್‌ನ್ಯಾಷನಲ್ ಎಂಬ ಒಂದು ಸರ್ವಿಸ್ ಅಪಾರ್ಟ್‌ಮೆಂಟ್ ಕೂಡ ಇವರ ಒಡೆತನದಲ್ಲಿದೆ.

ರಿಯಲ್ ಎಸ್ಟೇಟ್‌ನಲ್ಲಿ ಇಷ್ಟೆಲ್ಲಾ ವಹಿವಾಟು ನಡೆಸಿರುವ ಈತನ ಒಂದೇ ಒಂದು ದೌರ್ಬಲ್ಯವೆಂದರೆ ಈತ ಸ್ಥಳೀಯನಲ್ಲ ಮತ್ತು ತನ್ನ ಮೃದು ಸ್ವಭಾವದ ಕಾರಣಕ್ಕಾಗಿ ಕ್ರಿಮಿನಲ್‌ಗಳ ಸಂಪರ್ಕದಿಂದ ದೂರ ಉಳಿದುಬಿಟ್ಟಿದ್ದ. ಬಹುಶಃ ಇದೇ ಕಾರಣಕ್ಕಾಗಿ ಈತ ಕೆಸಿಆರ್ ಲ್ಯಾಂಡ್ ಮಾಫಿಯಾ ಕೂಟಕ್ಕೆ ಸುಲಭದ ಟಾರ್ಗೆಟ್ ಆಗಿಬಿಟ್ಟ.




ಅಥಿನಾದಲ್ಲಿ ಸೈಟುಗಳನ್ನು ಖರೀದಿಸಿದ್ದ ಎನ್‌ಆರ್‌ಐಗಳು

...ಈ ಪತ್ರದಲ್ಲಿ ಕಾಣಿಸಿರುವ ವ್ಯಕ್ತಿಗಳ ಸಹಿಗಳನ್ನು ...ರ್ಜರಿ ಮಾಡಲಾಗಿದೆಯೆಂದು ನ್ಯಾಯಾಲಯಕ್ಕೆ ...ರುವ ದಾಖಲಾತಿಯೇ ಹೇಳುತ್ತಿದೆ. ರಾಮಮೂರ್ತಿ ...ಗ್ಯಾಂಗ್‌ನ ಇಂಥಾ ಫೋರ್ಜರಿಯನ್ನು ವಿರೋಧಿಸಿ ...ತಹಳ್ಳಿಯ ರೈತ ರಾಜಪ್ಪ ಎಂಬುವವರು ಇದೇ ...ರುಸ್ ಗ್ಯಾಂಗ್ ಮೇಲೆ ಕೊತ್ತನೂರು ಠಾಣೆಯಲ್ಲಿ ...ನಲ್ ಪ್ರಕರಣ ದಾಖಲಿಸಿರುವುದು ಇವರ ಕುಕೃತ್ಯಕ್ಕೆ ...ನ್ನೊಂದು ಸಾಕ್ಷ್ಯವಾಗುಳಿದಿದೆ.

...ನಂತರ ಆ ಖೊಟ್ಟಿ ಜಿಪಿಎಯನ್ನು ಆಧರಿಸಿ ಸದರಿ ...ಮೀನುಗಳನ್ನು ಐಪಿಎಸ್ ರಾಮಮೂರ್ತಿಯ ಶಡ್ಡಕನಾದ ...ರಾಜಗೋಪಾಲರೆಡ್ಡಿ ಮತ್ತು ಅಳಿಯನಾದ ಕೆ.ಇ.ಬಾಬು ...ಬುವವರ ಹೆಸರಿಗೆ ಕೆ.ಆರ್.ಪುರಂ ಸಬ್‌ರಿಜಿಸ್ಟ್ರಾರ್ ...ಯಲ್ಲಿ ವರ್ಗಾವಣೆ ಮಾಡಲಾಗಿದೆ. ಈ ವ್ಯವಹಾರದಲ್ಲಿ ...ಮೂ ವಾಸದ ನಿವೇಶನ ಎಂಬ ಉಲ್ಲೇಖವಿಲ್ಲ. ...ಗೆ ಎಲ್ಲಾ ಕಡೆ ಕೃಷಿ ಭೂಮಿ ಎಂದೇ ನಮೂದಾಗಿದೆ. ...ಮತ್ತೊಂದು ಗಮನಾರ್ಹ ಸಂಗತಿಯಿದೆ. ಈ ಎಲ್ಲಾ ...ಹಾರಗಳಲ್ಲಿ ಅಧಿಕೃತವಾಗಿ ಮಾನ್ಯ ಐಪಿಎಸ್ ...ರಾಮಮೂರ್ತಿ ಹೆಸರು ಧಾರಾಳವಾಗಿ ...ಬಂದಿತ್ತಾದರೂ ಅಧಿಕೃತ ದಾಖಲೆಗಳಲ್ಲಿ ಎಲ್ಲಿಯೂ ...ಹೆಸರು ದಾಖಲಾಗದಂತೆ ಈ ಕಿಲಾಡಿ ಐಪಿಎಸ್ ... ವಹಿಸಿದ್ದಾರೆ.

...ನಂತರ ಕಂಡೋರ ಆಸ್ತಿಯ ಮೇಲೆ ಕಣ್ಣಿಟ್ಟ ಈ ...ಕೂಟ ಇದ್ದಕ್ಕಿದ್ದಂತೆ ಒಂದು ದಿನ ದೊಡ್ಡಗುಬ್ಬಿಯ ... ನಂ.12ರ ಅಥಿನಾ ಟೌನ್‌ಶಿಪ್ ಮೇಲೆ ಜೆಸಿಬಿ ...ತ್ರಗಳ ಜೊತೆ ದಾಳಿಯಿಟ್ಟು ಕಾಂಪೌಂಡ್ ...ಡೆಯನ್ನು ನೆಲಸಮ ಮಾಡಿದ್ದಲ್ಲದೆ ಕೆಲವರು ನಿರ್ಮಿಸಿದ್ದ ...ಟ್ಟ ಮನೆಗಳನ್ನೂ ನೆಲಸಮ ಮಾಡಿದರು. ಇಷ್ಟೆಲ್ಲಾ ...ಎಂದರೆ ಆ ಅಥಿನಾ ಟೌನ್‌ಶಿಪ್‌ನ ಜಾಗವನ್ನು ತಮ್ಮ ...ನದ ಕೃಷಿಭೂಮಿಯೆಂದು ನಿರೂಪಿಸಲಿಕ್ಕಾಗಿ! ಅಷ್ಟು ...ವಲ್ಲದೆ ಸದರಿ ಭೂಮಿ ತಮ್ಮದೇ ಗುಂಪಿನ 'ಸಿಟಿ ... ಪ್ರಾಪರ್ಟೀಸ್'ಗೆ ಸೇರಿದ್ದೆಂದು ಒಂದು ಬೋರ್ಡನ್ನೂ ... ಬಿಟ್ಟರು.

...ಇದೆಲ್ಲಾ ಷಡ್ಯಂತ್ರದ ಒಂದು ಭಾಗ ಮಾತ್ರ. ಇದರ ...ಂದು ಭಾಗ ಮತ್ತಷ್ಟು ನಾಟಕೀಯ ತಿರುವುಗಳನ್ನು ಹೊಂದಿದೆ. ಅದು ಅಥಿನಾ ಟೌನ್‌ಶಿಪ್‌ನಲ್ಲಿ ಸೈಟು ಖರೀದಿಸಿದ್ದ ಎನ್‌ಆರ್‌ಐಗಳನ್ನು ಸದರಿ ಟೌನ್‌ಶಿಪ್‌ನ ಡೆವಲಪರ್ ಜೋಸೆಫ್ ಚಾಕೊ ವಿರುದ್ಧವೇ ಎತ್ತಿಕಟ್ಟುವ ಷಡ್ಯಂತ್ರ. ರಾಮಮೂರ್ತಿ ನಿರ್ದೇಶನದ ಈ ಷಡ್ಯಂತ್ರದಲ್ಲಿ ಜಾರ್ಜ್ ವರ್ಗೀಸ್, ಬಿಜು ಪರೇಲ್ ಎಂಬ ಐನಾತಿಗಳು ಪ್ರಮುಖ ಪಾತ್ರಧಾರಿಗಳಾಗಿದ್ದರು. ಈ ಮಂದಿ ಒಂದು ಕಾಲದಲ್ಲಿ ಜೋಸೆಫ್‌ನ ಬಳಿ ಪ್ಲಂಬಿಂಗ್ ಮತ್ತು ಎಲೆಕ್ಟ್ರಿಕ್ ಕೆಲಸ ಮಾಡಿಕೊಂಡಿದ್ದವರು. ಆತನ ಸಲುಗೆ ಬಳಸಿಕೊಂಡು ಆತನ ಕಂಪ್ಯೂಟರ್‌ನಿಂದ ಎನ್‌ಆರ್‌ಐ ನಿವೇಶನದಾರರ ವಿಳಾಸ ಮುಂತಾದ ವಿವರಗಳನ್ನು ಕದ್ದು ಅದನ್ನು ಐಪಿಎಸ್ ಗ್ಯಾಂಗ್‌ಸ್ಟರ್‌ಗೆ ಒಪ್ಪಿಸಿದರು.



ಶಂಕರ್ ರೆಡ್ಡಿ

ಜೋಸೆಫ್ ಚಾಕೋ ಎನ್‌ಆರ್‌ಐಗಳಿಗೆ ಮೋಸಮಾಡಿದ್ದಾನೆಂದು, ತಮ್ಮ ಜೊತೆ ಸೇರಿದರೆ ಆತನ ವಿರುದ್ಧ ಹೋರಾಡಬಹುದೆಂದು ಈ ನಿವೇಶನದಾರರಿಗೆ ಇ-ಮೈಲ್ ಮೂಲಕ ಮಾಹಿತಿ ಕಳಿಸಿ ಅವರನ್ನು ಜೋಸೆಫ್ ಚಾಕೋ ವಿರುದ್ಧವೇ ಎತ್ತಿಕಟ್ಟಲಾಯ್ತು. ಅಥಿನಾ ಟೌನ್‌ಶಿಪ್ ವೆಲ್‌ಫೇರ್ ಅಸೋಸಿಯೇಷನ್ ಎಂಬ ಸಂಸ್ಥೆಯೊಂದನ್ನು ಹುಟ್ಟುಹಾಕಲಾಯ್ತು. ಈ 420 ಸಂಸ್ಥೆಯ ಪದಾಧಿಕಾರಿಗಳು ನಿವೇಶನ ಮಾಲಿಕರಿಗೆ ಭಯ ಹುಟ್ಟಿಸಿ ತಮ್ಮ ನಿವೇಶನಗಳನ್ನು ಮೂರು ಕಾಸಿನ ಕಿಮ್ಮತ್ತಿಗೆ ರಾಮಮೂರ್ತಿ ಕೂಟದ ಬಾಯಿಗೆ ಹಾಕಿಸಿಬಿಟ್ಟರು. ಸಾಲದ್ದಕ್ಕೆ ಜೋಸೆಫ್ ವಿರುದ್ಧ ಕೇಸನ್ನೂ ಹಾಕಿಸಿಬಿಟ್ಟರು. ಹೀಗೆ ರಾಮಮೂರ್ತಿ ಅಂಡ್ ಗ್ಯಾಂಗ್‌ನ ಮೋಸಕ್ಕೆ ಬಲಿಯಾದ ಹಲವಾರು ಎನ್‌ಆರ್‌ಐಗಳು ತಮ್ಮ ಮೂರ್ಖತನಕ್ಕೆ ಈಗ ಪಶ್ಚಾತ್ತಾಪ ಪಟ್ಟುಕೊಳ್ಳುತ್ತಿರುವುದು ಬೇರೆಯದೇ ಕತೆ. ಆದರೆ ಕಾಲ ಮಿಂಚಿ ಹೋಗಿ ಕೆಲವರ ಆಸ್ತಿಪಾಸ್ತಿಗಳು ದುಷ್ಟಕೂಟಕ್ಕೆ ಪರಭಾರೆಯಾಗಿತ್ತು.

ಈ ಅಥಿನಾ ಟೌನ್‌ಶಿಪ್‌ನ ಜಾಗದಲ್ಲಿ ಸಿಎಂಆರ್ ಗ್ರೂಪ್‌ನವರು ಕಾಲೇಜೊಂದನ್ನು ಕಟ್ಟಲಿದ್ದಾರೆ ಎಂಬ ಸುದ್ದಿಯಿದೆ. ಆದರೆ ಇನ್ನೂ ಬಹುತೇಕ ಎನ್‌ಆರ್‌ಐಗಳು ಈ ಕೂಟಕ್ಕೆ ಶರಣಾಗದೇ ತಮ್ಮ ಹೋರಾಟ ಮುಂದುವರೆಸಿರುವುದು ಸಿಎಂಆರ್ ಕೂಟಕ್ಕೆ ನುಂಗಲಾರದ ತುತ್ತಾಗಿದೆ.


ಮುಂದುವರೆದ ಪ್ರಯತ್ನ

ಇಷ್ಟೆಲ್ಲಾ ನಡೆದಿದ್ದರೂ ಸ್ವಾಭಿಮಾನವನ್ನು ಬಿಟ್ಟುಕೊಡದ ಹಾಗೂ ಭಾರತದ ನ್ಯಾಯವ್ಯವಸ್ಥೆಯಲ್ಲಿ ನಂಬಿಕೆ ಇರುವ ಕೆಲವರು ತಮ್ಮ ಪ್ರಯತ್ನವನ್ನು ತೀವ್ರಗೊಳಿಸಿದ್ದಾರೆ. ವಿವಿಧ ನ್ಯಾಯಾಲಯಗಳಲ್ಲಿ ಕೇಸು ದಾಖಲಿಸಿದ್ದಾರೆ. ನ್ಯಾಯಾಲಯದ ನಿರ್ದೇಶನ ಪಡೆದು ರಾಮಮೂರ್ತಿಯ ವೈಟ್‌ಕಾಲರ್ ಕ್ರಿಮಿನಲ್‌ಗಳ ಮೇಲೆ ಪೊಲೀಸ್ ಕೇಸುಗಳನ್ನು ದಾಖಲಿಸಿದ್ದಾರೆ.

ಅಷ್ಟಕ್ಕೆ ಸುಮ್ಮನಾಗಿಲ್ಲ, ತಮ್ಮ ಸ್ವತ್ತುಗಳ ರಕ್ಷಣೆಗಾಗಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳಿಗೆ ಮೊರೆಯಿಟ್ಟಿದ್ದಾರೆ. ಕೇರಳದ ಸಂಪರ್ಕಗಳನ್ನು ಬಳಸಿ ಕೇಂದ್ರ ಸಚಿವ ಎ.ಕೆ.ಆಂಟನಿಯನ್ನು ಭೇಟಿಯಾಗಿದ್ದಾರೆ. ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿಗೂ ಮನವಿ ಸಲ್ಲಿಸಿದ್ದಾರೆ. ವಿದೇಶಾಂಗ ಮಂತ್ರಿ ವಯಲಾರ್ ರವಿ ಅವರನ್ನು ಕಂಡು ತಮ್ಮ ಗೋಳು ತೋಡಿಕೊಂಡಿದ್ದಾರೆ. ಪರಿಣಾಮವಾಗಿ ವಯಲಾರ್ ರವಿ ದಿನಾಂಕ 31-07-2013ರಂದು ತಮ್ಮ ಅಧಿಕೃತ ಲೆಟರ್‌ಹೆಡ್‌ನಲ್ಲಿ ಸಿಎಂ ಸಿದ್ದರಾಮಯ್ಯನವರಿಗೆ ಪತ್ರ ಬರೆದು ಎನ್‌ಆರ್‌ಐಗಳ ಆಸ್ತಿಯನ್ನು ಭೂಗಳ್ಳರಿಂದ ರಕ್ಷಿಸುವಂತೆ ಕೋರಿದ್ದಾರೆ.

ಐಪಿಎಸ್ ಅಧಿಕಾರಿಯೇ ಕ್ರಿಮಿನಲ್ ಕೃತ್ಯಗಳಲ್ಲಿ ತೊಡಗಿಸಿಕೊಂಡಿರುವ ಈ ಪ್ರಕರಣ ಸಿಬಿಐ ತನಿಖೆಗೆ ಯೋಗ್ಯವಾದದ್ದು. ವಿಧಾನಸೌಧವನ್ನೇ ಟೆಂಡರ್‌ನಲ್ಲಿ ಕೊಂಡುಕೊಳ್ಳುವ ದಾರ್ಷ್ಟ್ಯ ತೋರಿದ್ದ ಗಣಿಧಣಿಗಳ ಕೊರಳಿಗೆ ಬಿದ್ದಿರುವ ನ್ಯಾಯದ ಕುಣಿಕೆ ಇಂಥಾ ದುಷ್ಟ ಅಧಿಕಾರಿಗಳಿಗೂ ಬಿದ್ದಾಗ ನೊಂದವರಿಗೆ ನ್ಯಾಯಾಂಗದ ಮೇಲೆ, ಪೊಲೀಸ್ ವ್ಯವಸ್ಥೆಯ ಮೇಲೆ ಒಂದಿಷ್ಟಾದರೂ ಭರವಸೆ ಮೂಡುತ್ತದೆ.

■ ದೊಡ್ಡಿಪಾಳ್ಯ ನರಸಿಂಹಮೂರ್ತಿ



Athina Township before demolishing



After Demolishin in 2006

ಮೊನ್ನೆ ಮೊನ್ನೆ 2013ರ ಹೊಸ ವರ್ಷವನ್ನು ಸ್ವಾಗತಿಸಿದ ಸಂಭ್ರಮ ಇನ್ನೂ ಹಸಿರಾಗಿರುವಾಗಲೇ 2013 ತನ್ನ ಸರದಿ ಮುಗಿಸಿ ಕಾಲಗರ್ಭದಲ್ಲಿ ಸೇರಿ ಹೋಗುತ್ತಿದೆ. ಈ ಅವಧಿಯಲ್ಲಿ ಕರ್ನಾಟಕ ಕಂಡ ವಿಶೇಷ ರಾಜಕೀಯ-ಸಾಂಸ್ಕೃತಿಕ ವಿಚಾರಗಳಿಂದ ಹಿಡಿದು ತಮಾಷೆ-ವಿವಾದ-ದುರಂತಗಳ ಸಶೇಷಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

2013 ವಿದ್ಯಮಾನಗಳು

ವ್ಯಕ್ತಿಗಳು-ವಿವಾದ-ತಮಾಷೆ-ದುರಂತ

ಎಸ್.ಆರ್. ಹಿರೇಮಠ

ಸಂಗಯ್ಯ ರಾಚಯ್ಯ ಹಿರೇಮಠ. ಇವತ್ತಿನ ಕರ್ನಾಟಕದಲ್ಲಿ ಅಧಿಕಾರ ದುರುಪಯೋಗ, ಸ್ವಜನಪಕ್ಷಪಾತ ಹಾಗೂ ಭ್ರಷ್ಟಾಚಾರದಲ್ಲಿ ನಿರತರಾಗಿರುವ ರಾಜಕಾರಣಿ ಉದ್ಯಮಿ ಹಾಗೂ ಅಧಿಕಾರಿಗಳ ಪಾಲಿನ ಬೆಂಕಿಚೆಂಡಿನಂತಾಗಿದ್ದಾರೆ. ಧಾರವಾಡದ ಸಮಾಜ ಪರಿವರ್ತನಾ ಸಮುದಾಯ ಸಂಸ್ಥೆಯ ಮುಖ್ಯಸ್ಥರಾಗಿರುವ ಎಸ್.ಆರ್. ಹಿರೇಮಠ ಗಣಿ ಹಗರಣಗಳ ವಿರುದ್ಧ ಯುದ್ಧ ಘೋಷಿಸಿ ಕೆಲವರಿಗೆ ಶಿಕ್ಷೆ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈಗ ಬೆಂಗಳೂರು ಸುತ್ತಮುತ್ತ ಕೈಗಾರಿಕೆ-ಉದ್ದಿಮೆಗಳ ಸ್ಥಾಪನೆಯ ನೆಪದಲ್ಲಿ ರೈತರ ಭೂಮಿ ಕಿತ್ತುಕೊಂಡು ಲಾಭ ಮಾಡಿಕೊಂಡ ಖದೀಮರ ವಿರುದ್ಧ ಹಿರೇಮಠರ ಹೋರಾಟ ಚಾಲನೆ ಪಡೆಯುತ್ತಿವೆ. ಮೆಕಾನಿಕಲ್ ಇಂಜಿನಿಯರಿಂಗ್ ಓದಿ ಕೆಲಕಾಲ ಲೆಕ್ಚರರ್ ಆಗಿದ್ದು ನಂತರ ಎಂಬತ್ತರ ದಶಕದಲ್ಲಿ ಅಮೆರಿಕಾದ ಫೆಡರಲ್ ರಿಸರ್ವ್ ಬ್ಯಾಂಕ್‌ನಲ್ಲಿ ಕೆಲ ವರ್ಷ ಕೆಲಸ ಮಾಡಿ ಬಂದಿರುವ ಹಿರೇಮಠರ ಕಾಳಜಿಗಳು ಪ್ರಾಮಾಣಿಕವಾಗಿವೆ. ಆದರೆ ಅವರ ಸಮಾಜ ಪರಿವರ್ತನಾ ಸಮುದಾಯವು 2002ರಲ್ಲಿ ಟಾಟಾ ಉದ್ಯಮ ಗುಂಪಿನ ಸರ್ ದೊರಬ್‌ಜಿ ಟಾಟಾ ಟ್ರಸ್ಟ್‌ನಿಂದ ಒಮ್ಮೆಗೆ 85 ಲಕ್ಷ ರೂಪಾಯಿಗಳ ದೇಣಿಗೆ ಪಡೆದಿತ್ತು, ಆ ಹಣದ ವೆಚ್ಚದ ಲೆಕ್ಕ ಪಾರದರ್ಶಕವಾಗಿವೆ ಹಾಗೂ ದುರುಪಯೋಗವಾಗುವುದಿಲ್ಲ ಎಂಬುದು ಖಚಿತ ನಿಜ. ಆದರೆ ಭೂಕಬಳಿಕೆ ಹಾಗೂ ಸರ್ಕಾರಿ ಸೌಲಭ್ಯಗಳ ದುರ್ಬಳಕೆಯಲ್ಲಿ ಟಾಟಾ ಗ್ರೂಪ್ ಸಾಚಾ ಏನಲ್ಲ ಎಂಬುದು ಎಲ್ಲರಿಗೂ ತಿಳಿದಿದೆ. ಹಿರೇಮಠ್ ಇಂತಹ ಇಬ್ಬಂದಿತನ ಮೀರಬೇಕಿದೆ.

ಕರ್ನಾಟಕಕ್ಕೆ ಈಗ ಹಿರೇಮಠ್ ತರದ ಸಾಮಾಜಿಕ ಕಾಳಜಿಗಳಿರುವ ಜನ ಬೇಕು. ಆದರೆ ಅವರ ಹೋರಾಟದಲ್ಲಿ ಜನಸಾಮಾನ್ಯರು ಕೇವಲ ಪ್ರೇಕ್ಷಕರಾಗುವ ಸ್ಥಿತಿ ತರಕೂಡದು. ಹಿರೇಮಠ ತಮ್ಮ ಸಮಾಜ ಪರಿವರ್ತನಾ ಚಟುವಟಿಕೆಗೆ ಜನಸಾಮಾನ್ಯರ ಬೆಂಬಲ ಹಾಗೂ ಜನರ ಹಣ ಬಳಕೆಯಾಗುವಂತಹ ಒಂದು ವ್ಯವಸ್ಥೆ ರೂಪಿಸಿದರೆ ಒಳಿತು. ತೊಂಬತ್ತರ ದಶಕದಲ್ಲಿ ಅವರು ರೂಪಿಸಿದ ಕುಸನೂರ್ ಸತ್ಯಾಗ್ರಹ ಹೋರಾಟದ ಯಶಸ್ಸಿನ ಮಾದರಿ ಈಗಲೂ ಒಂದು ಮಾದರಿಯಂತಿದೆ.

ಮಾನಸಿ ಸೋನಿ

ಇಂಡಿಯಾ ದೇಶದ ಮೇಲೆ ಆವರಿಸಿಕೊಳ್ಳುತ್ತಿರುವ ಫ್ಯಾಸಿಸ್ಟ್ ನರೇಂದ್ರ ಮೋದಿಯ ಓಟಕ್ಕೆ ತೊಡರುಗಾಲಿಟ್ಟು ಬೀಳಿಸಬಲ್ಲ ಒಂದು ಸಾಧ್ಯತೆಯಾಗಿ ಈ ಮಾನಸಿ ಸೋನಿ ಕಾಣುತ್ತಿದ್ದಾಳೆ.

ಈಕೆ ಮೂಲತಃ ಗುಜರಾತಿಯಾದರೂ ಓದಿದ್ದು ಬೆಳೆದಿದ್ದು ಬೆಂಗಳೂರಿನಲ್ಲಿ, ಬಲಿಷ್ಠ ನವ ಬ್ರಾಹ್ಮಣ ಭಾರತ ಕಟ್ಟುವ ಅರ್ಜೆನ್ಸಿಯಲ್ಲಿದ್ದ ಮೋದಿ ತನ್ನ ಕಚ್ಚೆಯನ್ನು ಬಿಗಿಯಾಗಿ ಕಟ್ಟಿಕೊಳ್ಳಲು ಮರೆತದ್ದು ಈ ಮಾನಸಿಯನ್ನು ಭೇಟಿಯಾದಾಗ. ಕೆಲಕಾಲ ಮೋದಿಯೊಂದಿಗೆ ಇರುತ್ತಾ, ತನಗೆ ಬೇಕಾದ ಧನಲಾಭ ಮಾಡಿಕೊಂಡ ಮಾನಸಿಗೆ ಈ ಹಿಂದೂವಾದಿ ಮುದುಕನ ಸಹವಾಸ ಸಾಕೆನಿಸಿತೇನೊ, ಅಪನಿಂದ ಪಾರಾಗಲು ಪ್ರಯತ್ನಿಸಿದಳು. ಆದರೆ ಮೋದಿ ಇದರಿಂದ ಅದೆಷ್ಟು ಡಿಸ್ಟರ್ಬ್ ಆದನೆಂದರೆ ಮಾನಸಿ ಮೇಲೆ ಕಣ್ಣಿಡಲು ತನ್ನ ಪೊಲೀಸರನ್ನೇ ಗೂಢಚರ್ಯೆಗೆ ಕಳುಹಿಸಿ ಅದೆಲ್ಲಾ ಈಗ ದೊಡ್ಡ ರಾದ್ಧಾಂತವಾಗಿದೆ. ಮೋದಿ ಕಕ್ಕಾಬಿಕ್ಕಿಯಾಗಿದ್ದಾನೆ. ಮಾನಸಿ ನಾಪತ್ತೆಯಾಗಿದ್ದಾಳೆ. RSS ತನ್ನ ಪ್ರಧಾನಿ ಅಭ್ಯರ್ಥಿಯ ಸೆಕ್ಸ್ ಸ್ಕ್ಯಾಂಡಲ್ ವಿವಾದ ಹೀಗೆ ಭೂತಾಕಾರವಾಗಿ ಬೆಳೆಯುತ್ತಿರುವುದನ್ನು ನೋಡಿ ಪೆಚ್ಚಾಗಿವೆ.

ಭಾರತವು ನಾಳೆ ಮೋದಿಯ ಫ್ಯಾಸಿಸ್ಟ್ ನಾಯಕತ್ವದಿಂದ ಪಾರಾದರೆ ಅದಕ್ಕೆ ಈ ದೇಶದ ಸೆಕ್ಯುಲರ್‌ವಾದಿ ಜನ, ರಾಜಕೀಯ ಪಕ್ಷಗಳ ಜೊತೆಗೆ ಮಾನಸಿ ಸೋನಿಯ ಕೊಡುಗೆಯೂ ಇರುತ್ತದೆ.

ಯು.ಆರ್. ಅನಂತಮೂರ್ತಿ

ವಿಶೇಷವಾದ ಹೊಸದೇನನ್ನೂ ಬರೆಯದಿದ್ದರೂ ತಮ್ಮ ಚಿಂತನೆ ಹಾಗೂ ಮಾತುಗಳ ಮೂಲಕ 2013ರ ಉದ್ದಕ್ಕೂ ಸಾಹಿತಿ ಅನಂತಮೂರ್ತಿ ಸುದ್ದಿಯಲ್ಲಿದ್ದರು. ಭ್ರಷ್ಟ ರಾಜಕೀಯ, ಬ್ರಾಹ್ಮಣ್ಯ, ಕೋಮುವಾದ, ನರೇಂದ್ರ ಮೋದಿ ಮುಂತಾದ ಸಮಕಾಲೀನ ಆಗುಹೋಗುಗಳ ಕುರಿತಂತೆ ಜನಪರ ನಿಲುವುಗಳನ್ನು ನಿಷ್ಠುರವಾಗಿ ಪ್ರತಿಪಾದಿಸಿದ ಅವರು ಅನೇಕ ಪಟ್ಟಭದ್ರರ ವಿರೋಧವನ್ನೂ ಹಾಗೂ ಅಸಂಖ್ಯ ಜನರ ವಿಶ್ವಾಸ ಹಾಗೂ ಬೆಂಬಲವನ್ನೂ ಪಡೆದುಕೊಂಡರು. ತಮ್ಮ ಅನಾರೋಗ್ಯ, ಬಳಲಿಕೆಗಳ ನಡುವೆಯೂ ಹೇಳಬೇಕಾದದ್ದನ್ನು ಹೇಳಿಯೇ ಹೇಳಿದರು. ಬರೆದು ತಿಳಿಸಬೇಕಾಗಿ ಬಂದಾಗ ಬರೆದೂ ಬರೆದರು. ಒಂದೆರಡು ದಶಕಗಳ ಹಿಂದಿನ ಅವರು ಮಾತುಗಳಿಗಿಂತ ಈ ಸಂದರ್ಭದ ಮಾತು ನಿಲುವುಗಳಲ್ಲಿ ಜನಪರ ಕಾಳಜಿಗಳು ಇನ್ನಷ್ಟು ಪ್ರಾಮಾಣಿಕವಾಗಿ ಹಾಗೂ consistent ಆಗಿ ವ್ಯಕ್ತಗೊಳ್ಳುತ್ತಿವೆ.

ಸೌಜನ್ಯ

ದೇವರು ಹಾಗೂ ಮನುಷ್ಯರ ನಡುವಿನ ವ್ಯವಹಾರಗಳಲ್ಲಿ ಕೆಟ್ಟದ್ದನ್ನೂ ಸಹ ಮಾಡಲು ಸಾಧ್ಯತೆಯಿರುವುದು ಮಧ್ಯವರ್ತಿ ಪುರೋಹಿತರಿಗೆ. ಅಂತದನ್ನು ನಿರಂತರವಾಗಿ ನಿರ್ಲಜ್ಜವಾಗಿ ನಡೆಸಿಕೊಂಡು ಬರುತ್ತಿದ್ದ ಧರ್ಮಸ್ಥಳದ ಖೂಳರು ಪಾಪ್ಯುಲರ್ ದೇವರು ಮಂಜುನಾಥ ಸ್ವಾಮಿಯ ಕೀರ್ತಿಗೆ ಕಳಂಕ ತಂದರು. ಗ್ರಾಮೀಣ ಬಡಜನರ ಉದ್ಧಾರದ ಹೆಸರಲ್ಲಿ ನೂರಾರು ಕೋಟಿ ರೂಪಾಯಿ ಸರ್ಕಾರದ ಹಣವನ್ನು ತನ್ನ ಕಂಟ್ರೋಲಿಗೆ ತಗೊಂಡು ಅದರಲ್ಲೂ ಮಾರ್ವಾಡಿಯಂತೆ ಲೇವಾದೇವಿ ನಡೆಸುತ್ತಾ 'ಛೀಫ್' ಎನಿಸಿಕೊಳ್ಳುತ್ತಿದ್ದಾರೆ. ಈ ಧರ್ಮಕ್ಷೇತ್ರದ ಕ್ರಿಮಿನಲ್ ಕೀಚಕರಿಗೆ ಬಲಿಯಾದ ಸೌಜನ್ಯ ಕರ್ನಾಟಕದ ನಾಗರಿಕ ಸಮಾಜದ ಸಾಕ್ಷಿಪ್ರಜ್ಞೆಯನ್ನು ಕೆಣಕಿ, ಕೆರಳಿಸಿ ನ್ಯಾಯ ಕೇಳುವ ಮನೋಭಾವ ಬೆಳೆಯಲು ಕಾರಣಳಾಗಿದ್ದಾಳೆ.

ನೂರ್ ಶ್ರೀಧರ್-ಸಿರಿಮನೆ

ಕರ್ನಾಟಕದಲ್ಲಿ ಕಳೆದ ಎರಡು ದಶಕಗಳಿಂದ ನಡೆಯುತ್ತಿರುವ ನಕ್ಸಲ್ ಸಶಸ್ತ್ರ ಹೋರಾಟದ ವಿಭಜಿತ ಗುಂಪಿನ ನಾಯಕರಾದ ನೂರ್ ಶ್ರೀಧರ್ ಹಾಗೂ ಸಿರಿಮನೆ ನಾಗರಾಜ್, ತಮ್ಮ ಭೂಗತ ಜೀವನ ತೊರೆದು ಮುಖ್ಯವಾಹಿನಿಗೆ ಬರುವ ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಇದು ನಕ್ಸಲ್ ಚಳವಳಿ ಕುರಿತಂತೆ ಯಾರೋ ಇಬ್ಬರ ವೈಯಕ್ತಿಕ ಭಿನ್ನಾಭಿಪ್ರಾಯದಂತೆ ಕಾಣದೆ ಒಟ್ಟಾರೆ ಇಂಡಿಯಾದ ಮಾವೋವಾದಿ ಸಶಸ್ತ್ರ ಗೆರಿಲ್ಲಾ ಹೋರಾಟದ ಸೈದ್ಧಾಂತಿಕ ತಳಹದಿ, ಹೋರಾಟದ ಹಾದಿ ಹಾಗೂ ಈ ದೇಶದ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಅನುಸರಿಸಬೇಕಾದ ಹೊಸ ಮಾನದಂಡಗಳ ಕುರಿತ ಚರ್ಚೆಯಾಗಿಯೂ ಬೆಳೆಯುತ್ತಿರುವುದು ಒಂದು ಅನಿರೀಕ್ಷಿತ ಬೆಳವಣಿಗೆಯಾಗಿದೆ. ಸಹಜವಾಗಿಯೇ ಅಸಂಖ್ಯ ಜನರ ಅತೃಪ್ತಿ ಹಾಗೂ ಅಸಮಾಧಾನಗಳು ಈ ಈರ್ವರ ಮೂಲಕ ವ್ಯಕ್ತಗೊಳ್ಳುತ್ತಿರಲೂಬಹುದು.

ಎಲ್ಲಾ ಜನಪರ ಸಮೂಹ ಚಳವಳಿಗಳು ನಿತ್ರಾಣಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಇವೆಲ್ಲಕ್ಕೂ ಜೀವಚೈತನ್ಯ ನೀಡಬಲ್ಲ ಹೊಸ ಚಿಂತನೆಗಳು, ಹೋರಾಟದ ಹೊಸ ಮಾರ್ಗಗಳನ್ನು ಅನ್ವೇಷಿಸಬೇಕಾದ ಕಾಲಘಟ್ಟ ಇದಾಗಿವೆ. ಈಗ ಮುಖ್ಯವಾಹಿನಿಗೆ ಬರಲಿಚ್ಛಿಸಿರುವ ನೂರ್ ಹಾಗೂ ಸಿರಿಮನೆಯವರು ತಾವೂ ಸಹ ಅಂತಹ ಪ್ರಕ್ರಿಯೆಯ ಭಾಗವಾಗುವ ಇರಾದೆ ಹೊಂದಿರುವಂತೆ ಕಾಣುತ್ತಿದೆ. ಇವರಿಬ್ಬರೂ 'ಶರಣಾಗತಿಯ ಪ್ಯಾಕೇಜ್' ಮೂಲಕ ಹೊರಬರಲು ನಿರಾಕರಿಸಿ ಸರ್ಕಾರ ತಮ್ಮ ಮೇಲೆ ಹಾಕಿರುವ ಸುಳ್ಳು ಕೇಸುಗಳನ್ನಷ್ಟೆ ಹಿಂಪಡೆದರೆ ಸಾಕು ಎಂದಿರುವುದು ಹೋರಾಟಗಾರರ ಆತ್ಮಗೌರವ ಹಾಗೂ ಘನತೆಯನ್ನು ರಕ್ಷಿಸಿಕೊಳ್ಳುವ ವಿಚಾರವಾಗಿದೆ.

ಸಿದ್ದರಾಮಯ್ಯನವರ ಸರ್ಕಾರ ಈಗ ಯಾವ ರೀತಿ ಕ್ರಮ ಕೈಗೊಳ್ಳುತ್ತದೆ ಎಂಬುದು ಕುತೂಹಲಕರವಾಗಿವೆ. ನೂರ್ ಹಾಗೂ ಸಿರಿಮನೆಗೆ ಮುಖ್ಯವಾಹಿನಿಗೆ ಬರಲು ಅವಕಾಶ ಸಿಕ್ಕಿದರೆ ಅದು ಕಾಡಿನಲ್ಲಿರುವ ಹಾಗೂ ಭೂಗತರಾಗಿರುವ ಇನ್ನು ಅನೇಕರಿಗೆ ಸಾಮಾಜಿಕ ನ್ಯಾಯ ಸಾಧಿಸಲು ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿಯೇ ಕಾರ್ಯ ಚಟುವಟಿಕೆಗಳನ್ನು ನಡೆಸಲು ಇರುವ ಅವಕಾಶಗಳ ಬಗ್ಗೆ ಮನವರಿಕೆಯಾಗುವ ಸಾಧ್ಯತೆಗಳೂ ಇವೆ.

ಒಟ್ಟಿನಲ್ಲಿ ಸಿದ್ದರಾಮಯ್ಯ ಈ ಅವಕಾಶವನ್ನು ಕಳೆದುಕೊಳ್ಳಕೂಡದಷ್ಟೆ.

ಶಂಕರ್ ಬಿದರಿ



ಶಂಕರ್ ಬಿದರಿ ತಮ್ಮಿಡೀ ಪೊಲೀಸ್ ಸರ್ವಿಸ್‌ನಲ್ಲಿ ಇಷ್ಟು ಸ್ಥಳಾಂತರಗಳನ್ನು ಕಂಡಿದ್ದರೋ ಇಲ್ಲವೊ ಆದರೆ ರಾಜಕಾರಣಿಯಾದ ಮೇಲೆ ನಿರಂತರ ಪಕ್ಷಾಂತರಗಳಂತೂ ಬಿಟ್ಟೂಬಿಡದೆ ನಡೆಯುತ್ತಿವೆ.

ಬಿದರಿ ಈಗ ಬಿಜೆಪಿ ಸೇರುತ್ತಾರೆ ಎಂಬುದೊಂದು ಲೇಟೆಸ್ಟ್ ನ್ಯೂಸ್.

ಮೊದಲಿಗೆ ಅವರು ಕಾಂಗ್ರೆಸ್ ಸೇರಿದರು. ಹಾಗೆ ಪಕ್ಷ ಸೇರಿದ ತಕ್ಷಣ ಅಸೆಂಬ್ಲಿ ಎಲೆಕ್ಷನ್‌ಗೆ ಟಿಕೆಟ್ ಕೇಳಿ 'ನೋ' ಅನಿಸಿಕೊಂಡರು.

ನಂತರ ಸಂಸತ್‌ಗೂ ಕಾಂಗ್ರೆಸ್ ಟಿಕೆಟ್ ಸಿಗಲಾರದೆನಿಸಿತೇನೊ ಅರ್ಜೆಂಟಾಗಿ ಸಮಾಜವಾದಿ ಪಕ್ಷ ಸೇರಿದರು. ಅಷ್ಟೇ ಅರ್ಜೆಂಟಾಗಿ ಹೊರದಬ್ಬಿಸಿಕೊಂಡಿದ್ದೂ ಆಯಿತು. ಹೀಗೆ ತಮ್ಮ ರಾಜಕೀಯ ಜೀವನಾರಂಭದ ಮೊದಲ ಆರು ತಿಂಗಳು ಕಾಂಗ್ರೆಸ್‌ನಲ್ಲೂ ಇನ್ನು ಮೂರು ತಿಂಗಳು ಸಮಾಜವಾದಿ ಪಾರ್ಟಿಯಲ್ಲೂ ಇದ್ದ ಬಿದರಿ ಮುಂದೆ ಯಾವ ಪಾರ್ಟಿಗೆ ಹೋಗಬೇಕೆಂದು ತಲೆಕೆಡಿಸಿಕೊಳ್ಳುತ್ತಿದ್ದಾರೆ. ಅದರಲ್ಲಿ ಬಿಜೆಪಿಯೂ ಅವರ ಆಯ್ಕೆಗಳಲ್ಲಿ ಒಂದಾಗಿರಬಹುದು. ಅಲ್ಲೂ ಸಹ ಪಾರ್ಲಿಮೆಂಟ್ ಚುನಾವಣೆಗೆ ಬಿಜೆಪಿ ಟಿಕೆಟ್ ಕೊಟ್ಟರೆ ಬರ್ತೀನಿ ಅನ್ನಬಹುದೇ ವಿನಃ ಬಿಜೆಪಿಗೆ ಹೋಗಿ ಪುಗಸಟ್ಟೆ ಕೆಲಸ ಮಾಡಲಾರರು ಬಿದರಿ.

'ನಾನು ಅಧಿಕಾರದಾಹದಿಂದ ರಾಜಕೀಯಕ್ಕೆ ಬಂದಿಲ್ಲ' ಎಂದು ಸದಾ ಹೇಳುವ ಬಿದರಿ ತಿಂಗಳಿಗೊಂದು ರಾಜಕೀಯ ಪಕ್ಷಕ್ಕೆ ಹೋಗಿ ಬಂದು ಮಾಡುತ್ತಿರುವುದೇ ಅಧಿಕಾರ ಗಿಟ್ಟಿಸಲು ಎಂಬುದು ಜನಸಾಮಾನ್ಯರಿಗೆಲ್ಲಾ ಈಗಾಗಲೇ ಗೊತ್ತಾಗಿದೆ. ಇದು ಹೀಗೇ ಮುಂದುವರೆದರೆ ಈತ ಜೋಕರ್ ಅನಿಸಿಕೊಳ್ಳುವ ದಿನ ದೂರವಿರಲಾರದು.









ಲೂಸಿಯಾ, 6-5=2 ಇತ್ಯಾದಿ ಮೈನಸ್ ಸಿನಿಮಾಗಳ ಸಕ್ಸೆಸ್

ದೊಡ್ಡ ಸ್ಟಾರ್‌ಗಳಿರದ, ಗ್ಲಾಮರ್ರು, ಫಾರಿನ್ ಲೋಕೆಷನ್, ಭಯಂಕರ ಪ್ರಚಾರಗಳೆಲ್ಲಾ ಮೈನಸ್ ಆಗಿದ್ದ ಕೆಲವು ಸಿನಿಮಾಗಳು ಗೆದ್ದಿರುವುದನ್ನು ನೋಡಿ ಗಾಂಧಿನಗರಿಗರಿಗೆ ತಲೆಕೆಟ್ಟು ಹೋಗಿರಬಹುದು. ಇಲ್ಲಿ ಗಾಂಧಿನಗರಿಗ ಅಂದರೆ ರೆಡಿಮೇಡ್ ಫಾರ್ಮುಲ ಇಟ್ಟುಕೊಂಡು ಶೂಟಿಂಗ್‌ನ ಮುಹೂರ್ತ ಹಾಗೂ ಮುಕ್ತಾಯಗಳೆರಡರಲ್ಲೂ ತಪ್ಪದೆ ಕುಂಬಳಕಾಯಿ ಒಡೆದು, ತನ್ನ ಸಿನಿಮಾ ಗೆಲ್ಲಿಸುವಂತೆ ದೇವರು, ಜ್ಯೋತಿಷಿ ಹಸ್ತಸಾಮುದ್ರಿಕೆಯವರಲ್ಲಿ ದಯನೀಯನಾಗಿ ಬೇಡುವ ಜನ ಎಂದರ್ಥ. ಒಂದು ಸಿನಿಮಾ ಗೆಲ್ಲಲಿ ಇಲ್ಲ ಸೋಲಲಿ ಅದ್ಯಾಕೆ ಹಾಗಾಯಿತೆಂದು ಅರ್ಥವಾಗದ, ಅರ್ಥಮಾಡಿಕೊಳ್ಳಲೂ ಯತ್ನಿಸದ ಖಾಲಿ ಡಬ್ಬಗಳವು. ಲೂಸಿಯಾ ಗೆದ್ದಾಗ, ಜಟ್ಟ ಜನರ ಮೆಚ್ಚುಗೆ ಪಡೆದಾಗ, 6-5=2 ಎಂಬ ಡಾಕ್ಯುಮೆಂಟರಿ ತರದ ಸಿಂಪಲ್ ತರಲೆ ಸಿನಿಮಾ ದುಡ್ಡು ಬಾಚುವಾಗ ಈ ಗಾಂಧಿನಗರಿಗ ಚಡಪಡಿಸುತ್ತಿರುತ್ತಾನೆ. ತಾನು ಅದ್ದೂರಿ ಸಿನಿಮಾ ತೆಗೆದರೂ ಕಳೆಕೊಂಡ ದುಡ್ಡು ಬೆನ್ನು ಹತ್ತಿರುವ ಸೋಲನ್ನು ನೆನೆನೆನೆದು ಮೈ ಪರಚಿಕೊಳ್ಳುತ್ತಿರುತ್ತಾನೆ. ನಮ್ಮಲ್ಲಿ ಸಿನಿಮಾಗಳನ್ನು ಸಿನಿಮಾ ಜಗತ್ತಿನ ಸಿದ್ಧ ವಿಶ್ಲೇಷಣೆ, ವಿಮರ್ಶೆಗಳಿಂದ ನೋಡಿ ಮಾತಾಡುವ ಪ್ರಾಕ್ಟೀಸ್ ಇದೆಯೇ ವಿನಃ ಜನ ಕೋಟಿಯ ಮನೋಭಾವದ ಮಾನದಂಡದಲ್ಲಿಲ್ಲ. ಹಾಗಾಗಿ ಯಜಮಾನ, ಮುಂಗಾರು ಮಳೆ ತರದ ಸ್ಟಾರ್‌ಗಳಿದ್ದ ಸಿನಿಮಾ ಹಿಟ್ ಆದಾಗಲಾಗಲಿ, ಲೂಸಿಯಾ, 6-5 ತರದ ಅನಾಮಿಕರ ಚಿತ್ರಗಳಾಗಲಿ ಹಣ ಮಾಡಿ ಗೆದ್ದಾಗ ಗಾಂಧಿನಗರಿಗ ಅದರ ಆಳಕ್ಕೆ ಹೋಗಿ ಅರ್ಥ ಹುಡುಕುವುದಿಲ್ಲ. ಒಂದು ಸಿನಿಮಾ ಸಕ್ಸೆಸ್ ಆಗುವಾಗ ಅದರ ಕತೆ, ಸಂಭಾಷಣೆ, ಘಟನೆಗಳೆಲ್ಲಾ ಆಯಾ ಕಾಲಘಟ್ಟದ ಜನಸಾಮಾನ್ಯರ ಲೋಕಜ್ಞಾನ, ಮನರಂಜನೆಯ ಬಯಕೆ, ರಸಿಕತೆ, ಪೆದ್ದುತನ, ಭಾವುಕತೆ, ಭಯ, ಜೀವನ ಪ್ರೀತಿಯೊಂದಿಗೆ ರಿಲೇಟ್ ಆಗುವಂತಿರುತ್ತದೆ. ಈ ಅಂಶಗಳನ್ನೆಲ್ಲಾ ನಿತ್ಯ ಬದುಕಿನಿಂದ ಹೆಕ್ಕಿ ತೆಗೆದು ಸಿನಿಮಾ ಆಗಿಸಲು ಕೇವಲ ಹಣವಿದ್ದರೆ ಸಾಕಾಗುವುದಿಲ್ಲ.



ದುನಿಯಾ ಸೂರಿ, ಯೋಗರಾಜ ಭಟ್, ನಾಗಶೇಖರ್, ಗುರುಪ್ರಸಾದ್ ತರದ ಬದುಕಿನ ನಾಡಿಮಿಡಿತ ಬಲ್ಲ ನಿರ್ದೇಶಕರು ಕಿಶೋರ್, ನೀನಾಸಂ ಸತೀಶ್ ಧನಂಜಯ್ ತರದ ಕಲಾವಿದರು ಬೇಕಾಗುತ್ತಾರೆ.

ಕನ್ನಡ ಸಿನಿಮಾ ಈಗ ಹೊಸ ಹೊರಳು ಹಾದಿಯತ್ತ ಪಯಣ ಶುರು ಮಾಡಿದಂತಿದೆ. ವಿಭಿನ್ನ ರೀತಿಯ ಹೊರತರದ ಸಿನಿಮಾಗಳನ್ನು ಪ್ರೇಕ್ಷಕ ತಿರಸ್ಕರಿಸಲಾರನೆಂಬುದೇ ಈ ಕ್ಷಣದ ಖುಷಿಯ ವಿಚಾರ.

...ಂಚಪ್ಪಗೌಡನ ದುಷ್ಟಕೂಟದ ಪತನ ಸನ್ನಿಹಿತ




...ನವರಿ 5ರ ಒಕ್ಕಲಿಗರ ಸಂಘದ ಚುನಾವಣೆಗಿನ್ನೂ ... ಬಾಕಿ. ಆಗಲೇ ಹಣ, ಹೆಂಡ, ಮಾಂಸಖಂಡಗಳ ... ಸಮಾರಾಧನೆಗೆ ಕೈಯಿಟ್ಟ ಹಾಲೀ ಅಧ್ಯಕ್ಷ ...ಡ ಮತ್ತಾತನ ದುಷ್ಟಕೂಟದ ವಿರುದ್ಧ ಸಮಸ್ತ ... ಮತದಾರರೆಲ್ಲ ಸಾರಾಸಗಟಾಗಿ ...ದ್ದಿರುವಂತಿದೆ.

...ಕ್ಕೆ ಕಾರಣಗಳು ಒಂದೆರಡಲ್ಲ. ...ಪಾಳ್ಯದ 2000 ಕೋಟಿ ...ಬೆಲೆಬಾಳುವ ಸಂಘದ ಸೊತ್ತನ್ನು ...ಮಾಫಿಯಾ ಜೊತೆ ಕೈಜೋಡಿಸಿ ...ಕೈತಪ್ಪುವಂತೆ ಮಾಡಿದ ಅಧ್ಯಕ್ಷ ...ಡನನ್ನು ಯಾವುದೇ ಕಾರಣಕ್ಕೂ ಒಕ್ಕಲಿಗರಿಗೆ ಮನಸಿದ್ದಂತಿಲ್ಲ. ... ಮತ್ತು ಅಧ್ಯಕ್ಷ ಕೆಂಚಪ್ಪನ ಗ್ಯಾಂಗ್ ...ಂಡು ಲೂಟಿ ಹೊಡೆದ ...ದ 98 ಎಕರೆ ಜಮೀನನ್ನು ...ಜನಾಂಗದ ಬಡಬಗ್ಗರ ಏಳಿಗೆ ...ನವಾಗಿ ಕೊಟ್ಟ ರಂಗಮ್ಮನ ಆತ್ಮ ಅದೆಂತು ...ೋ ಗೊತ್ತಿಲ್ಲ, ಆದರೆ ಮಹಾತಾಯಿ ರಂಗಮ್ಮನ ...ೂ ಅಧ್ಯಕ್ಷ ಕೆಂಚಪ್ಪನನ್ನು ಬಿಡುವ ಲಕ್ಷಣಗಳಿಲ್ಲ. ...ತಿ ತಲಾ ಓಟೊಂದಕ್ಕೆ ಹದಿನೈದು ಸಾವಿರ ... ಮಾತ್ರವಲ್ಲದೆ ಬೆಂಗಳೂರಿನ ಅಷ್ಟ ದಿಕ್ಕುಗಳಲ್ಲೂ ...ಗಳೋಪಾದಿಯಲ್ಲಿ ಹುಟ್ಟು ಹಾಕಿದ ತನ್ನ ಬಾರು, ...ರ್‌ಗಳಲ್ಲಿ ಮತದಾರರಿಗೆ ಬಿಟ್ಟೀ ಗುಂಡೂತುಂಡಿನ ...ೂಡುತ್ತಿರುವ ಕೆಂಚಪ್ಪನ ಬೆನ್ನಿಗಿರುವುದು ಬಿಜೆಪಿ ...ದ ಆರ್. ಅಶೋಕ್ ಮತ್ತು ಹೊಸಕೋಟೆಯ ... ಬಚ್ಚೇಗೌಡ. ಬಿಜೆಪಿಯ ಕರಾಳ ಆಳ್ವಿಕೆಯಲ್ಲಿ ...ಆಗಿದ್ದ ಅಶೋಕ್ ಮತ್ತು ಮಂತ್ರಿಯಾಗಿದ್ದ ಬಚ್ಚೇಗೌಡರ ಕುತಂತ್ರದ ಫಲವಾಗೇ ಡ್ರಾಪ್‌ಔಟ್ ಸೀಟು ದಂಧೆಯಲ್ಲಿ ಇನ್ನೇನು ಜೈಲು ಪಾಲಾಗಲಿದ್ದ ಕೆಂಚಪ್ಪ ಬಚಾವಾಗಿಬಿಟ್ಟ. ಇಲ್ಲದಿದ್ದರೆ ಶಿವಾಜಿನಗರದ ಮುಸ್ಲಿಂ ರೌಡಿಗಳ ಸಮೇತ ಕೆಂಚಪ್ಪನೂ ಕಂಬಿ ಎಣಿಸುತ್ತಿದ್ದ.

ಬಚ್ಚೇಗೌಡನ ಹಂತಕ ಪಡೆ

ಅವತ್ತು ಜೈಲು ಪಾಲಾಗಲಿದ್ದ ತನ್ನನ್ನು ಬಚಾವು ಮಾಡಿದ ಋಣ ತೀರಿಸಬೇಕಲ್ಲವೆ? ಅದಕ್ಕೆಂದು ಕೆಂಚಪ್ಪ ಮಾಡಿದ ಮತ್ತೊಂದು ಅನಾಹುತವೆಂದರೆ ಬಿಜೆಪಿ ನಾಯಕ ಆರ್. ಅಶೋಕ್‌ರ ಖಾಸಾ ತಮ್ಮ ಎ. ರವಿ ಎಂಬ ಹುಟ್ಟಾ ನೆಲಗಳ್ಳನನ್ನು ಒಕ್ಕಲಿಗರ ಸಂಘದ ಅಖಾಡಕ್ಕೆ ಕರೆತಂದದ್ದು. ಸಾಲದ್ದಕ್ಕೆ ಹೊಸಕೋಟೆಯ ರಕ್ತದಾಹಿ ಬಚ್ಚೇಗೌಡನ ತಮ್ಮನ ಮಗ ರಾಜಶೇಖರಗೌಡ, ಇದೇ ಹೊಸಕೋಟೆಯ ಮತ್ತೊಬ್ಬ ಬಚ್ಚೇಗೌಡನ ಬಂಟ ಹುಲ್ಲೂರ್ ಮಂಜ, ಬಚ್ಚೇಗೌಡರ ತಂಗಿಯ ಮಗ ಅಶ್ವತ್ಥ್, ಮಹಾ ಪಾಖಂಡಿ ಶಿವಣ್ಣ; ಇತ್ಯಾದಿ ಕೊಲೆಗಡುಕರು, ನೆಲಗಳ್ಳರು, ಲಿಕ್ಕರ್ ಖದೀಮರು, ಸ್ಮಗ್ಲರುಗಳು, ವಂಚಕರೆಲ್ಲರನ್ನೂ ಸಿಂಡಿಕೇಟು ಮಾಡಿಕೊಂಡು ಶತಗತಾಯ ಮತ್ತೊಮ್ಮೆ ಒಕ್ಕಲಿಗರ ಸಂಘಕ್ಕೆ ಕೆಂಚಪ್ಪ ಒಕ್ಕರಿಸಲೆತ್ನಿಸುತ್ತಿರುವುದಕ್ಕೂ ಕಾರಣವಿದೆ.

ಅದು ಡ್ರಾಪ್‌ಔಟ್ ಸೀಟ್ ವಂಚನೆ ಪ್ರಕರಣದಿಂದ



ತಾನು ಜೈಲು ಪಾಲಾಗದ ಹಾಗೆ ಬಚಾವಾಗುವ ಷಡ್ಯಂತ್ರ. ಇದಲ್ಲದೆ ಸಜ್ಜೇಪಾಳ್ಯದ 2000 ಕೋಟಿಯ ಸಂಘದ ಸೊತ್ತನ್ನು ಲ್ಯಾಂಡ್ ಡೀಲರುಗಳ ಜೊತೆ ಸೇರಿ ನುಂಗಿ ಹಾಕಿದ್ದರ ಬಾಬ್ತು ಈಗಾಗಲೇ ನೂರಾರು ಕೋಟಿಯ ಕಮೀಷನ್ ಕೂಡ ನುಂಗಿದ್ದಾನೆ. ಇದಲ್ಲದೆ ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರಿನಲ್ಲಿ ಸಂಘದ ಹೆಸರಲ್ಲಿ ನಡೆಸಿದ ಭೂಖರೀದಿ ಹಗರಣ, ಕಟ್ಟಡ ಕಾಮಗಾರಿ ವಂಚನೆ, ಸಂಘದ ಕಾಂಪೌಂಡ್ ಗೋಡೆಯ ದಿಂಡುಕಲ್ಲುಗಳನ್ನೂ ಬಿಡದೆ ಕದ್ದೊಯ್ದದ್ದು, ಕಿಮ್ಸ್ ಖರೀದಿ ದೋಖಾ ಇತ್ಯಾದಿ ಪ್ರಕರಣಗಳ ಬಗ್ಗೆಯೇನಾದರೂ ತನಿಖೆಯಾಯಿತೆಂದರೆ ಕೆಂಚಪ್ಪ ಸದ್ಯಕ್ಕಂತೂ ಜೈಲಿಂದ ಹೊರಬರುವುದು ಕಷ್ಟ.

ತಾನು ಜೈಲು ಪಾಲಾಗದೇ ಬಚಾವಾಗಬೇಕೆಂದರೆ ಮತ್ತೊಮ್ಮೆ ಗೆಲ್ಲುವುದರ ಹೊರತಾಗಿ ಆತನಿಗೆ ಬೇರೆ ದಾರಿಯಿಲ್ಲ. ಅದಕ್ಕೆಂದೇ ಆರ್. ಅಶೋಕ್ ಮತ್ತು ಹೊಸಕೋಟೆಯ ಬಚ್ಚೇಗೌಡರನ್ನು ಮುಂದಿಟ್ಟುಕೊಂಡಿದ್ದಾನೆ. ಸಂಘವನ್ನು ಕೊಳ್ಳೆ ಹೊಡೆದ ದುಡ್ಡನ್ನೇ ಮತದಾರರಿಗೆ ತಿನ್ನಿಸಿ ಭ್ರಷ್ಟ ಮತದಾರರದ್ದೇ ಹೊಸ ಗ್ಯಾಂಗ್ ಒಂದನ್ನು

⏭ 13

ಪ್ರೊ. ನಾಗರಾಜ್ ಎಂಬ ಹೋರಾಟಗಾರನ [illegible]

ಈ ಹಿಂದೆ ಗುತ್ತಲಗೌಡರು ಅಧ್ಯಕ್ಷರಾಗಿದ್ದಾಗ ವಿವಿಪುರಂನ ಕಲೆ ಮತ್ತು ವಿಜ್ಞಾನ ಕಾಲೇಜುಗಳನ್ನು ಸ್ಥಳಾಂತರಿಸಲು ಯತ್ನಿಸಿದ್ದರ ವಿರುದ್ಧ ಮೂರು ಸಾವಿರ ವಿದ್ಯಾರ್ಥಿಗಳನ್ನು ಸಂಘಟಿಸಿ ಬೀದಿಗಿಳಿದವರು ಪ್ರೊ. ನಾಗರಾಜ್. ಅದೇ ಕಾರಣಕ್ಕೆ ಸಂಘದ ಆಡಳಿತ ಮಂಡಳಿ ಅವರನ್ನು ಸಸ್ಪೆಂಡ್ ಮಾಡಿತ್ತು. ಮುಂದೆ ಪ್ರೊ. ನಾಗರಾಜ್‌ರೇ ಸಂಘದ ಚುನಾವಣೆಗೆ ನಿಂತು ಗೆದ್ದು ಬಂದರು. ಆವತ್ತಿನಿಂದ ಇವತ್ತಿನವರೆಗೆ ಜನಾಂಗದ ಹಿತಾಸಕ್ತಿಗಳ ಪರವಾಗಿ ಹೋರಾಡಿಕೊಂಡೇ ಬಂದ ಪ್ರೊಫೆಸರ್ ಬಗ್ಗೆ ಇಡೀ ಒಕ್ಕಲಿಗ ಸಮೂಹಕ್ಕೆ ಪ್ರಶ್ನಾತೀತ ಗೌರವಾದರವಿದೆ.



ನಾಗರಾಜ್

ಪ್ರೊ. ವೆಂಕಟಗಿರಿಗೌಡ, ಮರಿಗೌಡ, ಗುತ್ತಲಗೌಡ, ರಾಮೇಗೌಡ, ಬಸವೇಗೌಡ ಮತ್ತು ಕೆ. ಪುಟ್ಟಸ್ವಾಮಿ (ಗಾರ್ಡನ್)ಯಂಥ ಹಿರೀಕರು ಹೇಗೆ ಸಂಘ ಮತ್ತು ಜನಾಂಗದ ಅಭಿವೃದ್ಧಿಗೆ ನಿಸ್ವಾರ್ಥದಿಂದ ದುಡಿದರೋ ಆ ಸಾಲಿಗೆ ಸೇರುವ ಮತ್ತೊಂದು ಹೆಸರೆಂದರೆ ಅದು ಪ್ರೊ. ನಾಗರಾಜ್. ಸಜ್ಜೇಪಾಳ್ಯದ ಸಾವಿರ ಕೋಟಿಯ ಸಂಘದ ಸೊತ್ತನ್ನು ಅಧ್ಯಕ್ಷ ಕೆಂಚಪ್ಪಗೌಡನೇ ನಿಂತು ರಿಯಲ್ ಎಸ್ಟೇಟ್ ಖದೀಮರ ಬಾಯಿಗೆ ಹಾಕಲು ಯತ್ನಿಸಿದ್ದರ ವಿರುದ್ಧ ಅಪ್ಪಾಜಿಗೌಡರು ಸುಪ್ರೀಂಕೋರ್ಟ್ ತನಕ ನಡೆಸಿದ ಹೋರಾಟಕ್ಕೆ ಹೆಗಲಿಗೆ ಹೆಗಲಾಗಿ ನಿಂತವರು ನಾಗರಾಜ್.

ಇವತ್ತು ವಿವಿಪುರಂ ಸಂಜೆ ಕಾಲೇಜು ದೇಶದ ಪ್ರತಿಷ್ಠಿತ ಸಂಜೆ ಕಾಲೇಜುಗಳ ಪೈಕಿ ಒಂದೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದರೆ ಅದರ ಅಷ್ಟೂ ಶ್ರೇಯಸ್ಸಿಗೆ ಪ್ರೊ. ನಾಗರಾಜ್ ಮಾತ್ರವೇ ಕಾರಣಕರ್ತ. ನಿಸ್ವಾರ್ಥ ಸೇವೆ ಮತ್ತು ಅಸಾಧ್ಯ ಸಂಘಟನಾ ಚಾತುರ್ಯದ ಫಲವಾಗೇ ಬೆಂಗಳೂರು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾದ ನಾಗರಾಜ್ ಆವತ್ತಿನಿಂದ ಇವತ್ತಿನ ತನಕ ಸಂಘದ ಲೂಟಿಗೆ ನಿಂತಿದ್ದ ಅಧ್ಯಕ್ಷ ಕೆಂಚಪ್ಪಗೌಡನ ದಕಾಯಿತಿ ಕೂಟದ ವಿರುದ್ಧ ಹೋರಾಡಿಕೊಂಡೇ ಬಂದಿದ್ದಾರೆ.

ಸಂಘದ ಸಂವಿಧಾನಕ್ಕೆ ತಿದ್ದುಪಡಿ ತಂದು ಸಂಘದ ಆಸ್ತಿ ಮತ್ತು ಸಂಪತ್ತಿಗೆ ದ್ರೋಹ ಮಾಡಿದವರ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸುವುದು ಮತ್ತು ಸತತ ಎರಡು ಬಾರಿಗಿಂತ ಹೆಚ್ಚು ಸಾರಿ ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗದ ಹಾಗೆ ಕಡಿವಾಣ ಹಾಕುವುದು ಅವರ ಮುಖ್ಯ ಪ್ರಣಾಳಿಕೆ. ಒಕ್ಕಲಿಗ ವಿಶ್ವವಿದ್ಯಾಲಯ ಸ್ಥಾಪಿಸುವ ಅವರ ಬಹುದಿನಗಳ ಕನಸು ಇವತ್ತಿಗೂ ನನಸಾಗಿಲ್ಲ. 'ಕೋಟಾ' ಪದ್ಧತಿಯ ಅವ್ಯವಹಾರವನ್ನು ಸಂಪೂರ್ಣವಾಗಿ ತೊಡೆದುಹಾಕುವ, ವಿಶ್ವಮಾನವ ಕುವೆಂಪು ಮತ್ತು ಬಾಲಗಂಗಾಧರನಾಥ ಸ್ವಾಮಿಗಳ ಹೆಸರಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿ ಸ್ಥಾಪಿಸುವ, ಜನಾಂಗದ ವಿದ್ಯಾರ್ಥಿಗಳಿಗೆ ಕೆಎಎಸ್, ಐಎಎಸ್, ಐಪಿಎಸ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡುವ, ವೃತ್ತಿ ಶಿಕ್ಷಣದಲ್ಲಿ ಜನಾಂಗದವರಿಗೆ ವಿಶೇಷ ಆದ್ಯತೆ ಮತ್ತು ರಾಜ್ಯಾದ್ಯಂತ ಸಕ್ರಿಯವಾಗಿರುವ ಒಕ್ಕಲಿಗ ಸಂಘಟನೆಗಳಿಗೆ ಸಂಘದ ಮಾನ್ಯತೆ ನೀಡುವ ಗುರಿ ಹೊತ್ತೇ ಚುನಾವಣೆಗೆ ಸ್ಪರ್ಧಿಸಿರುವ ಪ್ರೊ. ನಾಗರಾಜ್ 10 ಕೋಟಿ ರೂಪಾಯಿಗಳ ವಿಶೇಷ ದತ್ತಿ ನಿಧಿ ಸ್ಥಾಪಿಸಿ ಅದರ ಬಡ್ಡಿಯಿಂದ ಪಿಯುಸಿ, ತಾಂತ್ರಿಕ, ವೈದ್ಯಕೀಯ ಶಿಕ್ಷಣದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಮಹದಾಸೆಯಿಟ್ಟುಕೊಂಡಿರುವುದು ಜನಾಂಗದ ಬಗ್ಗೆ ಅವರಿಗಿರುವ ಕಾಳಜಿಗೆ ಪ್ರತೀಕದಂತಿದೆ.

ಕನಿಷ್ಠ ಸಂಘ ಮತ್ತದರ ಆಸ್ತಿಪಾಸ್ತಿಗಳನ್ನು ಖದೀಮರು ಲೂಟಿ ಮಾಡದಂತೆ ಕಾಯುವುದಕ್ಕಾದರೂ ಪ್ರೊ. ನಾಗರಾಜ್ ಅನಿವಾರ್ಯವಾಗಿ ಗೆಲ್ಲಲೇಬೇಕಿದೆ.



ಇಂಥಾ ಪ್ರಾಮಾಣಿಕರಿಗೆ ಎಂಥಾ ದುರ್ಗತಿ

ಒಕ್ಕಲಿಗರ ಹಿತಾಸಕ್ತಿ ಮತ್ತು ಜನಾಂಗದ ಸೇವೆಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟ ಇನ್ನೂ ಅನೇಕರು ಚುನಾವಣಾ ಕಣದಲ್ಲಿದ್ದಾರೆ. ಈ ಪೈಕಿ ಪ್ರೊ. ಮಲ್ಲಯ್ಯನವರ ಸೇವೆ ಕಮ್ಮಿಯದೇನಲ್ಲ. ಹಾಗೆ ಪ್ರೊ. ನಾಗರಾಜ್ ತಂಡದಿಂದ ಸ್ಪರ್ಧಿಸಿರುವ ಡಾ. ಉದ್ದಂಡಯ್ಯ ಕುವೆಂಪು ವಿಚಾರಧಾರೆಗಳ ಕಟ್ಟಾ ಪ್ರತಿಪಾದಕ ಮತ್ತು ಶೈಕ್ಷಣಿಕ ಸಂಘಟಕ. ಹಾಲಿ ನಿರ್ದೇಶಕ ಎ. ಪ್ರಸಾದ್ ಸಂಘದ ಉಳಿವಿಗಾಗಿ ನಡೆಸಿದ ಹೋರಾಟಗಳು ಮತ್ತು ಕೆಂಚಪ್ಪನ ಲೂಟಿಯ ವಿರುದ್ಧ ನೇರವಾಗಿ ಸೆಣಸಾಡಿದ್ದನ್ನು ಯಾರೂ ಮರೆಯುವಂತಿಲ್ಲ. ವಕೀಲರ ಸಂಘದ ಮಾಜಿ ಅಧ್ಯಕ್ಷ ಕೆ.ಎನ್. ಪುಟ್ಟೇಗೌಡ ಒಕ್ಕಲಿಗ ಜನಾಂಗದ ಪಾಲಿಗೆ ಅಮೂಲ್ಯ ಆಸ್ತಿಯೇ. ಹಾಗೆ ದೊಡ್ಡಬಳ್ಳಾಪುರದ ಮುನೇಗೌ... ಕೊಡುಗೆ ಕೂಡ ಕಮ್ಮಿಯದೇನಲ್ಲ.

ದುರಂತವೆಂದರೆ ಇಂಥ ಪ್ರಾಮಾಣಿಕರಿಗೆ ಹಣ ಹೆಂಡ ಹಂಚುವ ಶಕ್ತಿಯಿಲ್ಲ. ಏಕೆಂದರೆ ಇವರ್ಯಾರೂ ಸಂಘವನ್ನು ದೋಚಿದವರಲ್ಲ. ದೋಚಲೆಂದು ಸ್ಪರ್ಧಿಸಿಯೂ ಇಲ್ಲ.

[illegible] ಒಕ್ಕಲಿಗರನ್ನು ಬೀದಿಪಾಲು ಮಾಡುವುದನ್ನು ನಿಲ್ಲಿಸಲಿ - ಕೆ.ಕೃಷ್ಣಮೂರ್ತಿ

...ಗಡಿ ತಾಲ್ಲೂಕಿನ ಪೂಜಾರಿಪಾಳ್ಯ ಎಂಬ ...ವೊಂದರಿಂದ ಬೆಂಗಳೂರಿಗೆ ...ನ್ನ ಸ್ವಂತ ಶ್ರಮದಿಂದ ಬೆಳೆದ ...ವ ಲಾಭವನ್ನೂ ನಿರೀಕ್ಷಿಸದೆ ಬಡ ಒಕ್ಕಲಿಗ ವಿದ್ಯಾರ್ಥಿಗಳ ...ಸಕ್ಕೆ ನೆರವಾಗಿದ್ದೇನೆ. ...ದಲ್ಲಿ ಒಕ್ಕಲಿಗರ ಸಂಘದ ...ಆಳಿಸು ತ್ತೇನೆಯೇ ಜೊರತು ...ಗೆ ನಿಂತದ್ದು ಯಾವುದೇ ... ಸ್ವಾರ್ಥಕ್ಕಾಗಲಿ ಅಲ್ಲ. ಒಬ್ಬ ...ಗಿ ನಮ್ಮ ಜನಾಂಗದ ... ಈ ರೀತಿ ಖದೀಮರು ...ಡುತ್ತಿರುವುದನ್ನು ಕಂಡೇ ರೊಚ್ಚಿಗೆದ್ದು ಎಲೆಕ್ಷನ್‌ಗೆ ... ಒಕ್ಕಲಿಗರ ಸಂಘ ಹುಟ್ಟಿದ್ದೇ ಹಳ್ಳಿಗಾಡಿನ ...ರ್ಥಿಗಳ ಏಳಿಗೆಗಾಗಿಯೇ ಹೊರತು ...ಶ್ರೀಮಂತರ ಧನಾಪಿಂಗಳ....!




...ಕೆ. ಕೃಷ್ಣಮೂರ್ತಿ ಎಂಬ ಸಹಕಾರಿ ಧುರೀಣನ... ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ...ಗಿ, ಬಿಬಿಆರ್ ಮತ್ತು ಆರ್‌ಬಿಸಿ ಬ್ಯಾಂಕ್ ... ಸಹಕಾರ ಸಂಘದ ಅಧ್ಯಕ್ಷರಾಗಿ ಸಹಕಾರಿ ... ಸ್ಪರ್ಧೆ ಇದ ಸಾಧನೆಗೈದ ಕೆ. ಕೃಷ್ಣಮೂರ್ತಿ ... ಒಕ್ಕಲಿಗರ ಸಂಘದ ಕಟ್ಟಡ ನಿರ್ಮಾಣಕ್ಕೆ, ... ಸಮಾರಂಭ ಹಾಗೂ ಗ್ರಾಮದೇವತೆಗಳ ... ಜೀರ್ಣೋದ್ಧಾರಕ್ಕೆ ಆರ್ಥಿಕ ನೆರವಾಗಿದ್ದಾರೆ. ಮಾಗಡಿ ತಾಲ್ಲೂಕು ವಿಚಾರ ವೇದಿಕೆಯನ್ನು ಹುಟ್ಟುಹಾಕಿ ಕುವೆಂಪು ವಿಚಾರಧಾರೆಗಳ ಪ್ರಚಾರಗೈದರು.

ಪ್ರತಿವರ್ಷ ವಿದ್ಯಾಭ್ಯಾಸಕ್ಕಾಗಿ ನೆರವು ಯಾಚಿಸಿ ಬರುವ ಬಡ ಒಕ್ಕಲಿಗರ ಮಕ್ಕಳ ಅಸಹಾಯಕತೆ ಮತ್ತು ಸಂಕಷ್ಟಕ್ಕೆ ಸಂಘದ ಅಧಿಪತಿಗಳು ಕಿಂಚಿತ್ತೂ ಸ್ಪಂದಿಸದೇ ನಿಷ್ಕ್ರಿಯರಾಗಿದ್ದದ್ದಕ್ಕೆ ರೋಸತ್ತೇ ನಾನು ಸಂಘದ ಬಡ ಒಕ್ಕಲಿಗರಿಗಾಗಿ ವಿದ್ಯಾಸಂಸ್ಥೆ ಮತ್ತು ಹಾಸ್ಟೆಲ್ ಸೌಲಭ್ಯ ಕಲ್ಪಿಸುವುದೇ ನನ್ನ ಮೂಲ ಉದ್ದೇಶ. ಒಕ್ಕಲಿಗರೆಂದರೆ ಕೇವಲ ನಗರವಾಸಿಗಳಲ್ಲ, ಹಳ್ಳಿಗಾಡಿನ ರೈತಾಪಿಗಳಿಗೂ ಸಂಘದ ಸಹಾಯ ಲಭ್ಯವಾಗಬೇಕು. ಕೇರಳ, ತಮಿಳುನಾಡು, ಆಂಧ್ರದ ಒಕ್ಕಲಿಗರಿಗೂ ಸಂಘದ ಸಹಾಯಹಸ್ತ ದೊರೆಯುವಂತಾಗಬೇಕು. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಕೆಂಪೇಗೌಡ ಜಿಲ್ಲೆ ಎಂದು ನಾಮಕರಣ ಮಾಡಬೇಕು. ಒಕ್ಕಲಿಗರೆಂದರೆ ರೈತಾಪಿಗಳು. ಬಿಡಿಎ, ಕೆಐಎಡಿಬಿ, ಸರ್ಕಾರಗಳು ಯಾರೋ ಶ್ರೀಮಂತರ ಉದ್ದಿಮೆ, ವಸತಿಗಾಗಿ ಒಕ್ಕಲಿಗರ ಭೂಮಿ ಕಿತ್ತುಕೊಂಡು ಅವರನ್ನು ಬೀದಿಪಾಲು ಮಾಡುತ್ತಿರುವುದರ ವಿರುದ್ಧ ಸಂಘವನ್ನು ಹೋರಾಟಕ್ಕಿಳಿಸುವುದೇ ನನ್ನ ಸ್ಪರ್ಧೆಯ ಮುಖ್ಯ ಉದ್ದೇಶ ಎನ್ನುತ್ತಾರೆ ಕೃಷ್ಣಮೂರ್ತಿ.

ಸದ್ಯ ಕೃಷ್ಣಮೂರ್ತಿ ಪರ ಯುವ ಒಕ್ಕಲಿಗರಲ್ಲಿ ಅಲೆಯೊಂದಿರುವುದು ಕೂಡ ನಿಚ್ಚಳವಿದೆ.

ಡಿಸಿಕೆ ಕಾಳೇಗೌಡರ [illegible] ಮುಂದೆ

ಅಪ್ಪಾಜಿಗೌಡರ ತಂಡದ ಆಧಾರ ಸ್ತಂಭ ಅಂತಿದ್ದರೆ ಅದು ಡಿಸಿಕೆ ಕಾಳೇಗೌಡ ಎಂಬ ಎಲೆಮರೆಯ ಕಾಯಿ.




ಈ ಹಿಂದೆ ಒಂದಲ್ಲ ಮೂರು ಬಾರಿ ಸಂಘದ ಡೈರೆಕ್ಟರಾಗಿ ಗೆದ್ದು ಬಂದ ಕಾಳೇಗೌಡ ಯಾವತ್ತಿಗೂ ಪ್ರಚಾರ ಬಯಸಿದವರಲ್ಲ. ತಾನಾಯಿತು ತನ್ನ ಜನಾಂಗದ ಸೇವೆಯಾಯಿತು ಎಂಬಂತಿದ್ದು ಪ್ರತಿನಿತ್ಯ ಒಬ್ಬನಲ್ಲ ಒಬ್ಬ ಬಡ ಒಕ್ಕಲಿಗ ವಿದ್ಯಾರ್ಥಿಗೆ ... ಕೈಲಾದ ಸಹಾಯ ಮಾಡುವುದು ... ನಿತ್ಯ ಕಾಯಕ. ಕೆಂಚಪ್ಪನ ಗ್ಯಾಂಗ್ ಜನಾಂಗದ ... ಆಸ್ತಿಗೆ ಬಾಯಿ ಹಾಕುತ್ತಿದ್ದರೆ ... ಇದೇ ಕಾಳೇಗೌಡ ... ಆಸ್ತಿ ಉಳಿಸುವಲ್ಲಿ ಅಪ್ಪಾಜಿಗೌಡರ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದ ಒಂದೇ ಕಾರಣಕ್ಕೆ ಕೆಂಚಪ್ಪನ ಗ್ಯಾಂಗ್ ಬಹಿರಂಗ ಸಭೆಯಲ್ಲೇ ಕಾಳೇಗೌಡರ ಮೇಲೆ ಹಲ್ಲೆಗೆ ಯತ್ನಿಸಿತ್ತು.

ಕೆಂಚಪ್ಪನ ಗೂಂಡಾಗಿರಿ, ಬೆದರಿಕೆ ಯಾವುದಕ್ಕೂ ಮಣಿಯದೆ ಜನಾಂಗದ ಹಿತಾಸಕ್ತಿಗಾಗಿ ... ಕಾಳೇಗೌಡ ಒಂದಾನೊಂದು ಕಾಲದ ವಿದ್ಯಾರ್ಥಿ ... [illegible]


ಒಕ್ಕಲಿಗರ ಚುನಾವಣೆ: ಮಂಡ್ಯದ 'ಸಕ್ಕರೆ'ಗೆ 'ಮನಿ' ಮಸಲತ್ತು!




ಕುಮಾರ್



ನಾರಾಯಣಮೂರ್ತಿ



ರಾಮಕೃಷ್ಣ




ಕುಮಾರ್‌ಗೌಡ




ನಲ್ಲಿಗೆರೆ ಬಾಲು

ಜನವರಿ 5 ಸನಿಹವಾಗುತ್ತಿದ್ದಂತೆ ಒಕ್ಕಲಿಗರ ಸಂಘದ ಚುನಾವಣಾ ಕಾವೂ ಜೋರಾಗುತ್ತಿದೆ. ಮಂಡ್ಯ ಜಿಲ್ಲೆಯಲ್ಲಂತೂ ಚುನಾವಣಾ ಕಣ ದಿನದಿಂದ ದಿನಕ್ಕೆ ರಂಗು ತುಂಬಿಕೊಳ್ಳುತ್ತಿದೆ. ಬರೋಬ್ಬರಿ 2 ಡಜನ್ ಅಭ್ಯರ್ಥಿಗಳು ಕಣದಲ್ಲಿದ್ದು ಕುಲಬಾಂಧವರ ಮತ ಗಿಟ್ಟಿಸಲು ಹಣ-ಹೆಂಡದ ಹೊಳೆಯನ್ನೇ ಹರಿಸುತ್ತಿದ್ದಾರೆ. ದುಡ್ಡಿರುವ ಅಭ್ಯರ್ಥಿಗಳಂತು ಬೆಳಗ್ಗೆ ಸಭೆ ನಡೆಸಿ, ಮತದಾರರ ಮನೆ ಬಾಗಿಲಿಗೆ ಎಡತಾಕಿ ಬೆವರು ಸುರಿಸುವುದರ ಜೊತೆಗೆ ಸಂಜೆಯಾಗುತ್ತಿದ್ದಂತೆ ಬಾಡೂಟ, ಎಣ್ಣೆಯ ಘಾಟಿನಲ್ಲಿ ಮತದಾರರನ್ನು ತಪ್ಪನೆ ತೋಯಿಸುತ್ತಿದ್ದಾರೆ. ಪ್ರತಿ ತಾಲ್ಲೂಕು, ಹೋಬಳಿ ಕೇಂದ್ರಗಳಲ್ಲೂ ಬಾಡೂಟ- ಮದ್ಯಾರಾಧನೆ ಎಗ್ಗಿಲ್ಲದೆ ನಡೆಯುತ್ತಿದೆ.

ಈ ಬಾರಿಯ ಒಕ್ಕಲಿಗರ ಸಂಘದ ಚುನಾವಣೆ ವಿಧಾನಸಭಾ ಚುನಾವಣೆಯನ್ನೂ ನಾಚಿಸುವಷ್ಟು ಅಬ್ಬರದಲ್ಲಿದೆ. ಇದುವರೆಗೂ ನಡೆಯುತ್ತಿದ್ದ ಚುನಾವಣೆಯಲ್ಲಿ ನಾಲ್ಕು ಸಾವಿರ ಚಿಲ್ಲರೆಯಷ್ಟಿದ್ದ ಮತದಾರ ಒಲವು ಗಳಿಸುವುದು ಅಭ್ಯರ್ಥಿಗಳಿಗೆ ಕಷ್ಟವಾಗುತ್ತಿರಲಿಲ್ಲ, ಆದರೆ, ಈ ಬಾರಿ ಜಿಲ್ಲೆಯಲ್ಲಿ 37,881 ಮತದಾರರಿದ್ದು ಅಭ್ಯರ್ಥಿಗಳು ವಿಜಯಲಕ್ಷ್ಮಿ ಒಲಿಸಿಕೊಳ್ಳಲು ಸಾಕಷ್ಟು ಬೆವರು ಸುರಿಸುವಂತಾಗಿದೆ. ಈ ಹಿಂದೆ ನಾಲ್ಕು ಸಾವಿರ ಮತದಾರರಿಗೆ ತಲೆಗಿಷ್ಟು ಎಂದು ಹಣ ಹಂಚುತ್ತಾ ಗೆಲ್ಲುತ್ತಿದ್ದ




ಶ್ರೀನಿವಾಸ್



ಶಿವಲಿಂಗಯ್ಯ



ಬೊಮ್ಮಯ್ಯ



ರವೀಂದ್ರ

ಅಭ್ಯರ್ಥಿಗಳು, ಮತದಾರರ ಸಂಖ್ಯೆ ಬರೋಬ್ಬರಿ 9 ಪಟ್ಟು ಜಾಸ್ತಿಯಾಗಿರುವುದರಿಂದ ಖರ್ಚು ಮಾಡುವ ಹಣವನ್ನು ನೆನೆದು ಸಂಕಟ ಪಡುತ್ತಿದ್ದಾರೆ.

ಮಂಡ್ಯದಲ್ಲಿ 14,023, ನಾಗಮಂಗಲದಲ್ಲಿ 6,915, ಮಳವಳ್ಳಿಯಲ್ಲಿ 3,486, ಮದ್ದೂರಿನಲ್ಲಿ 8,588, ಕೆ.ಆರ್.ಪೇಟೆಯಲ್ಲಿ 1,555, ಶ್ರೀರಂಗಪಟ್ಟಣದಲ್ಲಿ 1,871 ಹಾಗೂ ಪಾಂಡವಪುರದಲ್ಲಿ 1,443 ವೋಟಿಂಗ್ ಸದಸ್ಯರಿದ್ದಾರೆ. ಸಂಘದ ಚುನಾವಣೆಯಲ್ಲಿ ಪ್ರತಿ ಮತದಾರ ನಾಲ್ಕು ಅಭ್ಯರ್ಥಿಗಳಿಗೆ ಮತ ನೀಡಬಹುದು. ಆದರೆ ಗೆದ್ದು ಸಂಘದ ನಿರ್ದೇಶಕರಾದರೆ ಸುಭಿಕ್ಷವಾಗಿ ಕಮಾಯಿ ಮಾಡಿಕೊಳ್ಳಬಹುದೆಂಬ ಆಲೋಚನೆ ಅಭ್ಯರ್ಥಿಗಳಲ್ಲಿ ಬಲ ತುಂಬಿದೆ. ಬಲಾಢ್ಯ ಅಭ್ಯರ್ಥಿಗಳಂತು ವೋಟಿಗೆ 1 ರಿಂದ 2 ಸಾವಿರ ಫಿಕ್ಸ್ ಮಾಡಿ ಕೋಟಿ ಕೋಟಿ ರೊಕ್ಕವನ್ನು ಚೆಲ್ಲುತ್ತಿದ್ದಾರೆ.

ಶತಮಾನದ ಹಿಂದೆ ಜನಾಂಗದ ಅಭಿವೃದ್ಧಿ ದೃಷ್ಟಿಯಿಂದ ಹುಟ್ಟಿಕೊಂಡ ಒಕ್ಕಲಿಗರ ಸಂಘ ಇಂದು ಸ್ವಾರ್ಥಿಗಳ, ಸಮಯಸಾಧಕರ ಅಡ್ಡೆಯಾಗಿದೆ. ಜನಾಂಗಕ್ಕೆ ಸ್ಪಂದಿಸಬೇಕೆಂಬ ಕಳಕಳಿ ಇರುವ ವ್ಯಕ್ತಿಗಳ ಸಂಖ್ಯೆ ತುಂಬಾ ವಿರಳ. ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾಗಿ ಆಯ್ಕೆಯಾಗಿ ಹೋಗಿರುವವರಲ್ಲಿ ಕೆಲವರನ್ನು ಬಿಟ್ಟರೆ ಉಳಿದ ನಿರ್ದೇಶಕರು ಸಂಘದ ಹಾಗೂ ಒಕ್ಕಲಿಗರ ಅಭಿವೃದ್ಧಿಗೆ ಕಡಿದು ಕಟ್ಟೆ ಹಾಕಿದ್ದು ಅಷ್ಟಕಷ್ಟೆ. ಸಂಘದ ಅಧ್ಯಕ್ಷ ಆಕಾಂಕ್ಷಿಯ ಹಡಬೆ ದುಡ್ಡಿಗೆ ಜೈ ಎಂದು ರೊಕ್ಕ ಜೇಬಿಗಿಳಿಸುವ ನಿರ್ದೇಶಕರು ನಂತರ ಸಂಘದ ಮೆಡಿಕಲ್, ಇಂಜಿನಿಯರಿಂಗ್, ಡೆಂಟಲ್ ಕಾಲೇಜುಗಳಲ್ಲಿ ತಮ್ಮ ಪಾಲಿಗೆ ಬರುವ ಖೋಟಾ ಸೀಟುಗಳನ್ನು ದುಡ್ಡಿಗೆ ಮಾರಿಕೊಂಡು ದುಂಡಗಾಗುತ್ತಾರೆ. ಈ ಭರಪೂರ ದಂಧೆಯ ನಡುವೆ ಅಪ್ಪಿತಪ್ಪಿಯೂ ಬಡಬೋರೇಗೌಡನತ್ತ ಅವರು ತಿರುಗಿ ನೋಡಿಲ್ಲ.

ಎಂ. ಶ್ರೀನಿವಾಸ್ ಮುಂದೆ

ಮಂಡ್ಯದ ಮಾಜಿ ಶಾಸಕ ಎಂ.ಶ್ರೀನಿವಾಸ್ ದಾಖಲೆಯ 7ನೇ ಬಾರಿಗೆ ಚುನಾವಣಾ ಕಣಕ್ಕೆ ಧುಮುಕಿದ್ದಾರೆ. ಪ್ರಸ್ತುತ ಆಯ್ಕೆಯಾದರೆ ಒಕ್ಕಲಿಗ ಸಂಘದ ಅಧ್ಯಕ್ಷರಾಗುವ ಸುಯೋಗ ಲಭಿಸಲಿದೆ.. ಈ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಎಂ.ಶ್ರೀನಿವಾಸ್ ಹೆಸರು ಚಾಲ್ತಿಯಲ್ಲಿದೆ. ಹೇಳಿಕೇಳಿ ಮಂಡ್ಯ ಒಕ್ಕಲಿಗರ ಪ್ರಾಬಲ್ಯವುಳ್ಳ ಜಿಲ್ಲೆ, ಆದರೂ ಬಹಳ ಹಿಂದೆ ಮದ್ದೂರಿನ ಹೆಚ್.ಕೆ.ವೀರಣ್ಣಗೌಡರು ಒಕ್ಕಲಿಗ ಸಂಘದ ಅಧ್ಯಕ್ಷರಾಗಿದ್ದು ಬಿಟ್ಟರೆ ಮಂಡ್ಯಕ್ಕೆ ಆ ಭಾಗ್ಯವೇ ಒದಗಿ ಬಂದಿಲ್ಲ, ಕಳೆದ ಬಾರಿ ನಿರ್ದೇಶಕರಾಗಿದ್ದ ಎಂ.ಶ್ರೀನಿವಾಸ್ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕೆಂಚಪ್ಪಗೌಡನ ಹಣಬಲದ ಮುಂದೆ ಕೂದಲೆಳೆ ಅಂತರದಲ್ಲಿ ಸೋಲು ಕಂಡಿದ್ದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತಿರುವ ಶ್ರೀನಿವಾಸ್‌ಗೆ ಜನಾಂಗದ ಮತದಾರರ ಅನುಕಂಪವೂ ಗಿಟ್ಟಿದರೆ ಅಚ್ಚರಿ ಇಲ್ಲ.

1987ರಿಂದ ಸತತವಾಗಿ 6 ಬಾರಿ ಒಕ್ಕಲಿಗರ ಸಂಘದ ನಿರ್ದೇಶಕರಾಗಿರುವ ಎಂ.ಶ್ರೀನಿವಾಸ್ ಸುಲಭವಾಗಿ ಕೈಗೆ ಸಿಗುವ ಮನುಷ್ಯ. ಜನರ ಕಷ್ಟ-ಸುಖಗಳತ್ತ ಪ್ರಖಂಡ ಉಡಾಫೆಯನ್ನು ಬೆಳೆಸಿಕೊಳ್ಳದ ವ್ಯಕ್ತಿ. 6 ಬಾರಿ ನಿರ್ದೇಶಕರಾಗಿ ಜನಾಂಗದ ಅಭಿವೃದ್ಧಿಗೆ ಹಲವಾರು ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಅಲ್ಲದೆ ಎರಡು ಬಾರಿ ಶಾಸಕನಾಗಿಯೂ ಮಾಡಿರುವ ಅಭಿವೃದ್ಧಿ ಕೆಲಸಗಳು ಅವರ ಕೈ ಹಿಡಿಯಬಹುದು.

ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಎಂ.ಶ್ರೀನಿವಾಸ್, ವಿಧಾನಪರಿಷತ್ ಸದಸ್ಯ ಬಿ.ರಾಮಕೃಷ್ಣ ಹಾಗೂ ನಾಗಮಂಗಲದ ನೆಲ್ಲಿಗೆರೆ ಬಾಲಕೃಷ್ಣ ಜೊತೆ ಪ್ರತ್ಯೇಕ ಸಿಂಡಿಕೇಟ್ ಮಾಡಿಕೊಂಡಿದ್ದಾರೆ. ನಾಗಮಂಗಲ, ಮದ್ದೂರು, ಶ್ರೀರಂಗಪಟ್ಟಣ, ಕೆ.ಆರ್.ಪೇಟೆಯಲ್ಲಿ ಜಾ.ದಳದ ಶಾಸಕರೇ ಅಧಿಕಾರದಲ್ಲಿರುವುದರಿಂದ ಎಂ.ಶ್ರೀನಿವಾಸ್ ಸಿಂಡಿಕೇಟ್‌ಗೆ ಹೆಚ್ಚಿನ ಮತಗಳು ಬರಲಿವೆ. 3 ಮಂದಿ ನಿರ್ದೇಶಕರು ತನ್ನ ಕೈಲಿದ್ದರೆ ಅಧ್ಯಕ್ಷನಾಗಲು ಸಹಕಾರಿ ಎಂಬ ತಂತ್ರಗಾರಿಕೆ ಶ್ರೀನಿವಾಸ್ ಅವರದ್ದು.

ಮದ್ದೂರಿನ ಬಿ.ರಾಮಕೃಷ್ಣ ವಿಧಾನಪರಿಷತ್ ಸದಸ್ಯರಾಗಿ ಮಾಡಿರುವ ಅಭಿವೃದ್ಧಿ ಕಾರ್ಯಗಳ ಜೊತೆಗೆ ಎಂ.ಶ್ರೀನಿವಾಸ್ ಅಧ್ಯಕ್ಷರಾಗಲು ಸಂಖ್ಯಾ ಬಲಕ್ಕಾಗಿ ನನಗೂ ಅವಕಾಶ ಕೊಡಿ ಎಂದು ಮತಯಾಚಿಸುತ್ತಿದ್ದಾರೆ.. ಇನ್ನು ಶಾಸಕ ಚಲುವರಾಯಸ್ವಾಮಿ ಆಪ್ತನಾಗಿರುವ ನೆಲ್ಲಿಗೆರೆ ಬಾಲು, ಚಲುವಣ್ಣನ ನಾಮಬಲ ಇಟ್ಟುಕೊಂಡು ಮತ ಕೇಳುತ್ತಿದ್ದಾರೆ.

ಬಂಡವಾಳಶಾಹಿ ಶಿವಲಿಂಗಯ್ಯನ ಅಬ್ಬರ

ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮಾಜಿ ಅಧ್ಯಕ್ಷ ಡಾ.ಬಿ.ಶಿವಲಿಂಗಯ್ಯನ ಅಬ್ಬರವೂ ಸಾಕಷ್ಟು ಜೋರಾಗಿದೆ. ಎಸ್.ಬಿ.ಎಜುಕೇಷನ್ ಟ್ರಸ್ಟ್‌ನ ಮಾಲೀಕನಾಗಿ ಮಂಡ್ಯದ ತುಂಬೆಲ್ಲಾ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿರುವ ಶಿವಲಿಂಗಯ್ಯ ಸಾಕಷ್ಟು ರೊಕ್ಕಸ್ಥ ಕುಳ. ಶತಾಯಗತಾಯ ಗೆಲ್ಲಲೇಬೇಕೆಂದು ನಿರ್ಧರಿಸಿರುವ ಶಿವಲಿಂಗಯ್ಯ ಅದಕ್ಕಾಗಿ ಎಲ್ಲಾ ಬಗೆಯ ವಾಮಮಾರ್ಗಗಳನ್ನು ಹೆಣೆದಿದ್ದಾರೆ. ಒಕ್ಕಲಿಗ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಿದ ನಂತರವೇ ಕುಲಬಾಂಧವರತ್ತ ಮುಖ ಮಾಡಿದ್ದಾರೆಂಬುದು ಶಿವಲಿಂಗಯ್ಯನವರ ವಿರುದ್ಧ ಕೇಳಿಬರುತ್ತಿರುವ ಆರೋಪ. ಇಷ್ಟು ದಿನ ಜನಾಂಗದ ಅಭಿವೃದ್ಧಿಗೆ ಕ್ಯಾರೇ ಎನ್ನದ ವೈಟ್‌ಕಾಲರ್ ಶಿವಲಿಂಗಯ್ಯ ಜಿಲ್ಲೆಯ 8-10 ಲಕ್ಷ ಒಕ್ಕಲಿಗರನ್ನು ಉದ್ಧಾರ ಮಾಡಲು ನಾನೇ ಸಮರ್ಥ ಹಾಗಾಗಿ ನನಗೊಂದು ಅವಕಾಶ ನೀಡಿ ಎಂಬಂತೆ ಅರ್ಭಟಿಸುತ್ತಿದ್ದಾರೆ.

ಜಿಲ್ಲಾ ಕಸಾಪ ಚುನಾವಣೆಯಲ್ಲಿ ಗೆದ್ದು ಅಧ್ಯಕ್ಷೆಯಾಗಿರುವ ಮೀರಾ ಶಿವಲಿಂಗಯ್ಯ ತನ್ನ ಪತಿ ಶಿವಲಿಂಗಯ್ಯನನ್ನು ಗೆಲ್ಲಿಸಲು ಶಪಥ ಮಾಡಿದವರಂತೆ ಜಿಲ್ಲೆಯನ್ನು ಸುತ್ತು ಹಾಕುತ್ತಿದ್ದಾರೆ. ಕಸಾಪ ಚುನಾವಣೆಯ ಸಂದರ್ಭದಲ್ಲಿ ನಮ್ಮ ಕುಟುಂಬಕ್ಕೆ ರಾಜಕೀಯ ಆಸೆ ಇಲ್ಲ ಎಂದು ಮಾಧ್ಯಮಗಳ ಮುಂದೆ ಕಥೆ ಹೆಣೆದಿದ್ದ ಮೀರಾ ಮೇಡಂ ಈಗ ಪತಿಯನ್ನೇ ಒಕ್ಕಲಿಗ ಸಂಘದ ಚುನಾವಣೆಗೆ ನಿಲ್ಲಿಸುವ ಮೂಲಕ ರಾಜಕಾರಣ ಆರಂಭಿಸಿದ್ದಾರೆ. ಇದಕ್ಕಾಗಿಯೇ ನಾಗಮಂಗಲ, ಶ್ರೀರಂಗಪಟ್ಟಣ ತಾಲ್ಲೂಕು ಕಸಾಪ ಅಧ್ಯಕ್ಷರನ್ನು ಬದಲಾಯಿಸಿ ಸ್ವಜಾತಿಯ ಅಧ್ಯಕ್ಷರನ್ನು ಪ್ರತಿಷ್ಠಾಪಿಸಿದ್ದಾರೆ.

ಬೆಟ್ಟೇಗೌಡನ ಮನಿಪವರ್

ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಮತದಾರರಿಗೆ ಪ್ರಪ್ರಥಮವಾಗಿ ಕಾಂಚಾಣದ ರುಚಿ ಹತ್ತಿಸಿದ್ದೇ ನಾಗಮಂಗಲದ ಡಿ.ಎನ್.ಬೆಟ್ಟೇಗೌಡ. ಕಳೆದ ಚುನಾವಣೆಯಲ್ಲಿ ವೋಟಿಗೆ ನೋಟು ಕೊಟ್ಟು ಗೆದ್ದು ನಿರ್ದೇಶಕನಾಗಿದ್ದ ಬೆಟ್ಟೇಗೌಡ ಈ ಬಾರಿಯೂ ಅದೇ ತಂತ್ರವನ್ನು ರಿಪೀಟ್ ಮಾಡುತ್ತಿದ್ದಾನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನೌಕರನಾಗಿ ಸಾಕಷ್ಟು ಕಮಾಯಿಸಿರುವ ಬೆಟ್ಟೇಗೌಡ ಅಲ್ಲಿ ದುಡಿದ ಹಡಬೆ ಹಣವನ್ನು ಚೆಲ್ಲಿ 2ನೇ ಬಾರಿಗೆ ನಿರ್ದೇಶಕನಾಗಲು ಹೊರಟಿದ್ದಾನೆ. ಕಳೆದ ಬಾರಿ ಗೆದ್ದ ನಂತರ ಬೆಂಗಳೂರು ಸೇರಿಕೊಂಡ ಬೆಚ್ಚಗಿದ್ದ ಸದರಿ ಬೆಟ್ಟೇಗೌಡ ಚುನಾವಣೆ ಹಿನ್ನೆಲೆಯಲ್ಲಿ ಈಗ ಮತ್ತೆ ಜಿಲ್ಲೆಗೆ ವಾಪಾಸ್ಸಾಗಿ ಕಾಳಜಿ ತೋರಿಸುತ್ತಿದ್ದಾನೆ.

ನಾಗಮಂಗಲ ತಾ.ಪಂ. ಮಾಜಿ ಅಧ್ಯಕ್ಷೆ ಪುಷ್ಪಳ ಗಂಡ ವನರಾಜ್ ಎಂಬ ಕೋಟ್ಯಾಧಿಪತಿಯನ್ನು ಜೊತೆಹಾಕಿಕೊಂಡು ಹಣ ಎರಚುತ್ತಿರುವ ಬೆಟ್ಟೇಗೌಡ ಗೆದ್ದ ನಂತರ ಖರ್ಚು ಮಾಡಿದ್ದರ ಹತ್ತು ಪಟ್ಟು ಗಂಟು ಮಾಡಿಕೊಳ್ಳಲು ಈಗಲೇ ಯೋಜನೆ ರೂಪಿಸಿಕೊಂಡಿದ್ದರೆ ಅಚ್ಚರಿಯಿಲ್ಲ. ಮಂಡ್ಯ ತಾಲ್ಲೂಕಿನಲ್ಲಿರುವ 14,023 ಮತಗಳು ಛಿದ್ರವಾಗಬೇಕೆಂಬ ಹಿನ್ನೆಲೆಯಲ್ಲಿ ಕೆಲವರಿಗೆ ತಾನೇ ಲಕ್ಷಾಂತರ ಹಣಕೊಟ್ಟು ಡಮ್ಮಿ ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಿದ್ದಾನೆನ್ನುವ ಆಪವಾದವೂ ಬೆಟ್ಟೇಗೌಡನಿಗಿದೆ.

ಡಾಕ್ಟರ್‌ಗಳ ಸದ್ದು

ಚುನಾವಣಾ ಕಣದಲ್ಲಿರುವ ಇಬ್ಬರು ಡಾಕ್ಟರ್‌ಗಳು ಸಾಕಷ್ಟು ಸದ್ದು ಮಾಡುತ್ತಿದ್ದಾರೆ. ಮೂರು ಬಾರಿ ನಿರ್ದೇಶಕರಾಗಿ ಕಳೆದ ಬಾರಿ ಸೋತಿದ್ದ ಸ್ವಾಭಿಮಾನಿ ಒಕ್ಕಲಿಗರ ಒಕ್ಕೂಟದ ಅಧ್ಯಕ್ಷ ಡಾ.ಲೋಕೇಶ್‌ಬಾಬು ಹಾಗೂ ಕಳೆದ ಬಾರಿ ಕಡಿಮೆ ಅಂತರದಲ್ಲಿ ಪರಾಭವಗೊಂಡಿದ್ದ ಖ್ಯಾತ ಹೃದ್ರೋಗ ತಜ್ಞ ಡಾ.ಬಿ.ಸಿ. ಬೊಮ್ಮಯ್ಯ ಜನಾಂಗದ ವ್ಯಾಧಿಗೆ ಸರ್ಜರಿ ಮಾಡಲು ನಮಗೂ ಒಂದು ಅವಕಾಶ ನೀಡಿ ಎನ್ನುತ್ತಿದ್ದಾರೆ. ಕಳೆದ ಬಾರಿ ಸೋತಿದ್ದ ಡಾ.ಲೋಕೇಶ್‌ಬಾಬು ಸ್ವಾಭಿಮಾನಿ ಒಕ್ಕಲಿಗರ ಒಕ್ಕೂಟವನ್ನು ಕಟ್ಟಿಕೊಂಡು ಕುಲಬಾಂಧವರ ನೆರವಿಗೆ ನಿಂತದ್ದು ಅವರಿಗೆ ಪ್ಲಸ್ ಪಾಯಿಂಟ್ ಆಗುವ ಸಾಧ್ಯತೆ ಇದೆ.

ಕಳೆದಬಾರಿ ಸೋತರೂ, ದೂರವಾಗದೆ ಒಕ್ಕಲಿಗ ಜನಾಂಗದವರಿಗೆ ಒಂದಿಷ್ಟು ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಬಂದಿರುವ ಡಾ.ಬಿ.ಸಿ.ಬೊಮ್ಮಯ್ಯನವರ ಬಗ್ಗೆಯೂ ಉತ್ತಮ ಪ್ರತಿಕ್ರಿಯೆ ಕೇಳಿಬರುತ್ತಿವೆ. ಸರಳ, ಸಜ್ಜನ ನಡವಳಿಕೆಯಿಂದ ಕ್ಷೇತ್ರದ ಮತದಾರರ ವಿಶ್ವಾಸಕ್ಕೆ ಪಾತ್ರರಾಗಿರುವ ಡಾ.ಬೊಮ್ಮಯ್ಯ ತಮ್ಮ ಆರೋಗ್ಯಪರ ಕಾಳಜಿಯಿಂದಲೂ ಜನರಿಗೆ ಹತ್ತಿರವಾದವರು. ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುವವರಿಗೆ ಉಚಿತ ಚಿಕಿತ್ಸೆ ಹಾಗೂ ಶಸ್ತ್ರ ಚಿಕಿತ್ಸೆಗೆ ಸಹಾಯ ಮಾಡಿರುವುದು ಅವರ ಮತಗಳಿಕೆಯನ್ನು ಹಿಗ್ಗಿಸಬಹುದು.

ಸೋಲಿನ ಮಂತ್ರ-ಹೊಸ ತಂತ್ರ

ಕಳೆದ ಬಾರಿ ಸೋತಿದ್ದ ನಾಗಮಂಗಲದ ...ಚ್.ಎಂ.ನಾರಾಯಣಮೂರ್ತಿ ಹಾಗೂ ...ಕುಮಾರಗೌಡರ ಪರವಾಗಿಯೂ ಮತದಾರರಿಂದ ...ಕಂಪ ವ್ಯಕ್ತವಾಗಿದೆ. ಮಾಜಿ ಸಚಿವ ಹೆಚ್.ಟಿ.ಕೃಷ್ಣಪ್ಪನವರ ...ೋದರನ ಮಗನಾದ ಹೆಚ್.ಎಂ.ನಾರಾಯಣಮೂರ್ತಿ ... 6 ತಿಂಗಳಿನಿಂದಲೇ ತಯಾರಿ ಮಾಡಿಕೊಂಡು ...ಯಲ್ಲಿ ಒಕ್ಕಲಿಗ ಮತದಾರರ ಮನೆಬಾಗಿಲಿಗೆ ತೆರಳಿ ... ಬಾರಿ ಸೋತಿರುವುದನ್ನೇ ಮುಂದಿಟ್ಟುಕೊಂಡು ...ಯಾಚಿಸುತ್ತಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ಹೆಸರು ...ತಿರುವ ನಾರಾಯಣಮೂರ್ತಿ ಪರ ಸಜ್ಜನ ರಾಜಕಾರಣಿ ...ವೇ ಗುರುತಿಸಿಕೊಂಡಿರುವ ಮಾಜಿ ಸಚಿವ ...ಟಿ.ಕೃಷ್ಣಪ್ಪ ಕೂಡ ಪ್ರಚಾರ ಮಾಡುತ್ತಿರೋದು ...ಪಾಯಿಂಟ್. ಇಲ್ಲಿ ಮತ್ತೊಂದು ಸ್ಥಳೀಯ ಯಡವಟ್ಟಿದೆ. ...ದರೆ ನಾಗಮಂಗಲದ ಕಾಂಗ್ರೆಸ್ ಮಾಜಿ ಶಾಸಕ ಕೆ. ...ಶ್ ಗೌಡ 2008ರ ಚುನಾವಣೆಯಲ್ಲಿ ಗೆಲ್ಲಲು ...ಜಿ ಸಚಿವ ಕೃಷ್ಣಪ್ಪ ಮತ್ತು ನಾರಾಯಣಮೂರ್ತಿ ...ದಲಾದವರೇ ಕಾರಣ. ಆದರೆ ಈ ಚುನಾವಣೆಯಲ್ಲಿ ...ಶ್‌ಗೌಡ, ನಾರಾಯಣಮೂರ್ತಿಗೆ ಬೆಂಬಲಿಸದೆ ನಂಬಿಕೆ ...ೋಹ ಮಾಡಿದ್ದಾರೆ. ಇದಕ್ಕೆ ಸ್ವತಃ ಕಾಂಗ್ರೆಸ್ಸಿಗೆ ...ಶ್‌ಗೌಡರ ವಿರುದ್ಧ ಕುದಿಯುತ್ತಿದ್ದಾರೆ.

...ಇನ್ನು ನಾಗಮಂಗಲದವರೇ ಆದ ಸಿ.ಜಿ. ...ಾರಗೌಡ(ಲಕ್ಕಪ್ಪಗೌಡ) ಆರ್ಥಿಕವಾಗಿ ಶಕ್ತರಲ್ಲ. ಈ ...ದಿಂದಲೇ ಮೂರು ಸಲ ಸೋತಿರುವ ಅವರಿಗೆ ...ಬಾರಿಯಾದರು ನಾಲ್ಕು ಮತಗಳಲ್ಲಿ ಒಂದು ಮತ ...ಾಗೆ ನೀಡಬೇಕೆನ್ನುವ ಸಾಮಾನ್ಯ ಅಭಿಪ್ರಾಯ ...ಮಂಗಲದ ಮತದಾರರಲ್ಲಿ ಕಾಣಿಸುತ್ತಿದೆ. ಉಳಿದ ...ಲ್ಲೂಕುಗಳಲ್ಲಿಯೂ ಅವರ ಪರವಾಗಿ ಮಾತುಗಳು ...ಬರುತ್ತಿವೆ. ಸೋತರೂ ಕುಲಬಾಂಧವರ ಸಖ್ಯದಿಂದ ...ಖರಾಗದ ಕುಮಾರಗೌಡ ಈ ಬಾರಿ ಮುಂಚೂಣಿಗೆ ...ದ್ದಾರೆ.

...ಣದಲ್ಲಿರುವ ಮತ್ತೊಬ್ಬ ಅಭ್ಯರ್ಥಿ ಮಂಡ್ಯದ ಸಾಯಿ ...ರ್ಸ್‌ನ ಮಾಲೀಕ ಜಿ.ಎಂ.ರವೀಂದ್ರ ನೂರಾರು ಧಾರ್ಮಿಕ ...ೂ ಸಾಮಾಜಿಕ ಕಾರ್ಯಗಳ ಮೂಲಕ ಜನರಿಗೆ ...ಚಿತವಾದವರು. ಕಲ್ಲಹಳ್ಳಿಯ ಕೆ.ವಿ.ಕುಮಾರ್ (ಎಂಟಿಎನ್ ...ಮಾರ್) ವಿನೂತನ ಪ್ರಚಾರದ ಮೂಲಕ ಹಿರಿಯರನ್ನು ...ಬಡಿಸಿದ್ದಾರೆ. ಪೌರವಾಣಿ ಪತ್ರಿಕೆಯ ಸಂಪಾದಕನಾಗಿ, ...ತ್ಯ ಟೆಲಿವಿಷನ್ ನೆಟ್‌ವರ್ಕ್ ಮೂಲಕ ಜಿಲ್ಲೆಯ ...ಗೆ ಪರಿಚಿತರಾಗಿರುವ ಕುಮಾರ್, ಇದುವರೆಗೂ ...ತಿರುವ ಸಂಘದ ಸಾಧನೆಗಳಿಗಿಂತ ಭಿನ್ನವಾಗಿ ...ಚಿಸುವ ಮೂಲಕ ಮತದಾರರನ್ನು ತಲುಪುವ ಯತ್ನ ...ದ್ದಾರೆ. ಆದರಲ್ಲೂ ಒಕ್ಕಲಿಗ ಜನಾಂಗದ ಯುವ ...ದಾರರನ್ನು ತಮ್ಮ ಪ್ರಶ್ನೆಗಳ ಮೂಲಕ ಎಚ್ಚರಿಸುವ ...ಕ್ಕೆ ಕೈಹಾಕಿ ಸ್ವಾಭಿಮಾನದ ಮತ ನೀಡುವಂತೆ ...ತ್ತಿರುವುದು ಮತದಾರರನ್ನು ಯೋಚಿಸುವಂತೆ ಮಾಡಿದೆ.

...ದುವರೆಗೂ ಜಿಲ್ಲೆಯಿಂದ ಮಹಿಳೆರ್ಯಾರೂ ...ೇಶಕರಾಗಿ ಆಯ್ಕೆಯಾಗಿಲ್ಲ, ಜನಾಂಗದ ಮಹಿಳೆಯರೂ ...ಲಂಬಿಯಾಗಲು ನನಗೆ ಆಶೀರ್ವಾದ ಮಾಡಿ ...ತ್ತಿರುವ ಟಿ.ಟಿ. ಅನುಸೂಯ ಮಹಿಳಾ ಮತದಾರರ ... ಕಣ್ಣಿಟ್ಟಿದ್ದಾರೆ.

...ಮದ್ದೂರು ಎಪಿಎಂಸಿ ಮಾಜಿ ಅಧ್ಯಕ್ಷ ಚಂದ್ರಶೇಖರ್ ...ಡ್ಯ ಚಂದು) ಒಂದಷ್ಟು ಭರವಸೆ ಮೂಡಿಸಿರುವ ... ಮುಖ. ಇಂಜಿನಿಯರಿಂಗ್ ಪದವೀಧರನಾಗಿರುವ ...ಡ್ಯ ಚಂದು ಎಪಿಎಂಸಿ ಅಧ್ಯಕ್ಷನಾಗಿ ಸಾಕಷ್ಟು ಕೆಲಸ ...ದ್ದು ಒಕ್ಕಲಿಗರ ಸಂಘಕ್ಕೆ ಯುವಕರು ನಿರ್ದೇಶಕರಾಗಿ ...ಯಾದರೆ ಅಭಿವೃದ್ಧಿ ಕೆಲಸ ಸಾಧ್ಯ ಎನ್ನುತ್ತಾ ...ಲ್ಲಿದ್ದಾರೆ. ಆರ್ಥಿಕವಾಗಿ ಬಲಾಢ್ಯನಲ್ಲದಿದ್ದರೂ ಜಿಲ್ಲೆಯ ...ತ ಸಮಸ್ಯೆಗಳಿಗೆ ದನಿಗೂಡಿಸುವ ಹೋರಾಟಗಾರ ...ದ್ಯಾವಪ್ಪ ಗ್ರಾಮ ಪಂಚಾಯತ್ ಸದಸ್ಯರ ಒಕ್ಕೂಟದ ... ಬಾಣಸವಾಡಿ ನಾಗಣ್ಣ, ಚೆಸ್ ಅಕಾಡೆಮಿ ಅಧ್ಯಕ್ಷ ...ಸಾದ್, ಎಲ್‌ಐಸಿ ಬಂದೀಗೌಡ, ಕೇಬಲ್ ಕೃಷ್ಣ ...ಶ್‌ಬಾಬು, ಜೆ.ಬಿ.ಕೃಷ್ಣ, ವಕೀಲ ಕೆಬಿಎಸ್ ಗಿರೀಶ್ ...ರಂತೆ ಹಲವರು ಒಕ್ಕಲಿಗ ಜನಾಂಗದ ಅಭಿವೃದ್ಧಿಗೆ ...ೂ ಒಂದು ಅವಕಾಶ ಕೊಡಿ ಎಂದು ಮತದಾರರ ... ಬಾಗಿಲಿಗೆ ತಿರುಗುತ್ತಿದ್ದಾರೆ.

...ಂತೂ ಇಂತು ಒಕ್ಕಲಿಗರ ಸಂಘದ ಚುನಾವಣೆ ...ದ್ರದ ಮಟ್ಟಕ್ಕಂತು ಭಯಂಕರ ಕುತೂಹಲ ಮೂಡಿಸಿದೆ. ...ಹಂದಗಳ ಅವಿಷಪೂರ್ಣ ಮತಗಳನ್ನು ಸೆಳೆದು ...ಶ ಗಾದಿಗೇರಿ ದುಂಡಗಾಗುವ ಹವಣಿಕೆಯಲ್ಲಿ ...ರ್ಗಳು ಬುಸಿಸುತ್ತಿದ್ದಾರೆ. ಇವರೆಲ್ಲರ ಆಟಗಳನ್ನು ...ನ್ನು ಬಿಟ್ಟಂತೆ ನೋಡುತ್ತಿರುವ ಮತದಾರ ಯಾರ್ಯಾರನ್ನು ...ದು ಮುಟ್ಟುಸುತ್ತಾನೋ ಎಂಬುದನ್ನು ತಿಳಿಯಲು ಜನವರಿ ...ರಿಗೆ ಕಾಯಬೇಕಿದೆ.

■ ನಾಗೇಶ್


11 ◄◄


ಕೆಂಚಪ್ಪಗೌಡನ ಪತನ...


ಹುಟ್ಟುಹಾಕಿದ್ದಾನೆ. ಹಾಗಂಥ ಕೆಂಚಪ್ಪನ ದುಷ್ಟಕೂಟದ ಹಣ, ಹೆಂಡಕ್ಕೆ ಒಕ್ಕಲಿಗರ ಸಮೂಹ ಮಾರು ಹೋಗುತ್ತದೆ ಎಂದರ್ಥವೇನಲ್ಲ.

ಅಪ್ಪಾಜಿಗೌಡ

ಹಿಂದಿದ್ದ 13 ಸಾವಿರ ಚಿಲ್ಲರೆಯಷ್ಟು ಹಳೇ ಮತದಾರರ ಜೊತೆಗೆ ಸರಿಸುಮಾರು 1 ಲಕ್ಷದ 4 ಸಾವಿರದಷ್ಟು ಹೊಸ ಮತದಾರರು ಸೃಷ್ಟಿಯಾಗಿರುವುದೇ ಕೆಂಚಪ್ಪನ


ಅಪ್ಪಾಜಿಗೌಡ



ಅ.ದೇವೆಗೌಡ



ಆನಂದ್



ಜಯಮುತ್ತು



ಹನುಮಂತೇಗೌಡ


ಗ್ಯಾಂಗಿಗೆ ತಲೆನೋವಾಗಿ ಪರಿಣಮಿಸಿದೆ. ಬೆಂಗಳೂರಿನ ಒಟ್ಟು 1 ಲಕ್ಷದ 17 ಸಾವಿರ ಮತದಾರರು ಸೇರಿ 15 ಮಂದಿ ಕಾರ್ಯಕಾರಿ ಸದಸ್ಯರನ್ನು ಗೆಲ್ಲಿಸಬೇಕು. ರಾಜ್ಯಾದ್ಯಂತ ಸಂಘದ 2 ಲಕ್ಷದ 96 ಸಾವಿರ ಮತದಾರರು ಸೇರಿ 35 ಮಂದಿ ಡೈರೆಕ್ಟರುಗಳನ್ನು ಗೆಲ್ಲಿಸಬೇಕಿದೆ. ಹಿಂದಿದ್ದ ಮತದಾರರ ಏಳೆಂಟು ಪಟ್ಟು ಹೆಚ್ಚಿಗೆ ಮತದಾರರು ಈ ಬಾರಿ ಓಟು ಹಾಕುವುದರಿಂದಾಗಿ ಕೆಂಚಪ್ಪನ ಗ್ಯಾಂಗ್ ನಿಕಾಲಿಯಾಗುವುದು ಶತಃಸಿದ್ಧ.


ನಿಸರ್ಗ


ಪಿಳ್ಳನಂಜಪ್ಪ


ಮಲ್ಲಿಕಾರ್ಜುನ್


ಮೋಹನ್‌ಕುಮಾರ್


ಸಂಪಂಗಿರಾಮಯ್ಯ

ಏಕೆಂದರೆ ಸಂಘ ಮತ್ತು ಜನಾಂಗದ ಬಗ್ಗೆ ಕಾಳಜಿಯುಳ್ಳ ಯಾರೇ ಒಬ್ಬ ಜವಾಬ್ದಾರಿಯುತ ಮತದಾರ ಗೊತ್ತುಗೊತ್ತಿದ್ದೂ ಕೆಂಚಪ್ಪನ ಕೂಟಕ್ಕೆ ಓಟು ಹಾಕಲಾರ!

ಈ ನಿಟ್ಟಿನಲ್ಲಿ ಸದ್ಯ ಪ್ರಜ್ಞಾವಂತ ಒಕ್ಕಲಿಗರ ಪಾಲಿಗೆ ಅನಿವಾರ್ಯ ಆಯ್ಕೆ ಅಂತಿದ್ದರೆ ಅದು ಅಪ್ಪಾಜಿಗೌಡರ ತಂಡ. ಕೆಂಚಪ್ಪನ ತಂಡದಲ್ಲಿರುವ ನೆಲಗಳ್ಳರು, ರೌಡಿಗಳು, ಲಿಕ್ಕರ್ ಖದೀಮರಿಗೆ ಹೋಲಿಸಿದರೆ ಅಪ್ಪಾಜಿಗೌಡ ಜನಾನುರಾಗಿ. ಈ ಹಿಂದೆ ಕಿಮ್ಸ್ ಮುಖ್ಯಸ್ಥರಾಗಿ ತಮ್ಮದೇ ವಿಜಯ ನೇತ್ರಾಲಯ ಎಂಬ ಕಣ್ಣಿನ ಆಸ್ಪತ್ರೆ ಕೂಡ ನಡೆಸುವ ಅಪ್ಪಾಜಿಗೌಡ ಮೈಸೂರು ವಿವಿಯಿಂದ ಡಾಕ್ಟರೇಟು ಪಡೆದವರು. ಸಂಘ ನಡೆಸುವ ಕೆಂಪೇಗೌಡ ಮೆಡಿಕಲ್ ಕಾಲೇಜಿನಲ್ಲಿ ನೇತ್ರ ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರಾಗಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಲ್ಲದೆ ದುಬಾರಿಯ ಕಣ್ಣಾಸ್ಪತ್ರೆಯನ್ನು ಬಡಬಗ್ಗರಿಗೂ ನಿಲುಕುವಂತೆ ಮಾಡಿದ್ದು ಅಪ್ಪಾಜಿಗೌಡರ ಹಿರಿಮೆ.

ಸಜ್ಜೆಪಾಳ್ಯದ ಸೊತ್ತಿಗಾಗಿ

ಇದಕ್ಕೊಂದು ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ವಿಶಿಷ್ಟ ಶಸ್ತ್ರಚಿಕಿತ್ಸೆಯ ತರಬೇತಿ ಪಡೆದರು. ಅತೀ ಕ್ಲಿಷ್ಟಕರ ಕಣ್ಣಿನ ಆಪರೇಷನನ್ನು ಅತೀ ಕಡಿಮೆಯ ಬೆಲೆಯಲ್ಲಿ ಜಾರಿಗೆ ತಂದಿದಷ್ಟೇ ಅಲ್ಲ, ಈ ಬಗ್ಗೆ ಲಾಸ್ ಏಂಜಲೀಸ್ ಮತ್ತು ವಾಷಿಂಗ್‌ಟನ್‌ಗಳಲ್ಲಿ ನಡೆದ ನೇತ್ರ ತಜ್ಞರ ಸಮಾವೇಶದಲ್ಲಿ ಎರಡೆರಡು ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದು ಅವರನ್ನು ಅಂತಾರಾಷ್ಟ್ರೀಯ ಖ್ಯಾತಿಗೊಯ್ದಿತ್ತು, ಇದಲ್ಲದೆ ಸಜ್ಜೆಹಾಳ್ಯದ 2000 ಕೋಟಿ ಬೆಲೆಬಾಳುವ ಸಂಘದ 96 ಎಕರೆ ಜಮೀನನ್ನು ಹೈಕೋರ್ಟ್, ಸುಪ್ರೀಂಕೋರ್ಟ್‌ತನಕ ಹೋರಾಡಿ ಜನಾಂಗಕ್ಕಾಗಿ ಉಳಿಸಿಕೊಟ್ಟವರು ಅಪ್ಪಾಜಿಗೌಡ.

ಸಂಘದ ಸಾವಿರಾರು ಕೋಟಿಯ ಸೊತ್ತಿನ ಲೂಟಿಯ ವಿರುದ್ಧ ಹೋರಾಡಿದ ಒಂದೇ ಕಾರಣಕ್ಕೆ ಅವರ ಪುತ್ರನ ಮೆಡಿಕಲ್ ಸೀಟಿಗೆ ಇನ್ನಿಲ್ಲದ ಕಾಟ ಕೊಟ್ಟ ಕೆಂಚಪ್ಪ ಅದನ್ನೇ ನೆಪವಾಗಿಸಿಕೊಂಡು ಕೋಟಿ ಲೆಕ್ಕದಲ್ಲಿ ಅಪ್ಪಾಜಿಗೌಡರಿಂದ ಕಾಸು ಕಿತ್ತ. ಸಂಘದ ಆಸ್ತಿ ಉಳಿಸಲು ಸುಪ್ರೀಂಕೋರ್ಟ್‌ತನಕ ಹೋರಾಡಿದ ಫಲವಾಗಿ ಲಕ್ಷಾಂತರ ರೂಪಾಯಿ ಕೈಸುಟ್ಟುಕೊಂಡರು. ಇಂಥ ಹಲವಾರು ಹೋರಾಟಗಳ ಫಲವಾಗೇ ಅಧ್ಯಕ್ಷ ಕೆಂಚಪ್ಪನ ಕೂಟದ ಲೂಟಿಗೆ ತಡೆ ಬಿತ್ತು.

ಬಹುಶಃ ಅಪ್ಪಾಜಿಗೌಡರ ಪ್ರಾಮಾಣಿಕತೆಯನ್ನು ಕಂಡೇ ಇರಬೇಕು ಸಂಘದ ಹಾಲೀ ಡೈರೆಕ್ಟರುಗಳಾದ ಅ. ದೇವೇಗೌಡ, ಎಂ.ಎ. ಆನಂದ್, ಡಿಸಿಕೆ ಕಾಳೇಗೌಡ ಮತ್ತು ಮಲ್ಲಿಕಾರ್ಜುನಗೌಡರಂಥವರೆಲ್ಲ ಅವರ ನೇತೃತ್ವದಲ್ಲೇ ಸಿಂಡಿಕೇಟ್ ಮಾಡಿಕೊಂಡು ಸ್ಪರ್ಧೆಗಿಳಿದಿದ್ದಾರೆ.

ಈ ಹಿಂದೆ ಒಂದಲ್ಲ ಮೂರು ಬಾರಿ ಸಂಘದ ನಿರ್ದೇಶಕರಾಗಿ ಆಯ್ಕೆಗೊಂಡಿದ್ದ ಅ. ದೇವೇಗೌಡ ತನ್ನ ಸರಳತೆ ಮತ್ತು ಪ್ರಾಮಾಣಿಕತೆಗೆ ಹೆಸರಾದವರು. ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ಕೇವಲ ಬೆರಳೆಣಿಕೆಯಷ್ಟು ಮತಗಳಿಂದ ಬಿಜೆಪಿ ನಾಯಕ ರಾಮಚಂದ್ರಗೌಡರ ವಿರುದ್ಧ ಪಕ್ಷೇತರರಾಗಿ ಸೋತ ಅ. ದೇವೇಗೌಡ ಆ ನಂತರದ ಪಾಲಿಕೆ ಚುನಾವಣೆಯಲ್ಲೂ ಸೋತರಾದರೂ ತಮ್ಮ ಜನಾಂಗದ ಕಾಳಜಿಯನ್ನು ಬಿಡಲಿಲ್ಲ. ಗ್ರಾಮೀಣ ಮತ್ತು ಬಡ ಒಕ್ಕಲಿಗರಿಗೆಂದೇ 'ದರ್ಶನ್ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ' ಸ್ಥಾಪಿಸಿದರು. ಆ ಮೂಲಕ ಐಎಎಸ್, ಕೆಎಎಸ್ ಪರೀಕ್ಷೆಗಳಿಗೆ ಬಡ ಒಕ್ಕಲಿಗರನ್ನು ತರಬೇತಿಗೊಳಿಸಲು ಹೆಣಗಾಡಿದವರು.

ಸಿಂಡಿಕೇಟಿನ ಸಜ್ಜನರು

ಈ ಸಾಲಿಗೆ ಸೇರುವ ಮತ್ತೊಬ್ಬ ಹಾಲೀ ನಿರ್ದೇಶಕ ಎಂ.ಎ. ಆನಂದ್ ಈಗಾಗಲೇ ಸಂಘದ ಖಜಾಂಚಿ, ಕಿಮ್ಸ್ ಹಾರ್ಟ್ ಸೆಂಟರ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಅವರೇ ಹುಟ್ಟು ಹಾಕಿದ ಬಸವೇಶ್ವರನಗರದ ಇಂಡಿಯನ್ ಪಬ್ಲಿಕ್ ಸ್ಕೂಲ್ ಇವತ್ತಿಗೂ ಶೈಕ್ಷಣಿಕ ಶ್ರೇಷ್ಠತೆಯ ಪ್ರತೀಕದಂತಿದೆ. ರಾಜಾಜಿನಗರದ ಒಕ್ಕಲಿಗರ ಹಿತರಕ್ಷಣಾ ವೇದಿಕೆ ನಾಯಕರಾಗಿ ಆನಂದ್ ಮಾಡಿದ ಹೋರಾಟಗಳೇ ಅವರನ್ನು ಜನಾಂಗದ ಪ್ರಶ್ನಾತೀತ ಮುಖಂಡರಲ್ಲೊಬ್ಬರನ್ನಾಗಿಸಿದೆ.

ಮೂಲತಃ ಚನ್ನಪಟ್ಟಣದ ಮಾದಾಪುರದ ಎಂ.ಬಿ. ಮಲ್ಲಿಕಾರ್ಜುನೇಗೌಡ ಹಿಂದು ಗುತ್ತಿಗೆ ನೆಪದಲ್ಲಿ ಕೆಂಚಪ್ಪ ಕೋಟಿ ಕೋಟಿ ಲಪಟಾಯಿಸಲೆತ್ನಿಸಿದ್ದರ ವಿರುದ್ಧ ಹೋರಾಡಿದವರು. ಅವರಿಂದಾಗಿಯೇ ಸಂಘಕ್ಕೆ 3 ಕೋಟಿ ರೂಪಾಯಿಗಳ ಉಳಿತಾಯವಾಯಿತು. ರೈತಾಪಿ ಹಿನ್ನೆಲೆಯಿಂದ ಬಂದು ಇವತ್ತಿಗೂ ರೈತರ ಪರ ದುಡಿಯುತ್ತಿರುವ ಮಲ್ಲಿಕಾರ್ಜುನೇಗೌಡ ಸದ್ಯದ ಕೆಂಚಪ್ಪನ ದುರಾಡಳಿತದ ಕಾರಣಕ್ಕಾದರೂ ಸಂಘಕ್ಕೆ ಅನಿವಾರ್ಯ. ಇದೇ ಪಟ್ಟಿಗೆ ಸೇರುವ ಮತ್ತೊಬ್ಬ ಸ್ಪರ್ಧಿ ಹೆಚ್.ಸಿ. ಜಯಮುತ್ತು, ಕಡು ಬಡತನದಿಂದ ಕಂಗೆಟ್ಟು ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದ ಜಯಮುತ್ತು ಇವತ್ತಿಗೂ ಒಕ್ಕಲಿಗ ನಿರುದ್ಯೋಗಿಗಳ ಪಾಲಿಗೆ ಆಶಾಕಿರಣ. ತಮ್ಮ ತಾಯಿ ಹೆಸರಲ್ಲಿ ಚನ್ನಮ್ಮ ಚಾರಿಟಬಲ್ ಟ್ರಸ್ಟ್ ಸ್ಥಾಪಿಸಿ ಜಯಮುತ್ತು ಮಾಡಿದ ಸೇವೆಗಳು ಅವಿಸ್ಮರಣೀಯ!


ಇವರಲ್ಲದೆ ಶಿಕ್ಷಣ ತಜ್ಞ ಪಿಳ್ಳಾಂಜನಪ್ಪ ತಮ್ಮ ಶೈಕ್ಷಣಿಕ ಸೇವೆಗಾಗಿಯೇ ರಾಷ್ಟ್ರಪ್ರಶಸ್ತಿ ಪಡೆದವರು. ಡಾ. ನಿಸರ್ಗ ಆರ್ ಯಾನೇ ರಾಮಲಿಂಗೇಗೌಡ ಅಂತರರಾಷ್ಟ್ರೀಯ ಮಟ್ಟದ ಶಿಶುತಜ್ಞ ಮತ್ತು ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನ ಮಕ್ಕಳ ಘಟಕದ ಮುಖ್ಯಸ್ಥರು ಕೂಡ. ಸದ್ಯ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯ್ತಿಯ ಉಪಾಧ್ಯಕ್ಷರಾಗಿ ಎನ್. ಹನುಮಂತೇಗೌಡ ದೊಡ್ಡಬಳ್ಳಾಪುರದಲ್ಲಿ ಸ್ಥಾಪಿಸಿದ ಲಾವಣ್ಯ ವಿದ್ಯಾಸಂಸ್ಥೆ ಒಕ್ಕಲಿಗರ ಹೆಮ್ಮೆಯ ಸಂಸ್ಥೆಗಳಲ್ಲೊಂದು. ಸಂಪಂಗಿರಾಮಯ್ಯ ಸಹಕಾರಿ ಧುರೀಣ ಮತ್ತು ಪ್ರಗತಿಪರ ರೈತರೆಂದೇ ಹೆಸರಾದವರು. ಕೆಎಲ್‌ಇ ಮೋಹನ್ ಎಂದೇ ಗುರುತಿಸಲ್ಪಡುವ ಬಿ.ಮೋಹನ್‌ಕುಮಾರ್ ಕೆಂಪೇಗೌಡ ಪ್ರಶಸ್ತಿ ವಿಜೇತ ಮತ್ತು ರಾಜಾಜಿನಗರ ಸುತ್ತಮುತ್ತಲ ಜನಾನುರಾಗಿ ಯುವ ಮುಖಂಡ.

ಇಂಥ ಸಜ್ಜನ, ಸಭ್ಯ ಮತ್ತು ಜನಾಂಗದ ಹಿತಾಸಕ್ತಿಗಳ ಪರ ರಾಜಿಯಾಗದೆ ದನಿಯೆತ್ತುವ ಒಕ್ಕಲಿಗರ ನಾಯಕರುಗಳ ಕಾರಣಕ್ಕಾಗೇ ಅಪ್ಪಾಜಿಗೌಡರ ಸಿಂಡಿಕೇಟು ಸಂಘದ ಪಾಲಿಗೆ ಅನಿವಾರ್ಯ ಆಯ್ಕೆಯೆನಿಸಿದೆ. ಕೆಂಚಪ್ಪನ ದುಷ್ಟಕೂಟ ಏನೇ ಹೆಂಡ ಖಂಡದ ಹೊಳೆ ಹರಿಸಿದರೂ ಪಾಪದ ದುಡ್ಡು ಪ್ರಾಯಶ್ಚಿತ್ತಕ್ಕೆಂಬಂತೆ ಪ್ರಜ್ಞಾವಂತ ಒಕ್ಕಲಿಗ ಮತದಾರರ್‍ಯಾರೂ ಅದಕ್ಕೆ ಬಲಿಯಾಗುವುದಿಲ್ಲ ಎಂಬ ಸ್ಥಿತಿ ರೂಪುಗೊಳ್ಳುತ್ತಿದೆ.

■ ರಾ. ಸೋಮನಾಥ್

ನನ್ನ ಮೇಷ್ಟ್ರು

ಜಿ.ಎಸ್.ಎಸ್. ಅವರಿಗೆ 60 ತುಂಬಿದ್ದಾಗ ಅವರ ಶಿಷ್ಯ ಅಗ್ರಹಾರ ಕೃಷ್ಣಮೂರ್ತಿ ಅವರು ಬರೆದಿದ್ದ ಮನಮುಟ್ಟುವ ಲೇಖನ ಇಲ್ಲಿದೆ.




ಕನ್ನಡ ಎಂ.ಎ. ಕಲಿಯುತ್ತಿದ್ದಾಗ ನಮ್ಮ ಮೇಷ್ಟ್ರೊಬ್ಬರು "ಕೃಷ್ಣಮೂರ್ತಿ ಒಂದು ಕೆಲಸ ಆಗಬೇಕು. ನೋಡಿ ಜಿ.ಎಸ್.ಎಸ್. ಅವರಿಗೆ ಈಗ ಐವತ್ತು ತುಂಬುತ್ತಿದೆ. ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಸಣ್ಣ ಸಮಾರಂಭ ಮಾಡಬೇಕು. ನಿಮ್ಮ ಕ್ಲಾಸಿನ ಕೆಲವು ಹುಡುಗರು ಉತ್ಸಾಹದಿಂದಿದ್ದಾರೆ. ಆದರೆ ಒಂದು ಸಣ್ಣ ಪ್ರಾಬ್ಲಮ್ಮು" ಅಂದರು. "ಏನು ಹೇಳಿ ಸಾರ್" ಅಂದೆ. "ಅವರೆಲ್ಲಾ ಲಿಂಗಾಯತ ಹುಡುಗರು. ಅವರು ಇನಿಶಿಯೇಟ್ ಮಾಡಿದ್ರೆ ಯಾರಾದರೂ ತಪ್ಪು ತಿಳ್ಕೋತಾರೆ. ಅವರು ಆಗಲೇ ಕಲೆಕ್ಟ್ ಮಾಡಿರೋ ಚಂದಾ ಇದೆ. ನೀವೇ ಇದರ ಜವಾಬ್ದಾರಿ ತಗೋಬೇಕಲ್ಲಾ" ಅಂದರು. "ಅಯ್ಯೋ ಜಿ.ಎಸ್.ಎಸ್. ಅವರಿಗೆ ನಮ್ಮ ಪ್ರೀತಿ ತೋರಿಸೋಕೆ ಜಾತಿ ಯಾಕ್ಸಾರ್ ಅಡ್ಡ ಬರ್ಬೇಕು. ಕೊಡಿ ಇಲ್ಲಿ" ಎಂದು ಆವಳೆಗೆ ಸಂಗ್ರಹವಾಗಿದ್ದ ಹಣ ಪಡೆದು ನನ್ನ ಇತರ ಸಹಪಾಠಿಗಳಿಂದ ಚಂದಾ ಸಂಗ್ರಹಿಸಿ ಇತರ ಅಧ್ಯಾಪಕರನ್ನು ಕಂಡು ಒಂದು ದಿನವನ್ನು ಗೊತ್ತು ಮಾಡಿದೆವು. ಕಾಳೇಗೌಡ ನಾಗವಾರ ಅತ್ಯಂತ ಸಂತೋಷದಿಂದ 'ಖಂಡಿತ ಮಾಡಬೇಕು' ಅಂದರು.

ಕ್ಯಾಂಪಸ್‌ನಿಂದ ಅವತ್ತೇ ಸಿಟಿಗೆ ಬಂದು ಅಧ್ಯಯನ ಕೇಂದ್ರದ ಮಾಜಿ ಅಭ್ಯರ್ಥಿಯಾಗಿದ್ದ ಗೆಳೆಯರೊಬ್ಬರ ಬಳಿ ವಿಷಯ ತಿಳಿಸಿದೆ. "ಬರೀ ಸಮಾರಂಭ ಮಾಡಬೇಡಿ. ಏನಾದರೂ ಒಂದು ನೆನಪಿನ ಕಾಣಿಕೆ ಕೊಡಿ" ಎಂದು ಅವರು ತಮ್ಮ ಪಾಲಿನ ಚಂದಾ ಕೊಟ್ಟರು. ಅವರ ಜೊತೆಯಲ್ಲೇ ಕಾವೇರಿ ಎಂಪೋರಿಯಂಗೆ ಹೋಗಿ ಶ್ರೀಗಂಧದ ಒಂದು ವಿಗ್ರಹ ಕೊಂಡೆವು. ಅವರ ಜನ್ಮದಿನದಂದು ಅಧ್ಯಯನ ಕೇಂದ್ರದಲ್ಲಿ ಪುಟ್ಟ ಸಮಾರಂಭ ನಡೆಯಿತು. ನಾವೆಲ್ಲ ಸಹಪಾಠಿಗಳು, ನಮ್ಮ ಜೂನಿಯರ್ಸ್ ಎಲ್ಲರೂ ಭಾಷಣ ಮಾಡಿದರು. ಪದ್ಯಗಳನ್ನು (ಜಿಎಸ್‌ಎಸ್ ಕುರಿತವಲ್ಲ) ಓದಿದೆವು. ಸುಂದರ, ಸರಳ ಸಮಾರಂಭ, ಮುಕ್ತಾಯವಾದ ಮೇಲೆ ದರಿದ್ರದ ಜಾತಿ ಪ್ರಾಬ್ಲಮ್ಮು ಯಾಕೆ ಬಂದಿತ್ತು ಅಂತ ಯೋಚಿಸಿದೆ.

ಈ ಸಮಾರಂಭಕ್ಕೆ ಮೊದಲೊ ನಂತರವೊ ಒಂದು ಘಟನೆ ನಡೆಯಿತು. ಅಂತಿಮ ಎಂ.ಎ. ವಿದ್ಯಾರ್ಥಿಗಳಿಗೆ ಐದಾರು ದಿನಗಳು ಕರ್ನಾಟಕವನ್ನು ಪರಿಚಯಿಸುವಂಥ ಒಂದು ಸಾಂಸ್ಕೃತಿಕ ಪ್ರವಾಸವೆಂಬುದು ಒಂದು ವಿಶೇಷ ಆಕರ್ಷಣೆ. ಹುಡುಗ-ಹುಡುಗಿಯರು, ಅದರಲ್ಲೂ ಪ್ರೀತಿ-ಪ್ರೇಮದ ಜ್ವರಗಳಲ್ಲಿ ನರಳುತ್ತ ಜಗತ್ತನ್ನು ಮರೆಯುತ್ತಿದ್ದ ನನ್ನಂಥ ಹಲವರಿಗಂತೂ ಸಹಪಾಠಿಗಳ ಜೊತೆಗೆ ಹಗಲುರಾತ್ರಿಗಳನ್ನು ಒಟ್ಟಿಗೆ ಕಳೆಯುವ ಆ ಸಾಂಸ್ಕೃತಿಕ ಪ್ರವಾಸವೆಂಬುದು ಹುಚ್ಚು ಆಕರ್ಷಣೆಯಾಗಿತ್ತು. ನಮ್ಮ ಬ್ಯಾಚ್‌ನಲ್ಲಂತೂ ಹುಡುಗರ ಸಂಖ್ಯೆಗಿಂತ ಹುಡುಗಿಯರ ಸಂಖ್ಯೆಯೇ ಹೆಚ್ಚಾಗಿದ್ದುದರಿಂದ ಈ ಹುಚ್ಚು ಆಕರ್ಷಣೆಗೆ ಇನ್ನೊಂದು ಬಗೆಯ ಬೆರಗು ಸೇರಿತ್ತು.

ಪ್ರವಾಸದ ದಿನಗಳು ನಿಗದಿಯಾದವು. ವಿದ್ಯಾರ್ಥಿಗಳಿಂದ ಹಣ ಸಂಗ್ರಹ ಮಾಡುವ ಜವಾಬ್ದಾರಿಯನ್ನು ಜಿ.ಎಸ್.ಎಸ್ ನನಗೇ ವಹಿಸಿದ್ದರು. ಎಲ್ಲರ ಹಣ ಕೈ ಸೇರಿತು. ನಾವೆಲ್ಲ ಸೂಟ್‌ಕೇಸ್ ಸಿದ್ಧ ಮಾಡಿಕೊಂಡದ್ದೇನು, ಹೊಸ ದಿರಿಸು ಕೊಂಡದ್ದೇನು, ಎಲ್ಲರ ಮುಖದಲ್ಲೂ ಎಂಥದೋ ಸಂತೋಷ.



ಹೊರಡುವ ದಿನ ಕಾಯುತ್ತಿದ್ದ ನಮಗೆ ದಿಢೀರನೆ ಒಂದು ಆಘಾತ. ನೋಟಿಸ್ ಬೋರ್ಡ್‌ನಲ್ಲಿ ಪ್ರವಾಸ ರದ್ದಾಗಿದ್ದ ಪ್ರಕಟಣೆಗೆ ಜಿ.ಎಸ್.ಎಸ್. ಅವರ ಸಹಿ! ಹಣ ಸಂಗ್ರಹ ಮಾಡಿದ್ದ ನನ್ನ ಮೇಲೆ ಸಹಪಾಠಿಗಳ ಒತ್ತಡ. ನೇರ ಹೋಗಿ ಜಿ.ಎಸ್.ಎಸ್. ಅವರನ್ನು ಕೇಳಿದಾಗ "ನಾನೇನು ಮಾಡ್ಲಪ್ಪ ಯೂನಿವರ್ಸಿಟಿಯವರು ಮ್ಯಾಚಿಂಗ್ ಗ್ರ್ಯಾಂಟ್ಸ್ ಕೊಡೋಕೆ ಆಗೋದಿಲ್ಲ ಅಂದಿದಾರೆ" ಅಂದರು.

ರಿಜಿಸ್ಟ್ರಾರರ ಬಳಿ ಎಲ್ಲ ಡಿಪಾರ್ಟ್‌ಮೆಂಟಿನವರಿಗೆ ಕೊಡ್ತೀರಿ, ನಮ್ಮ ಪ್ರವಾಸಕ್ಕೆ ಯಾಕೆ ಆಗೊಲ್ಲ ಎಂದು ಗಲಾಟೆ ಮಾಡಿದೆವು. ಈ ವರ್ಷ ಪ್ರವಾಸ ಬೇಡ ಅಂತ ನಿಮ್ಮ ಹೆಡ್ಡೇ ಕಾಗದ ಬರೆದಿದ್ದಾರೆ ಅಂದರು. ನಮ್ಮ ಕೋಪ ಮುಗಿಲಿಗೇರಿತು. ಆದರೆ ಸಹಪಾಠಿಗಳು ಮತ್ತೆ ಜಿ.ಎಸ್.ಎಸ್. ಬಳಿ ಚರ್ಚಿಸಲು ಮುಂದಾಗಲಿಲ್ಲ.

ನಾನೊಬ್ಬ ಏಕಾಂಗವೀರನಾಗಿ ಅವರ ಕೊಠಡಿ ಹೊಕ್ಕು ಕೂಗಾಡಿದೆ. "ಅದೆಲ್ಲಾ ಆಗೋಲ್ಲ, ನಿಮ್ಮ ಕ್ಲಾಸಿನಲ್ಲಿ ತುಂಬಾ ಜನ ಹೆಣ್ಣುಮಕ್ಕಳಿದ್ದಾರೆ. ಹಿಂದೆಲ್ಲಾ ಅಲ್ಪಸ್ವಲ್ಪ ಗಲಾಟೆಗಳಾಗಿವೆ. ಅವರ ಜವಾಬ್ದಾರಿ ಯಾರು ತಗೋತಾರೆ. ಆಗಲ್ಲ ಹೋಗಿ, ಅವರವರ ಹಣ ಅವರಿಗೆ ವಾಪಸ್ಸು ಕೊಡಿ" ಅಂದರು. ನಾನು ಸಿಟ್ಟು ತಡೆಯಲಾರದೆ ಎಲ್ಲ ಹಣವನ್ನೂ ಅವರ ಮುಂದೆ ಬೀಸಿ ಒಗೆದೆ. ಅವರ ಟೇಬಲ್ ಮೇಲೆ, ನೆಲದ ಮೇಲೆ ನೋಟುಗಳು ಹರಡಿಬಿದ್ದವು. ಜಿ.ಎಸ್.ಎಸ್. ರೇಗಿದರು. ಹೊರಬಂದು ನೇರ ಲೈಬ್ರರಿಗೆ ಹೋಗಿ ಆಕಾಶ ಕಳಚಿಬಿದ್ದಂತೆ ಕೂತೆ! ನನ್ನ ಗೆಳತಿ ಬಂದು ಏನಾಯಿತು ಅಂದಳು. ನಮ್ಮ ಆಸೆಗಳೆಲ್ಲ ಪುಡಿಪುಡಿಯಾದ ಹಾಗೆ ಪರಸ್ಪರ ಮುಖ ನೋಡಿಕೊಂಡು ಜ್ಞಾನಭಾರತಿಯ ಕಣಿವೆಗಳನ್ನು ಅರಸಿ ಹೊರಟೆವು!

ಜವಾನ ನೋಟಿನ ಕಂತೆ ತಂದು ಪ್ರೊಫೆಸರ್ ನಿಮಗೆ ಕೊಡೋಕೆ ಹೇಳಿದಾರೆ ಅಂದ. ಅದನ್ನು ಪಡೆದು ಕಿಸೆಯಲ್ಲಿಟ್ಟು ನಾಲ್ಕೈದು ದಿನ ಓಡಾಡಿದೆ. ಕೆಲವರು ಬಂದು ವಾಪಸ್ ಕೇಳಿದರು. ಪ್ರವಾಸಕ್ಕಾಗಿ ಸಂಗ್ರಹಿಸಿದ್ದ ಹಣವನ್ನು ವಾಪಸ್ ಕೊಡದೆ ಬೇರೊಂದು ಪ್ರವಾಸವನ್ನೇ ವ್ಯವಸ್ಥೆ ಮಾಡುವ ಮನಸ್ಸು ನನ್ನದಾಗಿತ್ತು, ಅದಕ್ಕೆ ಕೇವಲ ಕೆಲವೇ ಮಂದಿ ಒಪ್ಪಿದರು. ಬಹುಮಂದಿ ಆ ಆ್ಯಂಟಿಟೂರ್‌ನಿಂದ ದೂರವುಳಿದರು. ವಾಪಸ್ ಕೇಳಲು ಬಂದವರಿಗೆ ಒರಟಾಗಿ ಹಣ ಜಿ.ಎಸ್.ಎಸ್ ಅವರ ಹತ್ತಿರವಿದೆ, ಹೋಗಿ ಕೇಳಿ ಎಂದೆ.

ಒಬ್ಬೊಬ್ಬರು ಹೋಗಿ ಕೇಳಿದರೆನಿಸುತ್ತೆ, ನನಗೆ ಕರೆ ಬಂತು, ಹೋದೆ. ಯಾಕ್ರೀ ಹೀಗೆ ನನಗೆ ಅವಮಾನ ಮಾಡ್ತಾ ಇದ್ದೀರಿ. ದಯವಿಟ್ಟು ಅವರವರ ಹಣ ಕೊಟ್ಟುಬಿಡಿ ಅಂದರು. ಪ್ರತಿವಾದ ಮಾಡಿ ನಾನು ನೀವೇ ನನಗೆ ಅವಮಾನ ಮಾಡ್ತಾ ಇರೋರು, ನನಗ್ಯಾಕೆ ಹೇಳಬೇಕಾಗಿತ್ತು ದುಡ್ಡು ಕಲೆಕ್ಟ್ ಮಾಡೋಕೆ? ಅಂದೆ. ಎಳೆಯ ಮಕ್ಕಳ ಹಾಗೆ ಹಠಹಿಡಿದು ಕೂಗಾಡಿದೆ.

ಈ ಎರಡನೆಯ ಯುದ್ಧ ಎಲ್ಲರಿಗೂ ಗೊತ್ತಾಯಿತು. ಅಧ್ಯಾಪಕರೂ ಒಳಗೊಂಡಂತೆ ಅನೇಕ ಸಹಪಾಠಿಗಳು ಅಧ್ಯಯನ ಕೇಂದ್ರದ ಆವರಣದಲ್ಲಿ ನನ್ನನ್ನು ಕಂಡರೆ ಮಾತಾಡಿಸದೆ ದೂರ ಸರಿಯುತ್ತಿದ್ದರು. ಕೆ.ವಿ. ನಾರಾಯಣ್ ಮಾತ್ರ ಎಂದಿನಂತೆ ಏನೂ ನಡೆದಿಲ್ಲವೆಂಬಂತೆ ಮಾತಾಡಿಸುತ್ತಿದ್ದರು. ಹಲವರು ಬಂದು ವಿಭಾಗದ ಮುಖ್ಯಸ್ಥರನ್ನು ಎದುರು ಹಾಕಿಕೊಂಡ ನೀನು ಎಂ.ಎ. ಮುಗಿಸುವುದು ಕನಸಿನ ಮಾತೆಂದು ತಿಳಿಸಿದರು.

ಹತ್ತು ಹನ್ನೆರಡು ಜನ ಸಹಪಾಠಿಗಳು ಒಂದು ದಿನದ ಮಟ್ಟಿಗೆ ನಂದಿಬೆಟ್ಟಕ್ಕೆ ಹೋಗಿಬಂದೆವು. ಕಾಲೇಜಿಗೆ ಬಂದಕೂಡಲೇ ಜಿ.ಎಸ್.ಎಸ್. ಹೇಗಿತ್ರೀ ಟ್ರಿಪ್ಪು ಅಂದರು. ಚೆನ್ನಾಗಿತ್ತು ಅಂದೆ. ಯಾರ್‍ಯಾರು ಹೋಗಿದ್ರಿ ಅಂದ್ರು. ನಮ್ಮ ಫ್ರೆಂಡ್ಸ್, ನಮ್ಮ ಕ್ಲಾಸ್‌ಮೇಟ್ಸ್ ಅಂದೆ.

ಪರೀಕ್ಷೆ ಮುಗಿದನಂತರ ನಾನು ಎಂ.ಎ. ಪದವಿ ಗಳಿಸುವ ಬಗ್ಗೆ ನನ್ನ ಹಿತಚಿಂತಕರು ಹೊರಿಸಿದ್ದ ಗಂಟನ್ನು ಹೊತ್ತು ಊರಿಗೆ ಹೋದೆ.

ಒಂದು ಸಂಜೆ ಡಿ.ವಿ. ರಾಜಶೇಖರ್ ಕಳಿಸಿದ್ದ ನಾನು ಅಂತಿಮ ಎಂ.ಎನಲ್ಲಿ ಮೊದಲ ದರ್ಜೆಯಲ್ಲಿ ಪಾಸಾಗಿರುವ ಸುದ್ದಿ ಹೊತ್ತ ತಂತಿ ಬಂತು. ಸುದ್ದಿ ಕೇಳಿದ ತಾಯಿ ಎದುರಿಗೇ ಕುಳಿತಿದ್ದ ತಂದೆಯವರನ್ನು ದೂರುತ್ತಾ "ನೋಡೋ ಕೃಷ್ಣಯ್ಯಾ ನೀನು ಚಿಕ್ಕವನಾಗಿದ್ದಾಗ ನಿಮ್ಮಪ್ಪ ಇವನೊಬ್ಬ ದೊಡ್ಡ ರೌಡಿಯೋ, ದರೋಡೆಕೋರನೋ ಆಗ್ತಾನೆ ಅಂದಿದ್ರು" ಎನ್ನುತ್ತಾ ತಂತಿಯನ್ನು ಕೈಯಲ್ಲಿ ಹಿಡಿದು ಸೆರಗಿನಿಂದ ತಮ್ಮ ಸಂತೋಷದ ಕಣ್ಣೀರನ್ನು ಒರೆಸಿಕೊಂಡರು. ನನ್ನ ಕಣ್ಣಲ್ಲಿ ನೀರೂರಿ ಜಿ.ಎಸ್.ಎಸ್. ಅವರ ಚಿತ್ರ ಮೂಡಿತು. ತನ್ನ ಉದ್ಧಟತನದ [illegible] ತಂದೆತಾಯಿಗಳಿಗೆ ಹೇಳಿದೆ. ಹಲವಾರು ವರ್ಷಗಳ ಕಾಲ ಉಪಾಧ್ಯಾಯರಾಗಿದ್ದ ತಂದೆ ತಮ್ಮ ಭವಿಷ್ಯವಾಣಿಯಂತೆಯೇ ನಡೆದುಕೊಂಡಿದ್ದಾನಲ್ಲಾ ಎಂದು ಮರುಗಿರಬಹುದು. ಹಲವಾರು ವರ್ಷಗಳಿಂದ ಉಪಾಧ್ಯಾಯಿನಿಯಾಗಿರುವ ನನ್ನ ತಾಯಿ ಆಗ ತಮಗಾಗಿದ್ದ ಸಂತೋಷದಲ್ಲೂ "ಅಕ್ಷರ ಕಲಿಸುವ ಗುರುಗಳಿಗೆ ಹಾಗೆ ಮಾಡ್ತರೇನೋ..." ಎಂದು ಮೂದಲಿಸಿದರು. ಮನಸ್ಸಿನ ತುಂಬ ಜಿ.ಎಸ್.ಎಸ್. ತುಂಬಿಕೊಂಡರು.

ಅವರ ಶಿಸ್ತು, ಆತ್ಮಪೂರ್ವವಾದ ಪಾಂಡಿತ್ಯ, ಅವರ ಕಾವ್ಯ ಮತ್ತು ಕಾವ್ಯಮೀಮಾಂಸೆ ಕುರಿತು ಮರೆಯಲಾಗದ ಪಾಠಗಳು, ಆಧುನಿಕ ಕಾಲಕ್ಕೆ ಹೊಂದಿಕೊಂಡ ಆರೋಗ್ಯಪೂರ್ಣ ಮನಸ್ಸು ಎಲ್ಲ ನೆನಪಾದವು. ಅವರ ಮಾತು ಬಂದಾಗಲೆಲ್ಲ ಈಗಲೂ ಅವೆಲ್ಲ ನೆನಪಾಗುತ್ತವೆ.


ಕನ್ನಡವನ್ನು ಪೊರೆದ ಶಕ್ತಿ ಕೇಂದ್ರ



ಜಿ.ಎಸ್.ಎಸ್ ಅವರ ನೇರ ಶಿಷ್ಯೆಯಾಗುವ ಅದೃಷ್ಟ ನನ್ನದಲ್ಲ, ಆದರೆ ಕಳೆದ ಒಂದು ದಶಕದಲ್ಲಿ ಅವರು ನನ್ನ ಬಗ್ಗೆ ತೋರಿಸಿದ ಶಿಷ್ಯವಾತ್ಸಲ್ಯ ನನ್ನ ಬದುಕಿನ ಪುಣ್ಯಗಳಲ್ಲೊಂದು. ಎಂ.ಎ ಮುಗಿಸಿದ ಕೂಡಲೇ ಸೇರಿದ ಬಿ.ಎಂ.ಎಸ್. ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದವರು ಪದ್ಮಾ ಮೇಡಂ. ಅವರನ್ನು ಸಂಜೆ ಕರೆದೊಯ್ಯಲು ಅನೇಕ ಬಾರಿ ಜಿಎಸ್‌ಎಸ್ ಬರುತ್ತಿದ್ದುದುಂಟು. ಗೌರವದ ನಮಸ್ಕಾರ ಬಿಟ್ಟರೆ ಮತ್ತಾವ ಬಗೆಯ ಚರ್ಚೆಗಳಿಗೆ ಆಗ ಅವಕಾಶವಿರಲಿಲ್ಲ. ಮುಂದೆ ನಾನು ಸರ್ಕಾರಿ ಕಾಲೇಜಿಗೆ ಸೇರಿ ಬೆಂಗಳೂರನ್ನೇ ಬಿಟ್ಟೆ. ದಶಕದ ನಂತರ ವಿಚಾರಸಂಕಿರಣವೊಂದರಲ್ಲಿ ಅವರನ್ನು ಭೇಟಿಯಾಗಿದ್ದು, ಗೋಷ್ಠಿ ಮುಗಿದನಂತರ ಜಿಎಸ್‌ಎಸ್ ಮಾತಿಗೆ ಸಿಕ್ಕರು. ಮುಂದಿನ ವಿಚಾರ ಸಂಕಿರಣದಲ್ಲಿ ಭೇಟಿಯಾದಾಗ ಅವರ ಕೈಯಲ್ಲಿ ಕುವೆಂಪು ಕುರಿತ ಅವರ ಹೊಸ ಪುಸ್ತಕವಿತ್ತು "ನಿಮಗೆ ಕೊಡಲೆಂದೇ ತಂದಿದ್ದೇನೆ ಗೊಳಿ" ಎಂದರು. ಖರೆ, ತುಂಬಾ ಸಂತೋಷವಾಗಿತ್ತು ಅವತ್ತು ನನಗೆ. ಮನೇಲಿ ಎಲ್ಲರಿಗೂ ತೋರಿಸಿ ಬೀಗಿದ್ದೆ.

ಮುಂದೆ ಸುಮಿತ್ರಾಬಾಯಿ ಮೇಡಂಗೆ ಜಿಎಸ್‌ಎಸ್ ಪ್ರಶಸ್ತಿ ಬಂದಾಗ ಅವರ ಅಭಿನಂದನಾ ಭಾಷಣ ನಾನೇ ಮಾಡಬೇಕೆಂದು ಜಿಎಸ್‌ಎಸ್ ಅಪೇಕ್ಷಿಸಿದರು. ಅಲ್ಲಿಂದ ಒಂದು ಅನುಬಂಧ ಬೆಳೆಯಿತು. ನನ್ನ ಪುಸ್ತಕಗಳನ್ನು ಅವರಿಗೆ ಕೊಟ್ಟು ಅವರು ಓದಿ ಅದಕ್ಕೆ ಪ್ರತಿಕ್ರಿಯಿಸುವವರೆಗೆ ಅದು ಮುಂದುವರೆಯಿತು. ಫೆಲೋಷಿಪ್‌ಗಾಗಿ ನಾನು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅವರ ಹೆಸರನ್ನು [illegible] ರೆಫರೀ‌ಗಾಗಿ ಕೊಟ್ಟಿದ್ದೆ. ಅದು ನನಗೆ ದೊರೆತಾಗ ಅವರ ಮನೆಗೆ ಹೋಗಿದ್ದೆ ಧನ್ಯವಾದ ಹೇಳಲೆಂದು. ಜೊತೆಯಲ್ಲಿ ರಸಗುಲ್ಲಾ ಒಯ್ದಿದ್ದೆ. ಸಂಜೆಯ ಹೊತ್ತು, ಅವರ ಆಹಾರಾಭ್ಯಾಸದ ಕ್ರಮ ಗೊತ್ತಿಲ್ಲದ ನಾನು, ಒಂದು ರಸಗುಲ್ಲಾ ನೀವು ಈಗ ತಿನ್ನಬಹುದೆ ಎಂದು ಕೇಳಿದೆ. ವೈ ನಾಟ್ ಎಂದವರು ಬಟ್ಟಲಿಗೆ ಹಾಕಿಕೊಟ್ಟ ರಸಗುಲ್ಲಾ ತಿನ್ನಲು ಪ್ರಾರಂಭಿಸಿದರು. ಒಮ್ಮೆ ಬಾಯಿಗಿರಿಸಿದ್ದೇ "ಓ ಕೆ.ಸಿ.ದಾಸ್‌ದು" ಅಂದರು. ಆಶ್ಚರ್ಯದಿಂದ ನಾನು "ಹೌದು ಸಾರ್, ಹೇಗೆ ಗೊತಾಯ್ತು?" ಅಂದರೆ "ಕೆ.ಸಿ.ದಾಸ್‌ದು ಮುಖ ತೀಡುವ ಸಿಹಿಯಲ್ಲ, ಆದ್ದರಿಂದಲೇ ಅಲ್ಲಿನ ರಸಗುಲ್ಲಾ ತಿನ್ನುವುದು ಒಂದು ಸುಖ" ಅಂದರು. ಈಗ ನೆನೆಸಿಕೊಂಡರೆ, ಅದು ಅವರ ಬದುಕಿನ ದೃಷ್ಟಿಕೋನವೇ ಹೌದಲ್ಲವೇ ಅನಿಸುತ್ತದೆ. ಅಬ್ಬರ, ಅತಿ ಪ್ರದರ್ಶಕ ಇದು ಯಾವುದೂ ಅವರ ಆಯ್ಕೆಯಲ್ಲ, ಅವರು ಒಲಿದದ್ದು ಆಪ್ತ ಮೆಲುದನಿಗೆ.

ಕನ್ನಡ ಜಗತ್ತನ್ನು ಶ್ರೀಮಂತಗೊಳಿಸಿದ ಅನೇಕ ಕೆಲಸಗಳ ರೂವಾರಿ ಅವರು. ಕನ್ನಡಿಗರು ಅವರಿಗೆ ಕೃತಜ್ಞರಾಗಿರಬೇಕಾದ ಅನೇಕ ಸಂಗತಿಗಳಿವೆ. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆಯಂತಹ ಚಾರಿತ್ರಿಕ ಮಹತ್ವದ ಯೋಜನೆಯಾಗಲಿ, ಕನ್ನಡ ಸಾಹಿತ್ಯ ಪರಂಪರೆಯನ್ನೇ ಮರುಓದಿಗೆ ಒಳಗು ಮಾಡಿದ ವಿಚಾರ ಸಂಕಿರಣಗಳಾಗಲೀ ಪಡೆದಿರುವ ಸ್ಥಾನ ಮತ್ತು ಪ್ರಸ್ತುತತೆಯನ್ನು ಕನ್ನಡದಲ್ಲಿ ಚರ್ಚಿಸಲಾಗಿದೆ. ಈ ವಿಚಾರಸಂಕಿರಣಗಳ ಮೂಲಕ ಕನ್ನಡದಲ್ಲಿ ಸ್ಥಾಪಿತವಾದ ವಿವಿಧ ತಾತ್ವಿಕ ಮಾದರಿಗಳ ಅಧ್ಯಯನವೂ ಅಷ್ಟೇ ಕುತೂಹಲಕಾರಿ. ಎಂದರೆ ಕನ್ನಡ ಸಾಹಿತ್ಯದ ಮರು ಓದಿನ ಈ ಸನ್ನಿವೇಶಗಳು ಕನ್ನಡದಲ್ಲಿ ಬೆಳೆಸಿದ ತಾತ್ವಿಕ ಮಾದರಿಗಳು ಅಖಿಲ ಭಾರತ ಮನ್ನಣೆಯನ್ನು ಪಡೆದ ಸಂದರ್ಭಗಳನ್ನು ಗಮನಿಸಿದರೆ ಜಿಎಸ್‌ಎಸ್ ಕೊಡುಗೆ ಎಷ್ಟು ಮಹತ್ವದ್ದು ಅನ್ನುವ ಅರಿವಾಗುತ್ತದೆ. ಸಾಂಪ್ರದಾಯಿಕ ಎನ್ನಬಹುದಾದ ಅಥವಾ ಸ್ಥಾಪಿತ ಮಾದರಿಗಳಲ್ಲಿ ಅವರು ಈ ಚರ್ಚೆಗಳನ್ನು ಆಯೋಜಿಸದೆ ಸಮಕಾಲೀನ ಬೆಳವಣಿಗೆಗಳಿಗೆ ಸ್ಪಂದಿಸಿ ಅವುಗಳನ್ನೂ ಒಳಗೊಂಡಂತೆ ಸಂಕಿರಣಗಳ ಭಿತ್ತಿಯನ್ನು ರೂಪಿಸಿದ್ದು ಕನ್ನಡ ವಿಮರ್ಶೆಯ ಬೆಳವಣಿಗೆಯ ದೃಷ್ಟಿಯಿಂದ ತೀರಾ ಮಹತ್ವದ್ದು. ರಾಷ್ಟ್ರೀಯತೆಯನ್ನು ಕುರಿತ, ಎಲಿಯಟ್‌ನನ್ನು ಕುರಿತ ಅಥವಾ ಷೇಕ್ಸ್‌ಪಿಯರ್‌ನನ್ನು ಕುರಿತ ಸಂಕಿರಣಗಳು ಇದಕ್ಕೆ ಒಳ್ಳೆಯ ಉದಾಹರಣೆ. ಜಿಎಸ್‌ಎಸ್ ಅವರ ವ್ಯಾಪಕವಾದ ವಿದ್ವತ್ತು, ತೆರೆದ ದೃಷ್ಟಿಕೋನ ಮಾತ್ರವಲ್ಲ ಅಂತಿಮವಾಗಿ ಕನ್ನಡಕ್ಕೆ ದಕ್ಕಬಹುದಾದ್ದು ಏನು ಅನ್ನುವ ಸಾಧ್ಯತೆಯು ಎದುರಿಗೆ ಮಿಕ್ಕೆಲ್ಲವೂ ಅವರಿಗೆ ಗೌಣವಾಗಿ ಕಂಡಿದ್ದಿರಬೇಕು. ಅವರೇ ಗುರುತಿಸಿ ಬೆಳೆಸಿದ ಶಿಷ್ಯರು ಅವರನ್ನೂ ಮೀರಿ ಅಖಿಲ ಭಾರತ ಮಟ್ಟದಲ್ಲಿ ಬೆಳೆದಾಗ ಅಪಾರ ಸಂತೋಷ ಮತ್ತು ಹೆಮ್ಮೆ ಪಟ್ಟವರು ಜಿಎಸ್‌ಎಸ್. ಇದು ಅಪರೂಪದ ಗುಣ. ಅದೇ ಶಿಷ್ಯರು ಹಲವು ಬಾರಿ ಅಧಿಕಪ್ರಸಂಗ ಮಾಡಿದಾಗಲೂ ಆದ ನೋವನ್ನು ಅವರೆಂದೂ ಕಹಿಯಾಗಿ, ದ್ವೇಷವಾಗಿ ಬೆಳೆಸಲಿಲ್ಲ ಎನ್ನುವುದು ಅವರ ವ್ಯಕ್ತಿತ್ವ ಮತ್ತು ಆದ್ಯತೆಗಳನ್ನು ಕುರಿತಂತೆ ಅನೇಕ ಸಂಗತಿಗಳನ್ನು ಹೇಳುತ್ತದೆ. ಜಿಎಸ್‌ಎಸ್ ಕೊಡುಗೆಯನ್ನು ಇನ್ನೂ ವಿಸ್ತಾರವಾದ ಭಿತ್ತಿಯಲ್ಲಿ ಚರ್ಚಿಸುವ ಅಗತ್ಯವಿದೆಯೆಂದು ತೋರುತ್ತದೆ.




ಇದು ಒಂದು ಕಡೆಯಾದರೆ, ಇನ್ನೊಂದು ಕಡೆ ಜಿಎಸ್‌ಎಸ್ ಅವರ ಕಾವ್ಯ ಮತ್ತು ಕಾವ್ಯಮೀಮಾಂಸೆಯನ್ನು ಕುರಿತ ಭಿನ್ನ ಆಯಾಮದ ಅಧ್ಯಯನಗಳು ನಡೆಯಬೇಕಾಗಿರುವುದು ಇನ್ನೊಂದು ಅಗತ್ಯ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳನ್ನು ಕುರಿತಂತೆ ಇವರದು ತೀವ್ರ ಪ್ರತಿರೋಧದ ನೆಲೆಯ ಕಾವ್ಯ. ಆದರೆ ಇವರ ಕಾವ್ಯಶಿಲ್ಪ ಮತ್ತು ಶೈಲಿಯೇ ಕಾರಣವಾಗಿ ಈ ಪ್ರತಿರೋಧದ ನೆಲೆ ಸಾಕಷ್ಟು ಚರ್ಚೆಗೆ ಒಳಗಾಗಿಲ್ಲ. ಇವರ ಕಾವ್ಯದ ಭಾವಗೀತಾತ್ಮಕ ನೆಲೆಯೇ ಮುನ್ನೆಲೆಗೆ ಬಂದಿರುವುದು ಜಿಎಸ್‌ಎಸ್ ಕಾವ್ಯಕ್ಕೆ ಮಾತ್ರವಲ್ಲ ಒಳ್ಳೆಯ ಕಾವ್ಯಕ್ಕಾದ ಹಿನ್ನಡೆಯೆಂದೇ ನಾವು ತಿಳಿಯಬೇಕು.

ಕಾವ್ಯಮೀಮಾಂಸೆಯನ್ನು ಇವರ ಕೃತಿಗಳಿಗೆ ಕನ್ನಡವನ್ನೂ ಮೀರಿದ ವ್ಯಾಪಕತೆಯಿದೆ. ಸೌಂದರ್ಯ ಸಮೀಕ್ಷೆಯು

ಾಂಶ ಬಂದ ಐದಾರು ತಿಂಗಳ ನಂತರ ಕಾಶಿಯ ...ಹಿಂದೂ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ...ಕೊಂಡು ಹೋದ ನಾನು ಜಿ.ಎಸ್.ಎಸ್. ಅವರಿಗೆ ...ತ್ರ ಬರೆದು ನನ್ನ ವಿದ್ಯಾರ್ಥಿ ಜೀವನದ ಅವಿವೇಕದ ... ಪ್ರಸ್ತಾಪಿಸಿ ಕ್ಷಮೆ ಕೇಳಿದ್ದೆ. ಈಗಲೂ ನನ್ನ ...ವ ಅವರ ಉತ್ತರದಲ್ಲಿ ಹೀಗೆ ಬರೆದಿದ್ದಾರೆ. ...ಕಾಶೀಯಾತ್ರೆಯ ಸಮಾಚಾರ ನನಗೆ ದೊರಕಿತು. ... ಧೈರ್ಯ ಮಾಡಿ, ಕನ್ನಡ ನಾಡಿನಿಂದಾಚೆಗೆ, ...ರಾದ ಕಾಶಿಯಲ್ಲಿ ನಿಮ್ಮ ಭವಿಷ್ಯವನ್ನು ...ಂಡು ಹೊರಟಿದ್ದೀರಿ. ಭೌಗೋಳಿಕವಾಗಿ ಮಾತ್ರ ...ತರ; ಮಾನಸಿಕವಾಗಿ ನಾವೆಲ್ಲ ಸದಾ ನಿಮ್ಮ ...ವೆ ಎಂದು ತಿಳಿಯಿರಿ. ನನ್ನ ವೈಯಕ್ತಿಕವಾದ ... ಬೆಂಬಲ ಪ್ರೀತಿ ನಿಮ್ಮೊಂದಿಗೆ ಇದೆ.

...ವು ನಿಮ್ಮ ವಿದ್ಯಾರ್ಥಿ ಜೀವನದ 'ಅವಿವೇಕದ ... ಬಗ್ಗೆ ಪ್ರಸ್ತಾಪಿಸಿದ್ದೀರಿ. ನನಗೆ ಅವೆಲ್ಲಾ ನೆನಪಿನಲ್ಲೇ ...ವು ನನ್ನ ಬಗೆಗೆ ಯಾವ ತಪ್ಪನ್ನೂ ಮಾಡಿಲ್ಲ. ... ವಯಸ್ಸಿನಲ್ಲಿ ಒಂದೊಂದು ರೀತಿ ...ಳ್ಳುವುದು ತೀರಾ ಸಹಜ. ಎಲ್ಲ emotion ...ಸಭ್ಯತೆಯ ಇಸ್ತ್ರಿ ಹೊಡೆದ ನಡವಳಿಕೆಗಳು ನನಗೆ ... ಎಲ್ಲ ವೈಪರೀತ್ಯಗಳೂ, ವೈವಿಧ್ಯತೆಗಳೂ ಇದ್ದರೇ ...ವಂತಿಕೆಯ ಲಕ್ಷಣ... ಸುತ್ತಣ ಬದುಕನ್ನು ಚೆನ್ನಾಗಿ ...ಏನಾದರೂ ಬರೆಯಿರಿ. ಬರೆದದ್ದನ್ನು 'ಸಾಧನೆ' ...ಕಳಿಸಿರಿ... ಶುಭಮಸ್ತು; ವಂದನೆಗಳು'. ನಿಮ್ಮ ... ಶಿವರುದ್ರಪ್ಪ"

...ವರಿ 77ರಲ್ಲಿ ಆ ಪತ್ರ ಬಂದಾಗಿನಿಂದ ಈವರೆಗೆ ... ಸಲ ಅವರನ್ನು ಭೇಟಿಯಾಗಿದ್ದೇನೆ. ಎಂದಿನ ... ಪಡೆದಿದ್ದೇನೆ. ಯಾವಾಗಲೋ ಒಮ್ಮೆ ಸಿಗರೇಟು ...ಗ ಎದುರಾದರು. ಕೆಳಕ್ಕೆ ಹಾಕಿ ನಮಸ್ಕಾರ ...ದೆ. ಯಾಕೆ ಬಿಸಾಕ್ತೀರಿ ಸುಮ್ಮನಿರಿ ಅಂದರು. ...ಲೋ ಯಾವುದೋ ಪಾರ್ಟಿಯಲ್ಲಿ ಎಲ್ಲರೂ ...ಕುಡಿಯುತ್ತಿದ್ದರು. ಇವರು ಸುಮ್ಮನೆ ಕುಳಿತಿದ್ದರು. ...ೋದಕೂಡಲೆ ಆತಿಥೇಯರು ನನಗೆ ಬಿಯರ್ ...ದರು. ಜಿ.ಎಸ್.ಎಸ್. ಎದುರಾಗಿದ್ದುದರಿಂದ ...ೆ. ತಗೊಳ್ರೀ ಪರವಾಗಿಲ್ಲ ಅಂದರು ಜಿಎಸ್ಎಸ್. ...ಡಿತವಾಗಿಯೂ ಬೇಡವೆಂದೆ. "ಅಯ್ಯೋ ತಗೊಳ್ಳಿ ...ಬೇಕಾದರೆ ನನಗೂ ಒಂದು ಅರ್ಧ ಗ್ಲಾಸ್ ...ಎಂದು ನನ್ನ ವಯಸ್ಸಿನ ಗೆಳೆಯರ ಹಾಗೆ ...ದ ಸಂಕೋಚ, ಮುಜುಗರಗಳನ್ನು ಓಡಿಸಿದರು. ಆಗಾಗ ನಮ್ಮಗಳ ಬಗ್ಗೆಯೆಲ್ಲಾ ನಗುತ್ತಾ 'ಶೀಶೋತ್ತಮರೆ' ಅನ್ನುತ್ತಾರೆ. ನನ್ನ ಮತ್ತು ನನ್ನ ಸಮಕಾಲೀನರ ಬರವಣಿಗೆಯನ್ನು ಪ್ರೋತ್ಸಾಹಿಸಿದವರು ಅವರು. ಇವೆಲ್ಲ ನಮ್ಮ ಶ್ರೀಮಂತ ನೆನಪುಗಳು.



ಅಗ್ರಹಾರ ಕೃಷ್ಣಮೂರ್ತಿ

...ತಮ್ಮ ಅಧ್ಯಯನಕ್ಕೆ ಭದ್ರವಾದ ಮತ್ತು ವಿಸ್ತಾರವಾದ ...ನ್ನ ರೂಪಿಸಿಕೊಂಡ ಜಿಎಸ್ಎಸ್ ಈ ಭಿತ್ತಿಯ ...ವೇ ಕಾವ್ಯಮೀಮಾಂಸೆಯನ್ನು ಕುರಿತ ...ಗಳನ್ನು ಬೆಳೆಸಿದರು. ಈ ಅಧ್ಯಯನಗಳು ಆಧುನಿಕ ...ಯ ಕಾವ್ಯಮೀಮಾಂಸೆಯ ವಿವಿಧ ಮಜಲಿಗಳನ್ನು ...ತ್ತವೆ. ಕಾವ್ಯ ಮೀಮಾಂಸೆಯನ್ನು ಕುರಿತ ಮೊದಲ ...ರ್ಶೆಯ ಪೂರ್ವ-ಪಶ್ಚಿಮ' ಎರಡನ್ನೂ ದ್ವೈತದ ... ಪರಿಭಾವಿಸಿದರೆ, ಕಾವ್ಯಾರ್ಥ ಚಿಂತನ ಪೂರ್ವ ...ಳನ್ನು ಅದ್ವೈತದ ನೆಲೆಯಲ್ಲಿ ಗ್ರಹಿಸಲು ...ತ್ತದೆ. ನಂತರದ ಕೃತಿ 'ಕನ್ನಡ ಕಾವ್ಯಗಳಲ್ಲಿ ಕಾವ್ಯ ...ತನೆ' ಕನ್ನಡ ಕಾವ್ಯ ಮೀಮಾಂಸೆಯ ಸಾಧ್ಯತೆ ...ತ್ವವನ್ನು ಗುರುತಿಸಲು ಪ್ರಯತ್ನಿಸುವ ಮಹತ್ವದ ...ಾಹಿತೋತ್ತರ ಭಾರತೀಯ ಕಾವ್ಯ ಚಿಂತನೆಯ ...ಖ್ಯ ಮಜಲುಗಳಲ್ಲೂ ಜಿಎಸ್ಎಸ್ ಅವರ ... ಇಲ್ಲಿ ಕಾಣಿಸುತ್ತದೆ. ಇದನ್ನು ಇನ್ನೂ ... ಅಧ್ಯಯನಕ್ಕೆ ಒಳಗು ಮಾಡಬೇಕಾಗಿರುವುದು ...ಅಗತ್ಯ.

...ಸ್ವಂತದ ಬರವಣಿಗೆಯಲ್ಲಿ ಇಷ್ಟು ತನ್ಮಯವಾಗಿ ...ಂಡೂ ತನ್ನ ಭಾಷೆಯ ಪರಂಪರೆ ಮತ್ತು ...ೀನ ಬರವಣಿಗೆಯನ್ನು ಬಹುಮುಖಿ ನೆಲೆಯಲ್ಲಿ ... ಅಗತ್ಯವಾದ ವಾತಾವರಣವನ್ನು, ಸಂದರ್ಭಗಳನ್ನು ...ವುದು, ಅವುಗಳ ಬಗ್ಗೆ ನಿರಂತರವಾದ ಆಸ್ಥೆ ...ಯನ್ನು ಉಳಿಸಿಕೊಂಡು ಬರುವುದು ಅಸಾಧಾರಣ ಚೇತನಗಳಿಗೆ ಮಾತ್ರ ಸಾಧ್ಯ. 'ನಾಡೋಜ' ಪ್ರಶಸ್ತಿ ಇವರ ವಿಷಯದಲ್ಲಿ ನಿಜವಾದಂತೆ ಬೇರಾರ ಮಟ್ಟಿಗೂ ಆಗಿಲ್ಲ ಎನ್ನುವುದು ಯಾರೂ ಒಪ್ಪುವ ಸತ್ಯ.



ಡಾ.ಎಂ.ಎಸ್ ಆಶಾದೇವಿ

ಬೆಂಗಳೂರಿನಲ್ಲೂ ಮಾನಸಿಯ ಬೆನ್ನಿಗೆ ಬಿದ್ದ ಮೋದಿ

ಆತ ಪಿಯುಸಿ ತನಕ ಮಾತ್ರ ಕಾಲೇಜಿನಲ್ಲಿ ಓದಿದ್ದ. ಆಕೆ ಎಂಜಿನಿಯರಿಂಗ್ ಪದವೀಧರೆ.

ಆತ ಅಂಚೆಶಿಕ್ಷಣ ವ್ಯವಸ್ಥೆಯಡಿ ಒಂದು ಮಾಮೂಲಿ ಡಿಗ್ರಿ ಪಡೆದಿದ್ದ.

ಆಕೆ ಬೆಂಗಳೂರಿನಂತಹ ಕಾಸ್ಮೋಪಾಲಿಟನ್ ನಗರದ ಬಿಎಂಎಸ್ ಕಾಲೇಜಿನ ಮುಕ್ತ ವಾತಾವರಣದಲ್ಲಿ ಓದಿದ್ದವಳು.

ಆತನಿಗೆ ಆಗ ವಯಸ್ಸು 59. ಅಷ್ಟುಹೊತ್ತಿಗಾಗಲೇ ಆತನ ತಲೆ ಕೂದಲು ಉದುರುತ್ತಾ ಅವನ ಬುರುಡೆಯನ್ನು ಬೊಕ್ಕುತನ ಆವರಿಸುತ್ತಿತ್ತು.

ಆಕೆ ಆಗಿನ್ನೂ 25-28 ಹರೆಯದ ತರುಣಿ. ಜೀವನೋತ್ಸಾಹದಿಂದ ತುಂಬಿತುಳುಕುತ್ತಿದ್ದವಳು.

ಆತ ಗುಜರಾತಿನ ಮುಖ್ಯಮಂತ್ರಿ ನರಹಂತಕ ನರೇಂದ್ರ ಮೋದಿ.


ಆಕೆ ಮಾನಸಿ ಸೋನಿ.

ಇವರಿಬ್ಬರ ನಡುವಿನ ಪ್ರೇಮ ಪ್ರಕರಣದ ಬಗ್ಗೆ, ಶರದ್ ಉತ್ಸವದಲ್ಲಿ ಒಂಟಿ ಗಾಡಿಯಲ್ಲಿ ಕುಳಿತು ಬೆಳದಿಂಗಳಲ್ಲಿ ಸುತ್ತಾಡಿದ ಬಗ್ಗೆ, ಕೊನೆಗೆ ಆತನ ಅಸೂಯೆ ಸ್ವಭಾವವನ್ನು ತಡೆಯಲಾರದೆ ಮಾನಸಿ ಮೋದಿಗೆ ಕೈಕೊಟ್ಟಿದ್ದರ ಬಗ್ಗೆ ಹಲವು ವಾರಗಳ ಹಿಂದೆ ವಿವರವಾಗಿ ಬರೆದಿದ್ದೆವು. ಹೀಗೆ ಭಗ್ನಪ್ರೇಮಿಯಾದ ಮುದಿ ಮೋದಿ ಆನಂತರ ಸುಮ್ಮನಾಗಲಿಲ್ಲ, ಆಕೆ ಯಾವ ಯುವಕನನ್ನು ಭೇಟಿ ಆಗುತ್ತಿದ್ದಾಳೆ, ಯಾವ ಪುರುಷನೊಂದಿಗೆ ಮಾತನಾಡುತ್ತಿದ್ದಾಳೆ ಎಂಬೆಲ್ಲ ವಿವರಗಳನ್ನು ತಿಳಿಯಲು ತನ್ನ ಪೊಲೀಸ್ ಅಧಿಕಾರಿಗಳನ್ನು ಆಕೆಯ ಮೇಲೆ ಅಕ್ರಮ ಬೇಹುಗಾರಿಕೆ ಛೂಬಿಟ್ಟಿದ್ದು ಈಗ ಎಲ್ಲರಿಗೂ ಗೊತ್ತಿದೆ.

ಈ ಕಾನೂನುಬಾಹಿರ ಬೇಹುಗಾರಿಕೆ ಹಗರಣವು ಸ್ಫೋಟಗೊಳ್ಳುತ್ತಿದ್ದಂತೆ ಬಿಜೆಪಿ ಡ್ಯಾಮೇಜ್ ಕಂಟ್ರೋಲಿಗೆ ಮುಂದಾಗಿತ್ತು. ಬಿಜೆಪಿಯ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ "ಇದರಲ್ಲಿ ಯಾವ ಕಾನೂನನ್ನೂ ಉಲ್ಲಂಘಿಸಿಲ್ಲ" ಎಂದು ಹೇಳಿದನಲ್ಲದೆ ಮಾನಸಿಯ ತಂದೆ ಪ್ರಾಣ್‌ಲಾಲ್ ಸೋನಿ ಎಂಬಾತನಿಂದ "ನನ್ನ ಮಗಳಿಗೆ ಜೀವ ಬೆದರಿಕೆ ಇತ್ತು. ಆಕೆಗೆ ರಕ್ಷಣೆ ನೀಡಬೇಕೆಂದು ನಾನೇ ಕೇಳಿದ್ದರಿಂದ ನರೇಂದ್ರ ಮೋದಿ ಪೊಲೀಸರನ್ನು ನಿಯೋಜಿಸಿದ್ದರು" ಎಂಬ ಪತ್ರವನ್ನೂ ಬಿಡುಗಡೆ ಮಾಡಿಸಿದ್ದರು ಕಪಟ ದೇಶಭಕ್ತ, ಮಹಿಳೆಯರ ದಮನ ಮಾಡುವ ಚೆಡ್ಡಿಗಳು.

ಆದರೆ ಮೂರು ದಿನಗಳ ಹಿಂದೆ ಪತ್ರಕರ್ತ ಆಶೀಶ್ ಖೇತಾನ್ ತಮ್ಮ ಗುಲೈಲ್ ವೆಬ್ ಪೋರ್ಟಲ್‌ನಲ್ಲಿ ಬಿಡುಗಡೆ ಮಾಡಿರುವ ಹೆಚ್ಚುವರಿ 39 ಟೆಲಿಫೋನ್ ಸಂಭಾಷಣೆಗಳ ರೆಕಾರ್ಡಿಂಗ್‌ಗಳು ಮೂರು ವಿಷಯಗಳನ್ನು ಸ್ಪಷ್ಟಪಡಿಸುತ್ತವೆ.


ಮೊದಲನೆಯದಾಗಿ ಮಾನಸಿ ಮೇಲಿನ ಅಕ್ರಮ ಬೇಹುಗಾರಿಕೆ ಗುಜರಾತ್ ರಾಜ್ಯದಲ್ಲಿ ಮಾತ್ರ ನಡೆಯಲಿಲ್ಲ,



ಬದಲಾಗಿ ನಮ್ಮ ಕರ್ನಾಟಕದಲ್ಲೂ ನಡೆದಿತ್ತು.

ಎರಡನೆಯದಾಗಿ ಮಾನಸಿ ಮಾತ್ರವಲ್ಲದೆ, ಆಕೆಯನ್ನು ಮದುವೆಯಾಗಲಿದ್ದ ಯುವಕ, ಆಕೆಯ ಮಿತ್ರರು, ತಂದೆ, ತಾಯಿ, ಸಹೋದರರು, ಆಕೆಯ ಕುಟುಂಬದ ಮಿತ್ರರಾಗಿದ್ದ ಐಎಎಸ್ ಅಧಿಕಾರಿ ಪ್ರದೀಪ್ ಶರ್ಮ ಅವರೆಲ್ಲರ ಫೋನ್ ಕರೆಗಳ ಮೇಲೂ, ಅವರ ಎಲ್ಲಾ ಚಲನವಲನಗಳ ಮೇಲೂ ಗುಜರಾತ್ ಪೊಲೀಸರು ಅಕ್ರಮವಾಗಿ ಬೇಹುಗಾರಿಕೆಯನ್ನು ವ್ಯವಸ್ಥಿತವಾಗಿ ಎರಡು ತಿಂಗಳಿಗಿಂತ ಹೆಚ್ಚು ಕಾಲ ನಡೆಸಿದ್ದರು.

ಮೂರನೆಯದಾಗಿ, ಮಾನಸಿ ಸೋನಿ ಮೇಲೆ ಕಟ್ಟೆಚ್ಚರ ಇಡಲು ಕಾರಣ ಸಮಾಜಕ್ಕೆ, ಆಕೆಗಾಗಲಿ ಅಥವಾ ಯಾರಿಂದಲೋ ಆಕೆಗಾಗಲಿ ಜೀವ ಬೆದರಿಕೆ ಇದೆ ಎಂಬುದಕ್ಕಲ್ಲ, ಬದಲಾಗಿ ಆಕೆಯ ಬಗೆಗೆ ಮೋದಿಗೆ ಕೆಟ್ಟ ಕುತೂಹಲ ಇದ್ದಿದ್ದರಿಂದಾಗಿ ಆಕೆಯ ವಿರುದ್ಧ ಪೊಲೀಸರನ್ನು ನಿಯೋಜಿಸಲಾಗಿತ್ತು.



ಮೋದಿಯ ದುಷ್ಟತನ ಎಂತಹದ್ದೆಂದರೆ ಬೆಂಗಳೂರಿನಲ್ಲೂ ಮಾನಸಿ ಮೇಲಿನ ಗೂಢಚಾರ ನಡೆಯುತ್ತಿದ್ದಾಗ ಅದರ ಬಗ್ಗೆ ಆಗ ಗೃಹಮಂತ್ರಿ ಆಗಿದ್ದ ವಿ.ಎಸ್.ಆಚಾರ್ಯನಿಗೆ ಗೊತ್ತೇ ಇರಲಿಲ್ಲ, ಬದಲಾಗಿ ಮೋದಿಯ ಸರ್ಕಾರ ಬೆಂಗಳೂರಿನ ಪೊಲೀಸರಿಗೂ ಮಂಕುಬೂದಿ ಎರಚಿ ಆಕೆಯ ಚಲನವಲನಗಳ ಮತ್ತು ಫೋನ್ ಸಂಭಾಷಣೆಗಳ ಮೇಲೆ ನಿಗಾ ಇಟ್ಟಿದ್ದರು. ಅಷ್ಟೇ ಅಲ್ಲ, ಆಚಾರ್ಯ ಮರಣಹೊಂದಿದ ನಂತರ ಗೃಹ ಇಲಾಖೆ ಸಚಿವನಾದ ಆರ್.ಅಶೋಕ್‌ಗೆ ಇದರ ಬಗ್ಗೆ ಗೊತ್ತಾದರೂ ಅಸಹಾಯಕನಂತೆ ಕೈಹೊಸೆಯುವುದನ್ನು ಬಿಟ್ಟು ಬೇರೇನೂ ಮಾಡಲಿಕ್ಕಾಗಿರಲಿಲ್ಲ.

ನಿಯಮಗಳ ಪ್ರಕಾರ ಯಾರದ್ದೇ ಫೋನ್ ಅನ್ನು ಟ್ಯಾಪ್ ಮಾಡಬೇಕಿದ್ದರೆ ಅದಕ್ಕೆ ಸೆಕ್ರೆಟರಿ ಲೆವೆಲ್‌ನ ಅಧಿಕಾರಿ ಅನುಮತಿ ನೀಡಬೇಕು. ಆದರೆ ಮೋದಿ ಸರ್ಕಾರ ಕಿರಿಯ ಅಧಿಕಾರಿಗಳಿಂದ ಅನುಮತಿ ಪತ್ರಗಳನ್ನು ಕಳುಹಿಸಿತ್ತಲ್ಲದೆ, ಖಾಸಗಿ ಮೊಬೈಲ್ ಕಂಪನಿಗಳ ಜೊತೆ ಅಕ್ರಮವಾಗಿ ಕೈಜೋಡಿಸಿ ಅನಧಿಕೃತವಾಗಿ ಮಾನಸಿ ಮತ್ತು ಆಕೆಯ ಹತ್ತಿರದವರೆಲ್ಲರ ಮೇಲೆ ನಿಗಾ ಇಟ್ಟಿತ್ತು.

ಅಷ್ಟೇ ಮುಖ್ಯವಾಗಿ, ಇಂಡಿಯನ್ ಟೆಲಿಗ್ರಾಫ್ ಆಕ್ಟ್ ಪ್ರಕಾರ ಸೆಕ್ರೆಟರಿ ಲೆವೆಲ್‌ನ ಅಧಿಕಾರಿಯೂ ಸುಖಾಸುಮ್ಮನೆ ಯಾರದ್ದೋ ಫೋನ್ ಟ್ಯಾಪ್ ಮಾಡಲು ಆದೇಶಿಸುವಂತಿಲ್ಲ, ಬದಲಾಗಿ ದೇಶದ ಸಾರ್ವಭೌಮತ್ವಕ್ಕೆ, ಸುರಕ್ಷತೆಗೆ ಅಪಾಯ ಇದ್ದರೆ, ಬೇರೆ ದೇಶಗಳೊಂದಿಗಿನ ಸಂಬಂಧಕ್ಕೆ ಧಕ್ಕೆ ಎದುರಾಗಿದ್ದರೆ, ಸಾರ್ವಜನಿಕ ಶಾಂತಿಗೆ ಭಂಗ ತರುವ ಯತ್ನ ನಡೆಸುತ್ತಿದ್ದರೆ, ಕೋಮು ಗಲಭೆಗಳನ್ನು ಹತ್ತಿಕ್ಕಲು ಯೋಜನೆ ನಡೆಸುತ್ತಿದ್ದರೆ ಮಾತ್ರ ಅಂತಹವರ ಫೋನ್ ಟ್ಯಾಪ್ ಮಾಡಬಹುದು.

ಆದರೆ ಮಾನಸಿ ಅಂತಹ ಯಾವ ಕೃತ್ಯಗಳಲ್ಲೂ ತೊಡಗಿರದಿದ್ದಾಗ್ಯೂ ಆಕೆಯ ಮೇಲೆ ಗುಜರಾತಿನ ಹಿರಿಯ ಪೊಲೀಸರು ಕಟ್ಟೆಚ್ಚರ ಇಡುತ್ತಾರೆಂದರೆ, ಆಕೆಯ ಫೋನ್ ಸಂಭಾಷಣೆಗಳನ್ನು ಮತ್ತು ಎಸ್‌ಎಂಎಸ್‌ಗಳನ್ನು ಪ್ರತಿ ದಿನ ಮೋದಿಗೆ ರವಾನಿಸುತ್ತಾರೆಂದರೆ, ಆಕೆ ತನ್ನ ಬಾಯ್‌ಫ್ರೆಂಡ್ ಜೊತೆ ಹೋಟೆಲ್‌ಗೆ ಹೋದಾಗ ತಮ್ಮ ಬಳಿ ಪೆನ್ ಕ್ಯಾಮೆರಾದಲ್ಲಿ ಆ ಯುವಕನ ಫೋಟೊ ತೆಗೆದು ಮೋದಿಗೆ ತೋರಿಸುತ್ತಾರೆಂದರೆ...

ಪಾಪ ಮೋದಿ, ಅದೆಷ್ಟು 'ಮಾನಸಿಕ ನೋವನ್ನು ಅನುಭವಿಸುತ್ತಿದ್ದ ಭಗ್ನ ಪ್ರೇಮಿಯಾಗಿದ್ದ' ಎಂದು ಊಹಿಸಿಕೊಳ್ಳಬಹುದು.

ಆದರೆ ಮೋದಿ ಎಂಬ ಈ ಮಾನಸಿಕ ರೋಗಿ ಎಲ್ಲ ನಿಯಮಗಳನ್ನು ಉಲ್ಲಂಘಿಸಿದ್ದಕ್ಕೆ ಕಾನೂನಿನ ಪ್ರಕಾರ ಆತನಿಗೆ ಶಿಕ್ಷೆ ಆಗಬೇಕಲ್ಲವೇ?

ಮೋದಿಯ ಸುಳ್ಳುಗಳು ಮತ್ತು ವಾಸ್ತವಾಂಶಗಳು

ಕೆಲವು ವಾರಗಳ ಹಿಂದೆ ನರೇಂದ್ರ ಮೋದಿ ನರಹಂತಕ ಮಾತ್ರವಲ್ಲ ಆತ ನಾರಿಪೀಡಕ ಕೂಡ ಹೌದು ಎಂಬುದನ್ನು ಕುರಿತು ವಿವರವಾಗಿ ಬರೆದಿದ್ದೆವು. ಮಾನಸಿ ಸೋನಿ ಎಂಬ ಯುವತಿಯ ಹಿಂದೆ ತನ್ನ ದುಷ್ಟ ಪೊಲೀಸ್ ತಂಡವನ್ನು ಬೇಹುಗಾರಿಕೆಗೆ ಬಿಟ್ಟಿದ್ದ ಮೋದಿಯ ಅಕ್ರಮ ಕುರಿತು ಈ ವಾರವೂ ಪತ್ರಕರ್ತ ಆಶೀಶ್ ಖೇತಾನ್ ಅವರ ಗುಲೈಲ್ ವೆಬ್ ಪೋರ್ಟಲ್ 39 ಹೊಸ ಟೆಲಿಫೋನ್ ಸಂಭಾಷಣೆಗಳ ರೆಕಾರ್ಡಿಂಗ್‌ಗಳನ್ನು ಬಿಡುಗಡೆ ಮಾಡಿದೆ. ಈ ಹೊಸ ರೆಕಾರ್ಡಿಂಗ್‌ಗಳು ಪ್ರಧಾನ ಮಂತ್ರಿ ಪದವಿಯ ಆಕಾಂಕ್ಷಿ ಮೋದಿ ಮತ್ತು ಆತನ ಬಿಜೆಪಿ ಪಕ್ಷ ಎಂತಹ ಕಾನೂನುಬಾಹಿರ ಕೃತ್ಯಗಳಿಗೂ ಹೇಸುವುದಿಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿವೆ.

ಖೇತಾನ್ ಅವರು ತಮ್ಮ ವೆಬ್ ಪೋರ್ಟಲ್‌ನಲ್ಲಿ ಅಕ್ರಮ ಬೇಹುಗಾರಿಕೆ ಕುರಿತು ಮೋದಿ ಮತ್ತು ಬಿಜೆಪಿಯ ನಾಯಕರು ನೀಡಿರುವ 'ಸ್ಪಷ್ಟೀಕರಣಗಳು' ಸಂಪೂರ್ಣವಾಗಿ ಸುಳ್ಳು ಎಂದು ಸ್ಪಷ್ಟಪಡಿಸಿದ್ದಾರೆ. ಬಿಜೆಪಿಯ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ ಮತ್ತು ಮೋದಿ ಹೇಳಿರುವ ಸುಳ್ಳುಗಳನ್ನು ಮತ್ತು ರೆಕಾರ್ಡಿಂಗ್‌ಗಳು ತೆರೆದಿಟ್ಟಿರುವ ಸತ್ಯಗಳನ್ನು ಖೇತಾನ್ ಹೀಗೆ ಪಟ್ಟಿಮಾಡಿದ್ದಾರೆ:

ಸುಳ್ಳು ನಂಬರ್ 1: ಮಾನಸಿ ಸೋನಿ ಮೇಲೆ ಗುಜರಾತ್ ರಾಜ್ಯದ ಪೊಲೀಸರು ವ್ಯವಸ್ಥಿತವಾದ ಬೇಹುಹಾರಿಕೆ ನಡೆಸಿದ್ದರ ಹಿಂದಿನ ಉದ್ದೇಶ ಆಕೆಗೆ 'ಜಾಗರೂಕವಾದ ರಕ್ಷಣೆ' ನೀಡುವುದಾಗಿತ್ತು.

ಸತ್ಯ: ರೆಕಾರ್ಡಿಂಗ್‌ನಲ್ಲಿರುವ 'ಸಾಹೇಬ' ('ಸಾಹೇಬ' ಮೋದಿಯೇ ಎಂದು ಬಿಜೆಪಿ ಮತ್ತು ಮಾನಸಿಯ ತಂದೆ ಪ್ರಾಣ್‌ಲಾಲ್ ಈಗಾಗಲೇ ಒಪ್ಪಿಕೊಂಡಿರುವುದರಿಂದ ಅದೀಗ ಗುಟ್ಟಾಗಿ ಉಳಿದಿಲ್ಲ) ನಿಗೆ ಮಾನಸಿಯ ರಕ್ಷಣೆಗಿಂತ ಆಕೆಯ ಪ್ರೇಮ ವ್ಯವಹಾರದಲ್ಲಿ ಹೆಚ್ಚಿನ ಆಸಕ್ತಿ ಇತ್ತು, ಆ ಕಾರಣಕ್ಕೇ ಮೋದಿಯ ಪೊಲೀಸರು ಆಕೆ ಮದುವೆಯಾಗಲಿದ್ದ ಹುಡುಗನೊಂದಿಗಿನ ಆಕೆಯ ಭೇಟಿಗಳನ್ನು ಗುಪ್ತವಾಗಿ ವೀಕ್ಷಿಸಿದ್ದರಲ್ಲದೆ ಆ ಹುಡುಗನೊಂದಿಗಿನ ಮಾನಸಿಯ ಎಲ್ಲಾ ಖಾಸಗಿ ಫೋನ್ ಸಂಭಾಷಣೆಗಳನ್ನು ರೆಕಾರ್ಡ್ ಮಾಡಿ ಮೋದಿಗೆ ಅವುಗಳ ವಿವರಗಳನ್ನು ನೀಡುತ್ತಿದ್ದರು.

ಸುಳ್ಳು ನಂಬರ್ 2: ಈ ಅಕ್ರಮ ಬೇಹುಗಾರಿಕೆಯ ವಿಚಾರ ಗುಜರಾತ್ ರಾಜ್ಯಕ್ಕೆ ಸೀಮಿತವಾದದ್ದು.

ಸತ್ಯ: ಮಾನಸಿ ಮೇಲಿನ ಈ ಅಕ್ರಮ ಬೇಹುಗಾರಿಕೆ ಇತರೆ ರಾಜ್ಯಗಳಲ್ಲೂ ನಡೆಯಿತು. ಆಗ ಬೆಂಗಳೂರಿನ ನಿವಾಸಿ ಆಗಿದ್ದ ಮಾನಸಿಯ ಕರ್ನಾಟಕದಲ್ಲಿನ ಫೋನ್‌ಗಳನ್ನು ಕದ್ದಾಲಿಸುವುದನ್ನು ಕುರಿತಂತೆ ಆಗ ಕರ್ನಾಟಕದ ಮುಖ್ಯಮಂತ್ರಿ ಆಗಿದ್ದ ಯಡಿಯೂರಪ್ಪ ಮತ್ತು ಮೋದಿಯ ಸರ್ಕಾರದ ನಡುವೆ ಪತ್ರವ್ಯವಹಾರ ನಡೆದಿತ್ತು, ಮಾನಸಿಯ ಬೆಂಗಳೂರಿನ ಸೆಲ್ ಫೋನ್‌ಗಳನ್ನು ಅಕ್ರಮವಾಗಿ ಕದ್ದು ಆಲಿಸಲಾಗಿತ್ತು.

ಸುಳ್ಳು ನಂಬರ್ 3: ಈ ಅಕ್ರಮ ಬೇಹುಗಾರಿಕೆ ಕುರಿತು ತನಿಖೆ ನಡೆಸಲು ಮೋದಿಯ ಗುಜರಾತ್ ಸರ್ಕಾರ ನೇಮಿಸಿರುವ ದ್ವಿಸದಸ್ಯ ಸಮಿತಿಯು ಅರ್ಹವಾಗಿದೆ.

ಸತ್ಯ: ಈ ಅಕ್ರಮ ಬೇಹುಗಾರಿಕೆ ಬೇರೆ ರಾಜ್ಯಗಳಲ್ಲೂ ನಡೆದಿರುವುದರಿಂದ ಆ ಸಮಿತಿಗೆ ಗುಜರಾತ್ ಹೊರಗೆ ವಿಚಾರಣೆ ನಡೆಸಲು ಅಧಿಕಾರವಿಲ್ಲ, ಮಾತ್ರವಲ್ಲ ಆ ಸಮಿತಿಗೆ ಗುಜರಾತ್ ಸರ್ಕಾರ ಕೊಟ್ಟಿರುವ 'ಕಾರ್ಯಸೂಚನೆ'ಗಳು ದುರುದ್ದೇಶಗಳಿಂದ ಕೂಡಿದೆ. ಯಾಕೆಂದರೆ ಆ ಸಮಿತಿಗೆ ನೀಡಿರುವ ಕಾರ್ಯಸೂಚಿಗಳಲ್ಲಿ ಮುಖ್ಯವಾದದ್ದು 'ಈ ಬೇಹುಗಾರಿಕೆ ಕುರಿತ ಟೆಲಿಫೋನ್ ರೆಕಾರ್ಡಿಂಗ್‌ಗಳು ಹೇಗೆ ಸೋರಿಕೆ ಆದವು' ಮತ್ತು 'ಮಹಿಳೆ ಓರ್ವಳಿಗೆ ಗೌಪ್ಯವಾಗಿ ರಕ್ಷಣೆ ನೀಡಿದ್ದು ತಪ್ಪೆ?' ಎಂಬುದಾಗಿದೆ.

ಸುಳ್ಳು ನಂಬರ್ 4: ಟೆಲಿಫೋನ್ ಕದ್ದಾಲಿಕೆಯಲ್ಲಿ ಕಾನೂನುಗಳನ್ನು ಉಲ್ಲಂಘಿಸಿಲ್ಲ.

ಸತ್ಯ: ಟೆಲಿಫೋನ್ ಸಂಭಾಷಣೆಗಳನ್ನು ಕದ್ದಾಲಿಸಲು ಗುಜರಾತ್ ಸರ್ಕಾರದ ಗೃಹ ಇಲಾಖೆಯ ಕಿರಿಯ ಅಧಿಕಾರಿಗಳು ಆದೇಶಗಳನ್ನು ಕೊಡುತ್ತಿದ್ದರು. ಒಮ್ಮೆ ಇದು ಇಂಡಿಯನ್ ಟೆಲಿಗ್ರಾಫ್ ಆಕ್ಟ್ ನಿಯಮಗಳ ಉಲ್ಲಂಘನೆ ಎಂಬ ಏಕೈಕ ಕಾರಣಕ್ಕೇ ಕರ್ನಾಟಕ ಸರ್ಕಾರ ಅದನ್ನು ತಿರಸ್ಕರಿಸಿತ್ತು.

ಸುಳ್ಳು ನಂಬರ್ 5: ತನ್ನ ಮೇಲೆ ಪೊಲೀಸರು ಕಣ್ಗಾವಲು ಇಟ್ಟಿರುವ ಬಗ್ಗೆ ಮಾನಸಿಗೆ ಗೊತ್ತಿತ್ತು.


ಸತ್ಯ: ಹಿರಿಯ ಪೊಲೀಸ್ ಅಧಿಕಾರಿಗಳು ತನ್ನನ್ನು ಎಲ್ಲೆಲ್ಲೂ ಹಿಂಬಾಲಿಸುತ್ತಿರುವ ಬಗ್ಗೆ, ತನ್ನ ಖಾಸಗಿ ಫೋನ್ ಸಂಭಾಷಣೆಗಳನ್ನು ರೆಕಾರ್ಡ್ ಮಾಡಿಕೊಳ್ಳುತ್ತಿರುವ ಬಗ್ಗೆ, ತನ್ನ ಭಾವಿ ಗಂಡನನ್ನು ಭೇಟಿ ಆದಾಗಲೆಲ್ಲ ಅದರ ಬಗ್ಗೆ ಮೋದಿಗೆ ಮಾಹಿತಿ ನೀಡುತ್ತಿದ್ದದ್ದರ ಬಗ್ಗೆ ಮಾನಸಿಗೆ ಕಿಂಚಿತ್ತೂ ಸುಳಿವು ಇರಲಿಲ್ಲ.

ಸುಳ್ಳು ನಂಬರ್ 6: ಮಾನಸಿಗೆ ಜೀವ ಬೆದರಿಕೆ ಇತ್ತು.

ಸತ್ಯ: ಮಾನಸಿಗೆ ಯಾವ ಜೀವ ಬೆದರಿಕೆಯೂ ಇರಲಿಲ್ಲ, ಆಕೆ ತನ್ನ ಭಾವಿ ಪತಿಯೊಡನೆ ಎಲ್ಲೆಡೆ ಸುತ್ತಾಡುತ್ತಿದ್ದಳು ಮಾತ್ರವಲ್ಲ ಮಧ್ಯರಾತ್ರಿಯಲ್ಲೂ ಯಾವುದೇ ಭಯವಿಲ್ಲದೆ ಏಕಾಂಗಿಯಾಗಿ ತನ್ನ ಕಾರ್‌ಅನ್ನು ಚಲಾಯಿಸುತ್ತಾ ತಾನು ಹೋಗಬೇಕಿದ್ದ ಜಾಗವನ್ನು ತಲುಪುತ್ತಿದ್ದಳು.

ಸುಳ್ಳು ನಂಬರ್ 7: ಗುಜರಾತ್ ಪೊಲೀಸರು ಮಾನಸಿಗೆ ರಕ್ಷಣೆಯನ್ನು ನೀಡುತ್ತಿದ್ದರು.

ಸತ್ಯ: ಮಾನಸಿ ಮತ್ತು ಪೊಲೀಸರ ನಡುವೆ ಯಾವ ಸಂಪರ್ಕವೂ ಇರಲಿಲ್ಲ. [illegible] ಪೊಲೀಸರು ಏರೋಪ್ಲೇನ್‌ಗಳ ಪ್ರಯಾಣಿಕರ ಪಟ್ಟಿಗಳನ್ನು ಪಡೆದು [illegible] ಅಹಮದಾಬಾದಿಗೆ ಬರುತ್ತಿದ್ದಾಳೆ. [illegible]ಗ ಬೆಂಗಳೂರಿಗೆ [illegible] ಎಂಬ ಮಾಹಿತಿಯನ್ನು ಸಂಗ್ರಹಿಸಿ ಆಕೆಯನ್ನು [illegible] ಹಿಂಬಾಲಿಸುತ್ತಿದ್ದರು.



ವಿರಾಸತ್, ಮಂಪರು ಮತ್ತು ಆತ್ಮಾವಲೋಕನ

ಇಂದಿನ (25.12.2013) ಪ್ರಜಾವಾಣಿಯಲ್ಲಿ ಬರಗೂರು ರಾಮಚಂದ್ರಪ್ಪನವರು ಆಳ್ವಾಸ್ ನುಡಿಸಿರಿಯಲ್ಲಿ ಭಾಗವಹಿಸಿದ್ದರ ಕುರಿತು ಪತ್ರವೊಂದನ್ನು ಬರೆದಿದ್ದಾರೆ. ಕನ್ನಡದ ಪ್ರಮುಖ, ಪ್ರಸಿದ್ಧ ಹಿರಿಯ ಲೇಖಕರೊಬ್ಬರು 'ತಾನು ತಪ್ಪು ಮಾಡಿರಬಹುದು, ಅದಕ್ಕಾಗಿ ಆತ್ಮಾವಲೋಕನ ಮಾಡಿಕೊಳ್ಳಲು ಸಿದ್ಧ' ಎಂಬ ದನಿಯಲ್ಲಿ ಬಹಿರಂಗ ಪತ್ರ ಬರೆದ ಬೇರೆ ಉದಾಹರಣೆ ಇದೆಯೋ ಇಲ್ಲವೋ ಗೊತ್ತಿಲ್ಲ. ಈ ರೀತಿಯ ಧೈರ್ಯವನ್ನು ತೋರಿದ್ದಕ್ಕಾಗಿ ಬರಗೂರರು ಅಭಿನಂದನಾರ್ಹರು. ಇದು ಸಣ್ಣ ಸಂಗತಿಯಲ್ಲ. ಖಾಸಗಿಯಾಗಿ ಮಾತಾಡುತ್ತಾ ಕ್ಷಮೆಯನ್ನೂ ಕೇಳಿಬಿಡಬಹುದು. ಆದರೆ ಬಹಿರಂಗವಾಗಿ ಪತ್ರ ಬರೆದು ಇಂತಹ ಮಾತುಗಳನ್ನು ಆಡುವುದು ಕಷ್ಟ.

ನುಡಿಸಿರಿ ಮತ್ತು ಅದಕ್ಕೆ ಪರ್ಯಾಯವಾಗಿ ನಡೆದ ಜನನುಡಿ ಕಾರ್ಯಕ್ರಮಗಳು ಕನ್ನಡದಲ್ಲಿ ಮತ್ತೊಮ್ಮೆ ಆಸ್ಥಾನ ಸಾಹಿತ್ಯ ಮತ್ತು ಜನಸಾಹಿತ್ಯದ ಕುರಿತ ಚರ್ಚೆಯನ್ನು ಹುಟ್ಟು ಹಾಕಿವೆ. ಸಾಂಸ್ಕೃತಿಕ ರಂಗಿನಲ್ಲಿ ನಡೆದ ನುಡಿಸಿರಿಯಲ್ಲಿ ಭಾಗವಹಿಸುವುದಿರಲಿ, ನೇರಾನೇರ ರಾಜಕೀಯದ ರಂಗಸ್ಥಳದಲ್ಲಿ ಬಿಜೆಪಿಯೊಂದಿಗೇ ಗುರುತಿಸಿಕೊಂಡವರೂ ಕರುನಾಡಿನಲ್ಲಿದ್ದಾರೆ. ಆಗೆಲ್ಲಾ ಈ ರೀತಿಯ ಚರ್ಚೆ, ಕಟಕಟೆಗೆ ತಂದು ನಿಲ್ಲಿಸುವ ವಾಗ್ವಾದವೇನೂ ನಡೆದಿರಲಿಲ್ಲ. ಈ ಬಾರಿ ಅದು ನಡೆಯಲು ಕಾರಣವಾಗಿದ್ದರಲ್ಲಿ, ಪರ್ಯಾಯ ಕಾರ್ಯಕ್ರಮದ ಆಯೋಜನೆ ಮಾಡಿದವರ ಪಾಲು ಹೆಚ್ಚಿನದು. ಅದೇ ಕೆಲವರನ್ನು ನುಡಿಸಿರಿಯಲ್ಲಿ ಭಾಗವಹಿಸದೇ ಇರುವಂತೆ, ಕೆಲವರು ಮುಂಚೆ ಒಪ್ಪಿಕೊಂಡಿದ್ದರೂ ನಂತರ ಹಿಂತೆಗೆಯುವಂತೆ, ಹೋದರೂ ಅರ್ಧಕ್ಕೆ ವಾಪಸ್ಸು ಬರುವಂತೆ ಮಾಡಿದೆ. ಅದಕ್ಕಾಗಿ 'ಜನನುಡಿ'ಗೆ ನಮ್ಮ ಅಭಿನಂದನೆಗಳು ಸಲ್ಲಬೇಕು. ಸಕಾಲಿಕವಾದ ಮಧ್ಯಪ್ರವೇಶ, ಪರ್ಯಾಯವನ್ನು ಸಂಘಟಿಸುವುದರಲ್ಲಿನ ಉತ್ಸಾಹ, ಧೈರ್ಯ ಮತ್ತು ಜನಪರ ನಿಲುವು ಜನನುಡಿಯ ವಿಶೇಷಗಳಾಗಿದ್ದವು.

ಆದರೆ ಉತ್ಸಾಹದ ಭರದಲ್ಲಿ ಉದುರಿರುವ ಬಿಡುಬೀಸಾದ ಹೇಳಿಕೆಗಳ ಕಾರಣಕ್ಕೆ ಈ ಚರ್ಚೆಯ ತಾತ್ವಿಕ ಭಿತ್ತಿ ಏನಾಗಿರಬೇಕೆಂಬ ಪ್ರಶ್ನೆ ಏಳುತ್ತದೆ. ಜೀವನದುದ್ದಕ್ಕೂ ಜನಪರ ಮೌಲ್ಯಗಳಿಗಾಗಿ ಬದ್ಧರಾಗಿರುವ ಹಲವರು ಕವಿದ ಮಂಪರಿನ ಕಾರಣಕ್ಕೆ, ಒಮ್ಮೆ ಪಲ್ಲಕ್ಕಿ ಹತ್ತಿದ್ದಕ್ಕೆ, ಜೊತೆಗೂಡಬಾರದವರ ಜೊತೆ ವೇದಿಕೆ ಹಂಚಿಕೊಂಡಿದ್ದಕ್ಕೆ, ಶಾಲು ಹೊದೆಸಿಕೊಂಡಿದ್ದಕ್ಕೆ, ಊಟ ಮಾಡಿದ್ದಕ್ಕೆ ಬಹಿಷ್ಕಾರಕ್ಕಿಂತ ಕಡಿಮೆ ಶಿಕ್ಷೆಯನ್ನು ಅನುಭವಿಸತಕ್ಕದ್ದಲ್ಲ ಎಂಬುದು ಇನ್ನೊಂದು ರೀತಿಯ ಫ್ಯಾಸಿಸಮ್ಮಿಗೇ ದಾರಿ ಮಾಡಿಕೊಡುತ್ತದೆ. ಯಾವುದೇ ವ್ಯಕ್ತಿಯನ್ನು ಅವರ ಒಟ್ಟಾರೆ ನಿಲುವು ಮತ್ತು ಆ ಹೊತ್ತಿನ ಸಂದರ್ಭದ ಜೊತೆಗೆ ಅಳೆಯಬೇಕು. ಹಾಗಿಲ್ಲದೇ ಮಾಡುವ ಸಗಟು ತೀರ್ಮಾನಗಳು ಜೀವವಿರೋಧಿ ಕಾಠಿಣ್ಯವನ್ನು ನಮ್ಮೊಳಗೆ ಇಳಿಬಿಡುವ ಎಲ್ಲಾ ಸಾಧ್ಯತೆಗಳಿವೆ.


ಜನನುಡಿಯಲ್ಲಿ ಭಾಗವಹಿಸಿದವರೆಲ್ಲರೂ ಆಸ್ಥಾನ ರಾಜಕಾರಣದ ಮಂಪರುಗಳಿಂದ ಸಂಪೂರ್ಣ ಹೊರ ಬಂದವರು ಎಂತಲೂ ಹೇಳಲಾಗುವುದಿಲ್ಲ. ಆದ್ದರಿಂದ ಒಂದೋ ಈ ಕಡೆ ಅಥವಾ ಆ ಕಡೆ ಎಂದು ಘೋಷಿಸಿ ಸರಳ ತೀರ್ಮಾನಗಳಿಗೆ ಬರುವುದು ಸಾಧ್ಯವೇ ಇಲ್ಲದ ಸ್ಥಿತಿಯಲ್ಲಿ ನಾವಿದ್ದೇವೆ. ಸದ್ಯಕ್ಕಂತೂ ಎರಡೂ ಕಡೆ ಇರುವವರ ಜೊತೆ ಸಂವಾದ, ವಾಗ್ವಾದ ನಡೆಸುವ ಜರೂರತ್ತಂತೂ ಇದೆ.

ನುಡಿಸಿರಿಯಲ್ಲಿ ಈ ಸಾರಿ ಭಾಗವಹಿಸಿದವರು ಮಾತ್ರವಲ್ಲದೇ, ಇಷ್ಟು ವರ್ಷಗಳಲ್ಲಿ ಆಗಾಗ್ಗೆ ಹಾಜರಿ ಹಾಕಿ ಬಂದವರೆಲ್ಲರೂ ಒಂದು ಪ್ರಶ್ನೆಯನ್ನು ಹಾಕಿಕೊಳ್ಳುವ ಅಗತ್ಯವಿದೆ. ಪಲ್ಲಕ್ಕಿ ಹೊರುವ, ಸಾಗುತ್ತಿರುವ ಪಲ್ಲಕ್ಕಿಯನ್ನು ನೋಡಿ ಧನ್ಯತಾಭಾವ ಅನುಭವಿಸಿ ನಮಸ್ಕರಿಸುವ ಸಾಮಾನ್ಯ ಜನರ ಕುರಿತು ಕೇಳುವ ಪ್ರಶ್ನೆಯಲ್ಲ ಇದು. ಸುತ್ತಲೂ ಮಬ್ಬು ಕವಿದಿರುವಾಗ, ಮಂಜಿನ ಪರದೆಯನ್ನು ಸರಿಸಿ ನಿಜದ ಬೆಳಕಿನ ದರ್ಶನ ಮಾಡಿಸುವ ಹೊಣೆಗಾರಿಕೆ ಇರುವ ಬರಹಗಾರರನ್ನು ಕೇಳುವ ಪ್ರಶ್ನೆ. ಪಲ್ಲಕ್ಕಿ ಹತ್ತುವ ಮುಂಚೆ ಸಂಭ್ರಮಪಟ್ಟು, ಇಳಿದ ಮೇಲೆ 'ಛೇ, ನಾನು ಮಾಡಿದ್ದು ತಪ್ಪಾಯಿತೇನೋ?'ಎಂಬ ಹಳಹಳವನ್ನು ವ್ಯಕ್ತಪಡಿಸುವವರಿಗೆ 'ಪಲ್ಲಕ್ಕಿ ಹತ್ತುವ ಮುಂಚೆ ಇದು ಯಾಕೆ ಹೊಳೆಯಲಿಲ್ಲ' ಎಂದು ಕೇಳಬೇಕಾಗುವುದು ಇದೇ ಹೊಣೆಗಾರಿಕೆಯ ಕಾರಣಕ್ಕೆ.

ಆಸ್ಥಾನಗಳು ಕವಿಸುವ ಮಂಪರಿಗೆ ಬಹಳ ಶಕ್ತಿಯಿರುತ್ತದೆ. ಅದು ಸಂದರ್ಭವೊಂದರಲ್ಲಿ ತೆಗೆದುಕೊಳ್ಳಬೇಕಾದ ತೀರ್ಮಾನಗಳ ಔಚಿತ್ಯವನ್ನು ಮೊದಲು ಮಬ್ಬಾಗಿಸುತ್ತದೆ.

ಇನ್ನೊಂದರ ತೆಕ್ಕೆಗೆ ಹಲವು ಬರಹಗಾರರು ಜಾರಿದ್ದಕ್ಕೆ ಇರುವ ಉದಾಹರಣೆಗಳ ಸಂಖ್ಯೆ ಬಹಳ ಕಡಿಮೆಯೇನಿಲ್ಲ. ಅಂತಿಮವಾಗಿ ಎನ್‌ಡಿಎ ಜೊತೆಗೆ ಸೇರಿಕೊಂಡ ಮಾಜಿ ಸೋಷಿಯಲಿಸ್ಟ್ ರಾಜಕಾರಣಿಗಳ 'ವ್ಯಕ್ತಿಗತ ಒಳನೋಟ'ಗಳ ಬಗ್ಗೆ ನಮ್ಮ ಹಿರಿಯ ಸಾಹಿತಿಗಳಿಗೆ ಭ್ರಮೆಯಿರಲಿಲ್ಲವೇ? ಯಾವುದೇ ರಾಜಕಾರಣಿ ವ್ಯಕ್ತಿಯಾಗಿ ಏನೇ ಒಳದನಿ ಇಟ್ಟುಕೊಂಡಿದ್ದರೂ, ಆತ ಅಥವಾ ಆಕೆ ಪಾಲುದಾರರಾಗಿರುವ ವ್ಯವಸ್ಥೆಗಿಂತ ದೊಡ್ಡದಾಗಿಬಿಡಲು ಸಾಧ್ಯವೇ? ಈ ಮಾತು ಜಾರ್ಜ್ ಫರ್ನಾಂಡಿಸರಿಂದ ಹಿಡಿದು ಸಿದ್ದರಾಮಯ್ಯನವರತನಕ ಅನ್ವಯಿಸುತ್ತದೆ.

ಸದ್ಯದ ಸ್ಥಿತಿಯಲ್ಲಿ ಬಿಜೆಪಿ ಯಾವುದೇ ಕಾರಣಕ್ಕೂ ಬೇಡವಾದ್ದರಿಂದ ಕಾಂಗ್ರೆಸ್ ಒಂದು ಅನಿವಾರ್ಯ ಆಯ್ಕೆಯಾಗಿದೆ ಎನ್ನುವುದರ ಹೊರತಾಗಿ, ಕಾಂಗ್ರೆಸ್‌ಅನ್ನು ಅಪ್ಪಿಕೊಳ್ಳಲು ಇನ್ನಾವ ಕಾರಣಗಳು ನಮಗಿರಲು ಸಾಧ್ಯ? ಆದರೆ ಅವರಿಗಿಂತ ಇವರು ಎನ್ನುವ ಆಯ್ಕೆಯು ನಮ್ಮ ಹಿರಿಯ ಸಾಹಿತಿಗಳನ್ನು ಜನಾರ್ದನ ರೆಡ್ಡಿಗಿಂತ ಯಡಿಯೂರಪ್ಪ ಪರವಾಗಿಲ್ಲ ಎನ್ನುವ ತನಕ ಎಳೆದುಕೊಂಡು ಹೋಗಿ ನಿಲ್ಲಿಸಿದ್ದನ್ನು ಮರೆಯಲಾದೀತೇ? ಸ್ವಯಂಸೇವಕ ವಾಜಪೇಯಿಯ ಕುರಿತಾಗಿಯೂ ಇಂತಹ ಮಂಪರು ಕವಿದಿದ್ದನ್ನು ನಾವು ನೋಡಿದ್ದೇವೆ. ಈ ಎಲ್ಲಾ ಮಂಪರನ್ನು ತೊಡೆದುಹಾಕಿ ಖಚಿತತೆಗೆ ಬರಬೇಕಾದ್ದು 'ಪೊಲಿಟಿಕಲಿ ಕರೆಕ್ಟ್' ಆಗಿರಬೇಕಾದ ಆಕ್ಟಿವಿಸ್ಟ್‌ಗಳ ಗೀಳು ಮಾತ್ರ; ಸಾಹಿತಿಗಳು ಕಪ್ಪು ಬಿಳುಪಿನ ತೀರ್ಮಾನ ತೆಗೆದುಕೊಳ್ಳಬಾರದು ಎಂಬ ವಿಚಾರವೂ ಬಹಳ



ಈ ಖಚಿತತೆ ನುಡಿಸಿರಿಯ ವಿಚಾರಕ್ಕೆ ಮಾತ್ರ ಅನ್ವಯವಾಗುವಂಥದ್ದಲ್ಲ. ಆ ರೀತಿ ಸೆಲೆಕ್ಟಿವ್ ಆಗಿರುವುದು ನಿರ್ದಿಷ್ಟ ವ್ಯಕ್ತಿಗಳನ್ನು ಗುರಿಯಾಗಿಸುವುದಕ್ಕೆ ಸೀಮಿತಗೊಂಡು ಬಿಡಬಹುದು. ಆಸ್ಥಾನ ಸಾಹಿತ್ಯ ಮತ್ತು ಆಸ್ಥಾನ ರಾಜಕಾರಣದ ಜೊತೆಗಿನ ಅನುಸಂಧಾನದ ಒಟ್ಟು ತಾತ್ವಿಕ ಚೌಕಟ್ಟನ್ನೇ ಚರ್ಚೆಗೆ ಕೈಗೆತ್ತಿಕೊಳ್ಳಬೇಕಿದೆ. ಜನಪರ ಸಾಹಿತಿಗಳು ಮತ್ತು ಆಸ್ಥಾನ ರಾಜಕಾರಣಗಳ ನಡುವಿನ ವಿವಿಧ ರೀತಿಯ ಕೂಡಾವಳಿಗಳಿಗೆ ಕನ್ನಡ ಸಾಹಿತ್ಯ ಕ್ಷೇತ್ರ ಹೊರತಾಗಿಲ್ಲ.

ಆದ್ದರಿಂದಲೇ ಈ ರೀತಿಯ ಮಂಪರು ನಮ್ಮ ಪ್ರಜ್ಞಾವಂತರನ್ನು ಕವಿದಿರುವುದು ಇದು ಮೊದಲಲ್ಲ ಹಾಗೂ ಮಂಪರು ಕೇವಲ ಆಳ್ವಾಸ್ ಒಡ್ಡೋಲಗದ್ದು ಮಾತ್ರವೂ ಅಲ್ಲ. ಒಂದು ಜನವಿರೋಧಿ ಪಕ್ಷವನ್ನು ವಿರೋಧಿಸುವ ಭರದಲ್ಲಿ, ಅದೇ ರೀತಿಯ ರಾಜಕಾರಣವನ್ನು ಮಾಡುವ

ಹಳಿಯದೇ. ಈ ವಿವೇಕವೇ ಜೀವಪರ ಕಥೆಗಳನ್ನು ಬರೆದವರೊಬ್ಬರನ್ನು ಪಲ್ಲಕ್ಕಿ ಹತ್ತುವವರೆಗೂ ಕರೆದುಕೊಂಡು ಹೋಯಿತು.

ಯಾವ ವೇದಿಕೆಗೂ ಹೋದರೂ 'ನಮ್ಮ ಮಾತನ್ನು ಆಡಿ ಬರುವ' ಆಮಿಷಕ್ಕೆ ಒಳಗಾಗಿ, ಭಾರೀ ದೊಡ್ಡ ಜನಸಮೂಹ(ಜನಸಂದಣಿ)ವನ್ನು ಉದ್ದೇಶಿಸಿ ಮಾತನಾಡುವ ಅವಕಾಶದ ಆಕರ್ಷಣೆಗೆ ಸಿಲುಕಿ ನಾವು ಪಡೆದುಕೊಂಡಿದ್ದೆಷ್ಟು? ಯಾರು ಯಾರಿಗೆ ಬಳಕೆಯಾದರು ಎಂಬುದರ ತೀರ್ಮಾನಕ್ಕೆ ಬೇಕಾದ ಸಾವಿರಾರು ಲಿಟ್ಮಸ್ ಟೆಸ್ಟ್‌ಗಳು ಈಗಾಗಲೇ ನಡೆದುಹೋಗಿವೆ. ಇದು ಇಂದು ಬಹುಮುಖ್ಯವಾಗುವುದು ಇನ್ನೂ ಒಂದು ಕಾರಣಕ್ಕೆ. ಜಾಗತೀಕರಣವು ತಂದಿರುವ ನವ ಉದಾರವಾದೀ ಆರ್ಥಿಕತೆಯು ಕವಿಸುತ್ತಿರುವ ಮಂಪರಿನ ಸ್ವರೂಪ ಇನ್ನೂ ಅಷ್ಟು ಸ್ಪಷ್ಟವಾಗಿಲ್ಲ.

ವಿರಾಸತ್ ಒಡ್ಡೋಲಗ…


ಫ್ಯೂಡಲ್ ಸಂಸ್ಥಾನಾಧೀಶರ ಒಡ್ಡೋಲಗದ ಕುರಿತು, ಜಾ… ವಾಸನೆ ಬಡಿಯುವ ಉತ್ಸವಗಳ ಕುರಿತು ನಮಗೆ ದಕ್ಕಿರು… ಔಚಿತ್ಯ ಈ ಹೊಸ ಆರ್ಥಿಕತೆಯ ಸಂಸ್ಕೃತಿಯ ಬ… ಇನ್ನೂ ದಕ್ಕಿಲ್ಲ. ಕಾರ್ಪೋರೇಟ್ ಉದ್ದಿಮೆದಾರರ ಥಳಾ… ವೈಭವ ತಪ್ಪಿಸಬಹುದಾದರೂ, ಕಾರ್ಪೋರೇಟ್ ಸಾಮಾಜಿ… ಹೊಣೆಗಾರಿಕೆ(ಸಿಎಸ್‌ಆರ್)ಯ ಹೆಸರಿನಲ್ಲಿ ವ್ಯಾಪಿಸುತ್ತಿರು… ಧರ್ಮಾರ್ಥಸೇವೆ ಹಾಗೂ ಸಾಂಸ್ಕೃತಿಕ ರಾಜಕಾರಣ… ಸ್ವರೂಪವು ಕವಿಸುವ ಮಂಕಿನಿಂದ ಅಷ್ಟು ಸುಲಭ… ಬಿಡಿಸಿಕೊಳ್ಳಲಾಗುವುದಿಲ್ಲ.

ಸರ್ಕಾರೀ ವಿಶ್ವವಿದ್ಯಾಲಯಗಳ ಪೀಠಗಳನ್ನೂ, ಇಡಿ… ವಿಶ್ವವಿದ್ಯಾಲಯಗಳ ಮಾಲೀಕತ್ವವನ್ನೂ ನಿರ್ವಹಿಸುವ ಈ… ಮಾದರಿಯ ಉದ್ದಿಮೆಯು ವಿರಾಸತ್‌ನ ಆಳ್ವರಲ್ಲಿ ಇನ್ನೂ… ಸಣ್ಣ ಪ್ರಮಾಣದಲ್ಲಷ್ಟೇ ಹೊಂಚು ಹಾಕಿದೆ. ನೂರಾರು… ಆಳ್ವರನ್ನು ಸಹಭಾಗಿಗಳನ್ನಾಗಿ ಮಾಡಿಕೊಳ್ಳುವ ಶಕ್ತಿಯಿರು… ಕಂಪೆನಿಗಳು ಶಿಕ್ಷಣ ಕ್ಷೇತ್ರಕ್ಕೆ ದಾಂಗುಡಿಯಿಡುತ್ತಿವೆ. ಮೇಷ್ಟರು… ಗಳು ಮುಂದಕ್ಕೂ ನಮ್ಮ ಸಾಂಸ್ಕೃತಿಕ ಕ್ಷೇತ್ರದ ಮುಖ… ವ್ಯಕ್ತಿಗಳಾಗಿರುವ ಸಾಧ್ಯತೆ ಇದೆಯಾದ್ದರಿಂದ, ಮಾಲೀಕರ… ಕೃಪಾಶ್ರಯದಲ್ಲಿ ನಡೆಯಬಹುದಾದ ಅನುಸಂಧಾನಗಳ… ಸ್ವರೂಪದ ಬಗ್ಗೆ ನಾವು ಎಚ್ಚರಿಕೆಯಿಂದಿರುವ ಅಗತ್ಯವಿದೆ.

ವ್ಯಕ್ತಿಗಳನ್ನು ಗುರಿಯಾಗಿಸಿಕೊಳ್ಳದೇ, ಸಂದರ್ಭವು ನಮ್ಮ… ಮುಂದಿಡುತ್ತಿರುವ ಈ ಸವಾಲನ್ನು ಕುರಿತ ಚರ್ಚೆಯನ್ನು… ನಿರ್ವಹಿಸಬೇಕಾದ್ದು ನಮ್ಮ ಕರ್ತವ್ಯವಾಗಿದೆ. ಅದಕ್ಕೆ… ಮತ್ತೊಮ್ಮೆ ಕಾರಣವಾದ ಜನನುಡಿಗೆ ಇನ್ನೊಮ್ಮೆ… ಅಭಿನಂದನೆ.

ನಕಲಿ ಎನ್ಕೌಂಟರ್‌ನ ಅಸಲಿ ದಾಖಲೆ


ಬಹಳ ಕಾಲದಿಂದಲೂ ಮೋದಿ ಪರವಾಗಿ ಪ್ರಚಾರದಲ್ಲಿ ತೊಡಗಿರುವ ಅಂತರ್ಜಾಲ ತಾಣಗಳಲ್ಲಿ **narendramodi.in** ಕೂಡಾ ಒಂದು. ಆದರೆ ಇದು ರಿಲಾಯನ್ಸ್ ಕಂಪೆನಿಯ ಅಹಮದಾಬಾದ್ ಕಚೇರಿಯಲ್ಲಿ ಜನರಲ್ ಮ್ಯಾನೇಜರ್ ಆಗಿರುವ ಪರಾಗ್ ಶಾ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿದೆ ಎಂಬ ಆಘಾತಕಾರಿ ಅಂಶ ಇತ್ತೀಚೆಗಷ್ಟೆ ತಿಳಿದುಬಂದಿದೆ.



Parag Shah
General Manager at Reliance Industries
Ahmedabad, Gujarat, India (Ahmedabad Area, India) · Oil & Energy

Officer On Special Duty (IT), Chief Minister's Office
Government of Gujarat
January 2003 – January 2008 (5 years 1 month) Gandhinagar
Other than IT am looking after the information department of GoG, and in-charge of 32 government websites which are listed under the http://oswan.gov.in. Also publishing material, home department cyber cell of ATS (Anti-Terrorist Squad of Gujarat) and lot more other work given on timely basis.

ಈ ಸಂಕ್ಷಿಪ್ತ ವ್ಯಕ್ತಿಚಿತ್ರಣವೆ ಹೇಳುವಂತೆ ಪರಾಗ್ ಶಾ 2003ರಿಂದ 2008ರ ತನಕ ಗುಜರಾತ್ ಮುಖ್ಯಮಂತ್ರಿ ಕಚೇರಿಯ ಐಟಿ ವಿಭಾಗದಲ್ಲಿ ವಿಶೇಷ ಕರ್ತವ್ಯ ಅಧಿಕಾರಿ ಆಗಿದ್ದ. ಈತ ಮಾಹಿತಿ ಇಲಾಖೆಯ ಮೇಲ್ವಿಚಾರಣೆ, 32 ಸರ್ಕಾರಿ ಜಾಲತಾಣಗಳ ಉಸ್ತುವಾರಿ ಮತ್ತು ಗೃಹ ಇಲಾಖೆಯ ಪ್ರಕಟಣೆಗಳ ಕೆಲಸ ನೋಡಿಕೊಳ್ಳುತ್ತಿದ್ದ. ಭಯೋತ್ಪಾದನಾ ನಿಗ್ರಹ ದಳದ (ಎಟಿಎಸ್) ಸೈಬರ್ ವಿಭಾಗದ ಜೊತೆಗೂ ಈತನಿಗೆ ಸಂಪರ್ಕವಿತ್ತು. ಇವುಗಳಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನು ನೇರವಾಗಿ ಮುಖ್ಯಮಂತ್ರಿಯ ಗಮನಕ್ಕೆ ತರುವುದು




ಆತನ ಕರ್ತವ್ಯವಾಗಿತ್ತು. ಈಗಷ್ಟೆ ಬೆಳಕಿಗೆ ಬಂದಿರುವ ಸಂಗತಿ ಏನೆಂದರೆ ಈತ ಮೋದಿಯ ನಿಕಟ ಪೊಲೀಸ್ ಅಧಿಕಾರಿಗಳಲ್ಲೊಬ್ಬನಾದ ರಾಜ್‌ಕುಮಾರ್ ಪಾಂಡ್ಯನ್ ಜೊತೆಗೂ ನಿರಂತರ ಸಂಪರ್ಕದಲ್ಲಿದ್ದ. ತುಳಸೀರಾಂ ಪ್ರಜಾಪತಿ ಎನ್ಕೌಂಟರ್ (ಡಿಸೆಂಬರ್ 28) ಪ್ರಕರಣದಲ್ಲಿ ಓರ್ವ ಆರೋಪಿಯಾಗಿರುವ ಪಾಂಡ್ಯನ್ ಆಗ ಎಟಿಎಸ್‌ನಲ್ಲಿ ವಿಶೇಷಾಧಿಕಾರಿ ಆಗಿದ್ದ.

ತುಳಸೀರಾಂ ಎನ್ಕೌಂಟರ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಿಬಿಐ ಈಗಾಗಲೆ ಹೆಚ್ಚುವರಿ ಆರೋಪಪಟ್ಟಿಯನ್ನು ಸಲ್ಲಿಸಿದೆ. ಅದರ ಜೊತೆಗೆ ಸಲ್ಲಿಸಲಾಗಿರುವ ಪುರಾವೆಗಳಲ್ಲಿ ರಾಜ್‌ಕುಮಾರ್ ಪಾಂಡ್ಯನ್ ಮತ್ತು ಅಮಿತ್ ಶಾ ನಡುವಿನ ಸಂಭಾಷಣೆಗಳ ದಾಖಲೆಗಳೂ ಸೇರಿವೆ. ತುಳಸೀರಾಂ ಪ್ರಜಾಪತಿ ಮತ್ತು ಇನ್ನೊಬ್ಬ ಆರೋಪಿ ಮೊಹಮ್ಮದ್ ಅಜಾಂನನ್ನು ಉದಯಪುರ ಜೈಲಿನಿಂದ ಅಹಮದಾಬಾದ್‌ಗೆ ಕರೆತರುತ್ತಿದ್ದ ಸಂದರ್ಭದಲ್ಲಿ ಅಮಿತ್ ಶಾ, ವಂಜಾರ, ಅಮೀನ್ ಮತ್ತು ಪಾಂಡ್ಯನ್ ಫೋನ್ ಸಂಪರ್ಕದಲ್ಲಿದ್ದರು ಎನ್ನುತ್ತವೆ ಈ ದಾಖಲೆಗಳು. ಇದೀಗ ಇದೇ ದಾಖಲೆಗಳಲ್ಲಿ ಪಾಂಡ್ಯನ್ ಮತ್ತು ಪರಾಗ್ ಶಾ ನಡುವಿನ ಮಾತುಕತೆಗಳು ಕೂಡಾ ಪತ್ತೆಯಾಗಿವೆ. ತುಳಸೀರಾಂ ಎನ್ಕೌಂಟರ್‌ಅನ್ನು ಯೋಜಿಸಿ ಕಾರ್ಯರೂಪಕ್ಕೆ ತಂದಾತ ಪಾಂಡ್ಯನ್. ಆ ಕಾಲದಲ್ಲಿ ಪಾಂಡ್ಯನ್ ಮತ್ತು ಪರಾಗ್ ಶಾ ನಡುವೆ ಹಾಗೂ ಪರಾಗ್ ಶಾ ಮತ್ತು ಮೋದಿ ನಡುವೆ ಸಾಕಷ್ಟು ಸಂಭಾಷಣೆಗಳು ನಡೆದಿವೆ. ಇದರರ್ಥ ಮೋದಿಗೆ ತುಳಸೀರಾಂ ಎನ್ಕೌಂಟರ್ ವಿಚಾರ ತಿಳಿದಿತ್ತು ಎಂದಲ್ಲವೇ?

ಮತ್ತೊಂದು ಗಮನಾರ್ಹ ವಿಚಾರವೆಂದರೆ ಸೊಹರಾಬುದ್ದೀನ್ ಶೇಕ್ ಮತ್ತು ಆತನ ಪತ್ನಿ ಕೌಸರ್‌ಬೀಯವರ ಎನ್ಕೌಂಟರ್ ಹತ್ಯೆಗಳಲ್ಲಿಯೂ (ನವಂಬರ್ 26 ಮತ್ತು 29, 2005) ಮುಖ್ಯ ಆರೋಪಿಗಳಾಗಿರುವವರು ಇದೇ ಪಾಂಡ್ಯನ್… ಶಾ ಜೋಡಿ. ಮೋದಿಯ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದ ಈ ಹೊಸ ಪುರಾವೆಗ… ಬಗ್ಗೆ ಸಿಬಿಐ ಈಗ ಏನು ಕ್ರಮ ಕೈಗೊಳ್ಳಲಿದೆ ಎಂದು ಜನ ಪ್ರಶ್ನಿಸುತ್ತಿದ್ದಾ… **(http://www.truthofgujarat.com)**

ಅಯ್ಯೋ ಪಾಪ



ಬ್ಲಫ್ ಮಾಸ್ಟರ್ ಮೋದಿ ಮತ್ತೊಮ್ಮೆ ತೀವ್ರ ಮುಖಭಂಗ ಅನುಭವಿಸಿದ್ದಾನೆ. ಮೊನ್ನೆ ಡಿಸೆಂಬರ್ 23ರಂದು ಮುಂಬೈನಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಸಭೆಯೊಂದರ… ಮಾತನಾಡಿದ ಮೋದಿ, ಗುಜರಾತ್‌ಗೆ ಹೋಲಿಸಿದರೆ ಮಹಾರಾಷ್ಟ್ರದ ರಾಜಕೀ… ದಾಖಲೆ ತೀರಾ ಕಳಪೆಯಾಗಿದೆ ಅಂತ ಹೀಯಾಳಿಸಿದ. ಮಹಾರಾಷ್ಟ್ರದಲ್ಲಿ ಹೆಚ್ಚು… ಕಾಲ ಆಡಳಿತ ನಡೆಸಿರುವ ಕಾಂಗ್ರೆಸ್/ಎನ್‌ಸಿಪಿ ಪಕ್ಷಗಳನ್ನು ಹೀಗಳೆಯುವುದ… ಮೋದಿಯ ಉದ್ದೇಶ ಆಗಿತ್ತು. ಮಹಾರಾಷ್ಟ್ರ ಮತ್ತು ಗುಜರಾತ್ ಪ್ರತ್ಯೇಕ… ರಾಜ್ಯಗಳಾಗಿ ವಿಂಗಡಣೆಯಾದ ತರುವಾಯ ಗುಜರಾತ್‌ನಲ್ಲಿ 14 ಮುಖ್ಯಮಂತ್ರಿಗಳು… ಆಡಳಿತ ನಡೆಸಿದ್ದರೆ ಅದೇ ಕಾಲಾವಧಿಯಲ್ಲಿ ಮಹಾರಾಷ್ಟ್ರ 26 ಮುಖ್ಯಮಂತ್ರಿಗಳನ್ನು… ಕಂಡಿದೆ; ಇದು ಮಹಾರಾಷ್ಟ್ರದಲ್ಲಿ ಭಾರಿ ರಾಜಕೀಯ ಅಸ್ಥಿರತೆ ಇರುವುದನ್ನು… ತೋರಿಸುವುದಿಲ್ಲವೆ ಎಂದಾತ ಪ್ರಶ್ನಿಸಿದ. ಆದರೆ ದಾಖಲೆಗಳು ಏನು ಹೇಳುತ್ತವೆ?

ರಾಜ್ಯ	ಮುಖ್ಯಮಂತ್ರಿಗಳು	ಅವರ ಅವಧಿಗಳು
ಗುಜರಾತ್	14	27
ಮಹಾರಾಷ್ಟ್ರ	17	26

ಮೋದಿ ಗುಜರಾತ್‌ನ ಮುಖ್ಯಮಂತ್ರಿಗಳ ಸಂಖ್ಯೆಯನ್ನು ಮಹಾರಾಷ್ಟ್ರದ ಅವಧಿಗಳೊಂದಿಗೆ ಹೋಲಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದರೂ… ಮೋದಿ ಭಕ್ತರು ಆತನನ್ನು ಸಮರ್ಥಿಸಿಕೊಳ್ಳುವ ರೀತಿ ನೋಡಿದರೆ ಕರು… ಉಕ್ಕುವುದಿಲ್ಲವೇ?



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಮುತ್ತೈದೆ ಗೌರಿಗೆ ವೈಧವ್ಯದ ಭೀತಿ

ಗೌರಿ: ತಾಯಿಯ ಹಕ್ಕು

ಗೌರಿ ಎಂಬುದೇ ಸ್ತ್ರೀ ತತ್ವದ ಪ್ರತಿನಿಧಿ. ಹೆಣ್ತನವಿಲ್ಲಿ ಅಬಲೆಯಲ್ಲ, ...ಯೂ, ಆತ್ಮವಿಶ್ವಾಸವುಳ್ಳವಳೂ ಮತ್ತು ಗಂಡಿನ ಹಂಗಿಲ್ಲದೇ ಇರುವವಳು. ...ಸ, ಗೌರಿಯ ಹಬ್ಬದಲ್ಲಿ ಗಂಡಿಗೆ ಯಾವ ಪ್ರಾತಿನಿಧ್ಯವೂ ಇಲ್ಲ. ಆತನ ...ಸುವಿಕೆಯಾಗಲಿ, ನೆರವಾಗಲಿ ಬೇಕಿಲ್ಲ. ಎಲ್ಲವೂ ಸ್ತ್ರೀ ಸಾಮ್ರಾಜ್ಯ. ...ವ ಹೆಂಗಳೆಯರ ಹಬ್ಬವು ವೈದಿಕದ್ದಲ್ಲ. ಸಂಪೂರ್ಣ ಕೃಷಿ ಪ್ರಧಾನವೂ, ...ವೂ ಆಗಿದೆ. ಆದರೆ ಈಗ ದುರಾಸೆಯ ಪುರೋಹಿತ ಇದರಲ್ಲಿ ...ತ್ತಾನೆ. ಗೌರಿಹಬ್ಬದಲ್ಲಿ ಮಂತ್ರದುಗುಳ ಚೆಲ್ಲಿ ಗಂಟೆಯಾಡಿಸುತ್ತಾನೆ. ...ಯ ಭಿಕ್ಷೆ ಪಡೆಯುತ್ತಾನೆ.

...ಮ್ಮ ಮಣ್ಣಿನಲ್ಲಿ ನಮ್ಮ ವ್ಯಕ್ತಿಗತ ಮತ್ತು ಸಾಮುದಾಯಿಕವಾದ ಕಾರ್ಯಕ್ರಮ ...ವುದರಲ್ಲೂ ಪುರೋಹಿತರ ಅವಶ್ಯಕತೆಯಿಲ್ಲ. ಮದುವೆ, ವಸಗೆ (ಒಸಗೆ), ...ರಣ, ಗೌರಿವ್ರತ, ಹೊಸ ಮನೆಯ ಪ್ರವೇಶ, ಶವಸಂಸ್ಕಾರ, ತಿಥಿ ...ಗಳಲ್ಲಿ ಮನೆಯ ಹಿರಿಯ ಸದಸ್ಯರು ನಿಂತು ನೆರವೇರಿಸುವುದು. ...ರ ಕುಲಾಚಾರಕ್ಕೆ ಅಥವಾ ಭೌಗೋಳಿಕ ಪ್ರಭಾವಕ್ಕನುಗುಣವಾದ ...ನ ಸಂಪ್ರದಾಯಗಳನ್ನು ಅನುಸರಿಸುವುದು. ಇಲ್ಲಿ ಸಂಪ್ರದಾಯಗಳೆಂದರೆ ...ಗಳ ಸಾಂಕೇತಿಕ ರೂಪಗಳೇ ಹೊರತು ಯಾವುದೇ ಅಂಧಶ್ರದ್ಧೆಯ ...ಡುಗಳಲ್ಲ.

...ವು ಗಮನಿಸಿರಬಹುದು; ಸಾಮುದಾಯಿಕವಾದ ಯಾವುದೇ ...ಕ್ರಮಗಳಲ್ಲಿ ಹಿರಿಯರು ಹೇಳುವ ಮಾತನ್ನು, "ನಮ್ಮ ಕಡೆ ಹೀಗೆ ...ವುದು" ಅಥವಾ "ನಮ್ಮ ಕಡೆ ಹೀಗೆ ಮಾಡುವುದಿಲ್ಲ."

...ದುವೆಯಾಗುವ ಗಂಡು ಹೆಣ್ಣುಗಳ ಮಧ್ಯೆ, ಹುಟ್ಟಿದ ...ಮತ್ತು ಪೋಷಕರ ಮಧ್ಯೆ, ಹೆಂಗಳೆಯರು ಕೂಡಿಮಾಡುವ ...ಕ್ರಮಗಳಲ್ಲೆಲ್ಲಾ ಬ್ರಾಹ್ಮಣ ಪುರೋಹಿತರು ತೂರಿ ಬಂದು ...ವಾವರಣದ ದೇಸೀಗುಣವನ್ನೇ ಹಾಳು ಮಾಡಿಬಿಡುತ್ತಾರೆ. ...ಹಿರಿಯರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಾರೆ. ನಾವು ಇನ್ನಾದರೂ ... ಪುರೋಹಿತರನ್ನು ಕರೆಯಿಸಿ, ಅರ್ಥವಿಲ್ಲದ ಮಂತ್ರಗಳಿಗೆ ...ಕವಾಗಿ ಕಿವಿಗೊಟ್ಟು, ನಮ್ಮ ದೇಸೀ ಸಂಪ್ರದಾಯಗಳಿಗೆ ...ಯನ್ನು ಅಂಟಿಸಿ, ಶೋಷಕರಿಗೆ ಅಡ್ಡ ಬಿದ್ದು ನಮ್ಮ ...ಸವಾರಿ ಮಾಡಲು ಅವಕಾಶ ಕೊಡುವುದನ್ನು ನಿಲ್ಲಿಸದೇ ...ರೆ, ನಮ್ಮ ಜಾನಪದದ ಸರಳ, ನೈಸರ್ಗಿಕ ಮತ್ತು ಮುಗ್ಧ ...ಗಳನ್ನು ಸಂಪೂರ್ಣವಾಗಿ ಕೈಬಿಡುವುದರ ಜೊತೆಗೆ, ...ವವನ್ನು ನಾವೇ ಮರೆತುಹೋಗಿಬಿಡುತ್ತೇವೆ.

...ಕನೇ ಆದ ಪಕ್ಷದಲ್ಲಿ, ಭಕ್ತ ಮತ್ತು ಭಗವಂತನ ನಡುವೆ ...ಂತ ಅಥವಾ ಪೂಜಾರಿಯೇಕೆ ಬೇಕು? ಈ ಅಸ್ತಿತ್ವದಲ್ಲಿ ...ಂಬುವವನು ಅಷ್ಟೊಂದು ಅಧಿಕಾರಿಶಾಹಿಯೇ? ...ಂಗಿರಿಯಲ್ಲಿ ತಲೆಯು ಯಾರಿಗೂ ಬಾಗಕೂಡದು, ...ಹೂ. ಪ್ರೀತಿ ತುಂಬಿದ ಸಮಾನ ಗೌರವದಲ್ಲಿ ಎಲ್ಲರಿಗೂ ...ಹೋಣ. ಆದರೆ ದಬ್ಬಾಳಿಕೆ ಎಂಬುದು ಭಾವನಾತ್ಮಕ ... ಸೆಲೆಯಿಂದ ನುಸುಳಿಬಿಟ್ಟಾಗ ಅದು ಶೋಷಣೆಯೆಂದೇ ಅನ್ನಿಸದು. ...ಧಾನವಾದ ಗೌರಿಯೂ ಶೋಷಣೆಗೆ ಒಳಗಾಗಿ ಮಂಗಳಗೌರಿಯಾಗಿದ್ದು ...ನು ಹೇಳಲಿರುವ ಕಥೆ.

... ಎಂದಕೂಡಲೇ ಯಾರಿಗಾದರೂ ನೆನಪಿಗೆ ಬರುವುದು ತಾಯಿಯ ...ರಿಯ ಹೆಂಗಸರು, ತವರಿಗೆ ಹಬ್ಬಕ್ಕೆಂದು ಬರುವ ಮದುವೆಯಾದ ...ಮಗಳು. ಆಗ ಪರಸ್ಪರ ನೀಡಿ ತೆಗೆದುಕೊಳ್ಳುವ ಬಾಗಿನಗಳಲ್ಲಿ



...ನಾದರೂ ಏನು? ತರಕಾರಿ, ಹಣ್ಣು, ಕಾಳು, ಧಾನ್ಯಗಳು; ಒಟ್ಟಿನಲ್ಲಿ ...ಸಂಬಂಧಿಸಿದ ವಸ್ತುಗಳು. ಜೀವ ಪೋಷಣೆಗೆ ಬೇಕಾದ ಅಗತ್ಯಗಳು. ...ಸಂಬಂಧಿಸಿದ ವಸ್ತುಗಳೆಲ್ಲವೂ ಹೆಣ್ಣಿನ ಕೈಗಳಲ್ಲಿ ಸಾಂಕೇತಿಕವಾಗಿ ...ವುದರ ಬಗ್ಗೆ ಯಾವ ಅಚ್ಚರಿಯೂ ಬೇಡ. ಯಾಕೆಂದರೆ ಮಹಿಳೆಯೇ ..., ಪ್ರಾರಂಭಿಸಿದ ಮೊದಲಿಗಳು! ಇಂತಹ ಹಬ್ಬಗಳಲ್ಲಿ, ಮದುವೆ, ... ಹೊಸಗೆ ಇತ್ಯಾದಿಗಳ ಸ್ತ್ರೀ ಸಂಬಂಧಿತ ಕಾರ್ಯಗಳಲ್ಲಿ ಹೆಣ್ಣಿನ ...ತುಂಬುವುದು ಭೂಮಿಯ ಫಲವತ್ತತೆ ಹಾಗೂ ಪ್ರಕೃತಿಯ ಸಮೃದ್ಧಿಯ

ಸಂಕೇತವೇ ಆಗಿರುತ್ತದೆ. ಭೂಮಿಯ ಫಲವತ್ತತೆಯನ್ನು ಮತ್ತು ಪ್ರಕೃತಿಯ ಸಮೃದ್ಧಿಯನ್ನು ತನ್ನೊಳಗೇ ಹೊಂದಿರುವ ಹೆಣ್ಣು ಬೀಜ ಬಿತ್ತಿದರೆ ಬೆಳೆ ಚೆನ್ನಾಗಿ ಆಗುವುದು ಎಂಬ ಪರಿಕಲ್ಪನೆಯು ಹೆಣ್ಣಿಗೆ ಗೌರವಿಸುವ ರೀತಿಯೇ ಆಗಿದೆ.

ಕೃಷಿ ಪ್ರಧಾನವಾದ ನಮ್ಮ ಜನಪದರ ಜೀವನದಲ್ಲಿ ಗದ್ದೆಗಳಲ್ಲಿ ಮೊಣಕಾಲೆತ್ತರ ಸೀರೆಯನ್ನು ಎತ್ತಿ ಕಟ್ಟಿಕೊಂಡು, ಹಾಡುತ್ತಾ, ಸೊಂಟ ಬಾಗಿಸಿ ಸಾಲಾಗಿ ಪೈರು ನಾಟುವ ಹೆಣ್ಣುಗಳು ತಮ್ಮ ಹೆಣ್ತನದ ಪ್ರಭಾವದಿಂದ ಭೂಮಿಯಲ್ಲೂ ಬೆಳೆ ತೆಗೆಯುವ ತಾಯಂದಿರೇ ಆಗಿದ್ದಾರೆ.

ಮೊರದ ಬಾಗಿನಗಳಲ್ಲಿ ಜೀವ ಪೋಷಕ ಧಾನ್ಯಾದಿ ತರಕಾರಿಗಳನ್ನು ಇಟ್ಟು ಪರಸ್ಪರ ನೀಡಿಕೊಳ್ಳುವುದು ಹಿಂದಿನ ಕೃಷಿ ಪ್ರಧಾನ ಸಮಾಜದಲ್ಲಿನ ವಿನಿಮಯ ಪದ್ಧತಿಯ ಸಂಕೇತವಾಗಿಯೂ ನನಗೆ ಕಾಣುತ್ತದೆ.

ದೇವಿಪ್ರಸಾದ್ ಚಟ್ಟೋಪಾಧ್ಯಾಯ ತಮ್ಮ 'ಲೋಕಾಯತ'ದಲ್ಲಿ ಹೀಗೆ ವಿವರಿಸುತ್ತಾರೆ: ಗೌರಿ ನಮ್ಮ ಪೌರಾಣಿಕ ಕಲ್ಪನೆಯ ದೇವತೆಯಲ್ಲ. ಅವಳು ಸಸಿಗಳ ಒಂದು ಕಟ್ಟು, ಅಷ್ಟೇ. ಜೊತೆಯಲ್ಲಿ ಒಬ್ಬ ಮಾನವ ಪ್ರತಿನಿಧಿಯಾಗಿ ಒಬ್ಬ ಕನ್ಯೆ.

ಸಸಿಗಳನ್ನು ಒಟ್ಟುಗೂಡಿಸಿ ಮಹಿಳೆಯರು ಆ ಕಟ್ಟನ್ನು ಅರಿಶಿಣದ ಒಂದು ಚಿತ್ತಾರದ ಮೇಲಿರಿಸುತ್ತಾರೆ. ಹೀಗೆ ಕಟ್ಟು ಕಟ್ಟುವಾಗ ಮುತ್ತೈದೆಯರಿಗೆ ಕುಂಕುಮ ಕೊಡಲಾಗುವುದು. ಕನ್ಯೆಯ ಜೊತೆ ಸಸಿಗಳ ಕಟ್ಟನ್ನು ಕೊಠಡಿಯಿಂದ ಕೊಠಡಿಗೆ ಕೊಂಡುಹೋಗಿ 'ಗೌರಿ, ಗೌರಿ, ನೀನೇನು ಕಂಡೆ' ಎನ್ನುತ್ತಾರೆ. ಅದಕ್ಕೆ ಕನ್ಯೆ ಉತ್ತರಿಸುತ್ತಾಳೆ: 'ನಾನು ಏಳಿಗೆ ಕಂಡೆ, ಸಮೃದ್ಧಿ ಕಂಡೆ' ಎಂದು.

ಗೌರಿಹಬ್ಬದಂತಹ ಸ್ತ್ರೀ ಪ್ರಧಾನವಾದ ಹಬ್ಬಗಳಲ್ಲಿ ಹೆಂಗುಸು ಹಾಡುವಂತಹ ಸಂಪ್ರದಾಯದ ಹಾಡುಗಳನ್ನು ಕೇಳಬಹುದೇ ಹೊರತು, ಪುರುಷಾಧಿಕ್ಯದ ಮಂತ್ರಗಳನ್ನಲ್ಲ.



ಇಲ್ಲಿ ನಾವು ಬಹುಮುಖ್ಯವಾಗಿ ಗಮನಿಸಬೇಕಾದುದ್ದು ಇಲ್ಲಿ ಎಲ್ಲೂ ಇರದ ವೈದಿಕ ಛಾಯೆ.

ಮುತ್ತೈದೆತನ ಎಂಬ ವರ ಮತ್ತು ವೈಧವ್ಯವೆಂಬ ಶಾಪ

ಜನಪದದಲ್ಲಿ ಬರುವ ಮುತ್ತೈದೆಯು ರಸಿಕತೆಯಿಂದ ಕೂಡಿರುವ, ಹೆಮ್ಮೆಯ ಅಥವಾ ಗಂಭೀರ ಸೌಂದರ್ಯದಿಂದ ಕಂಗೊಳಿಸುವ ಹೆಣ್ಣಾದರೆ, ವೈದಿಕ ಸಂಪ್ರದಾಯದಲ್ಲಿ ಬರುವ ಮುತ್ತೈದೆಗೆ ದೈವತ್ವವು ಆವರಿಸಿದ್ದು, ಪೂಜ್ಯ ಹಾಗೂ ಪಾವಿತ್ರ್ಯದ ಸೋಂಕು ಅಂಟಿರುತ್ತದೆ. ಗಂಡ ಸತ್ತ ವಿಧವೆಯು ತೀವ್ರವಾದ ಶೋಕಿತ, ಭಾವನಾತ್ಮಕವಾಗಿ ಕುಗ್ಗಿದ, ಅಗಲಿಕೆಯನ್ನು ಭರಿಸದ ಹೆಣ್ಣಾಗಿ ಜನಪದದಲ್ಲಿ ಕಂಡರೆ, ಸೂತಕದ, ಅಮಂಗಳದ, ಮಡಿಯಾಗದ ಮಾಲಿನ್ಯಭರಿತ ಅಸ್ಪೃಶ್ಯಳಾಗಿ ವೈದಿಕ ಸಂಪ್ರದಾಯದಲ್ಲಿ ಹೆಣ್ಣು ಕಾಣುತ್ತಾಳೆ. ಬಳೆ, ಕುಂಕುಮ, ಹೂವು, ಮಾಂಗಲ್ಯ ಮತ್ತು ಮೂಗಿನ ನತ್ತು (ಕೆಲವು ಸಂಪ್ರದಾಯಗಳಲ್ಲಿ ಸೀರೆ) ಈ ಐದು ಅಲಂಕಾರಿಕ ಲಕ್ಷಣಗಳಿಂದ ಕೂಡಿದವಳು ಮುತ್ತೈದೆ ಎನ್ನಲಾಗುತ್ತದೆ.

ಈ ಮುತ್ತೈದೆ ಎನ್ನುವುದು ದಕ್ಷಿಣ ಭಾರತದಲ್ಲಿ ಹೆಣ್ಣಿನ ಪ್ರಚಲಿತ ಲಕ್ಷಣದ ರೂಪವೆನ್ನುವುದಾದರೆ, ಸುಮಂಗಲಿ ಎನ್ನುವುದು ಉತ್ತರಭಾರತದ ಹೆಣ್ಣಿನ ಪರಿಕಲ್ಪನೆ. ಮಂಗಲವೆನ್ನುವುದೇ ಮಂಗಳವಾದುದು. ಅದರಲ್ಲಿ ದುರ್ಮಂಗಲವೆಂಬುದೇನೂ ಇರದಿದ್ದರೂ, ಸು- ಎಂಬ ಗುಣವಿಶೇಷಣವನ್ನು ಹಚ್ಚಿ ಹೆಣ್ಣಿನ ಮೌಲ್ಯವನ್ನು ಹೆಚ್ಚಿಸಿರುವುದು ಆ ಪದದ ವಿಶೇಷತೆ. ಅವರಲ್ಲಿ ಮುತ್ತೈದೆಯ ಐದೂ ವಸ್ತುಗಳು ಕಡ್ಡಾಯವೇನಲ್ಲ. ಅರಿಸಿಣ ದಾರದಲ್ಲಿ ಮಾಂಗಲ್ಯವೆನ್ನುವುದು ದಕ್ಷಿಣ ಭಾರತದ, ಅದರಲ್ಲೂ ದ್ರಾವಿಡರ ಕೊಡುಗೆ. ದಕ್ಷಿಣ ಭಾರತದ ಪೌರಾಣಿಕ ಇತಿಹಾಸಗಳನ್ನು ಗಮನಿಸಿದರೆ, ಈ ಮಾಂಗಲ್ಯದ ಶ್ರೇಷ್ಠತೆಗೆ ಒತ್ತುಕೊಟ್ಟಿರುವುದು ಸ್ಪಷ್ಟವಾಗಿ ಕಾಣುತ್ತದೆ. ಶ್ರೀ ಲಲಿತಾ ಸಹಸ್ರನಾಮದಲ್ಲಿ ಲಲಿತೆಯನ್ನು ಸ್ತುತಿಸುವಾಗ ಕಾಮೇಶಬದ್ಧಮಾಂಗಲ್ಯಸೂತ್ರಶೋಭಿತಕಂಧರಾ ಎಂದು ಗುರುತಿಸುವುದನ್ನು ಕಂಡರೆ, ಲಲಿತಾ ಸಹಸ್ರನಾಮದ ರಚನಾಕಾರ ಅಗಸ್ತ್ಯನೇ ಎಂದು ಸ್ಪಷ್ಟವಾಗಿ ಹೇಳಲಾಗದಿದ್ದರೂ ಯಾರೋ ದಕ್ಷಿಣ ಭಾರತದ ದ್ರಾವಿಡ ಮೂಲದ ಸಂಸ್ಕೃತಬಲ್ಲ ಋಷಿಯೇ ಇರಬೇಕು.



ಗಂಡ ಸತ್ತಾಗ ಈ ಮುತ್ತೈದೆಯ ವಸ್ತುಗಳಿಂದ ಹೆಣ್ಣನ್ನು ಹೊರತು ಪಡಿಸುವುದನ್ನು ಸುಮಾರು ನಮ್ಮ ಈ ತಲೆಮಾರಿನಿಂದ ಎರಡು ತಲೆಮಾರುಗಳ ಹಿಂದೆಯೇ ಹೆಂಗಸರು ವಿರೋಧಿಸುವುದನ್ನು ನಾನು ಕೇಳಿದ್ದೇನೆ. ವಿವಾಹ ಪೂರ್ವದಲ್ಲಿಯೇ ಕುಂಕುಮ, ಬಳೆ, ಹೂವು, ನತ್ತುಗಳನ್ನು ಬಳಸುತ್ತಿದ್ದು ಗಂಡ ಸತ್ತ ನಂತರ ಅದನ್ನು ಏಕೆ ವರ್ಜ್ಯವೆಂದು ಪರಿಗಣಿಸಬೇಕು ಎಂದು ನನ್ನ ಅಜ್ಜಿಯ ಸಮಕಾಲೀನರೂ ಅಭಿಪ್ರಾಯಪಡುತ್ತಿದ್ದರು. ಹಾಗಾಗಿ ವಿಧವೆಯಾದಾಗ ಮಾಂಗಲ್ಯವನ್ನು ಹೊರತು ಮಿಕ್ಕೆಲ್ಲವನ್ನೂ ಧಾರಣೆ ಮಾಡುತ್ತಿದ್ದರು. ವೈಧವ್ಯ ಅಥವಾ ಯಾವುದೇ ಕಾರಣಕ್ಕೆ ಹೆಣ್ಣನ್ನು ವಿರೂಪಗೊಳಿಸುವುದು ನಮ್ಮ ದ್ರಾವಿಡ ಪರಂಪರೆಯಲ್ಲಿ ಇಲ್ಲ. ಆದರೂ ವೈದಿಕ ಪರಂಪರೆಯ ಪ್ರಭಾವದಿಂದ ದಕ್ಷಿಣ ಭಾರತದ ವಿಧವೆಯನ್ನು ವೈಧವ್ಯದ ಸಂಕೇತದಲ್ಲಿ ಗುರುತಿಸಲು ಕೆಲವು ಅಂಶಗಳನ್ನು ತಂದುಕೊಂಡರು. ಅವೆಂದರೆ, ಗಂಡ ಸತ್ತಾಗ ಆ ವಿಧವೆಗೆ ಆಕೆಯ ತವರುಮನೆಯಿಂದ ಸೀರೆ ತಂದು ಉಡಿಸುವುದು, ಬಳೆ ತೊಡಿಸುವುದು, ಹೂ ಮುಡಿಸುವುದು, ಮಡಿಲು ತುಂಬುವುದು ಇತ್ಯಾದಿಗಳನ್ನು ಮಾಡುವಂತಹ ಪದ್ಧತಿಗಳು ಈಗಲೂ ಇವೆ. ಕುಂಕುಮವನ್ನು ಅಳಿಸುವಂತಹುದನ್ನು ನಾನೀಗ ಎಲ್ಲೂ ಕಂಡಿಲ್ಲ. ಆದರೆ, ಸಾಂಕೇತಿಕವಾಗಿ ತೊಟ್ಟಿರುವ ಒಂದು ಗಾಜಿನ ಬಳೆಯನ್ನು ಮುರಿಯುತ್ತಾರೆ. ಕೆಲವರು ತಲೆಯಿಂದ ಹೂವನ್ನು ಬಿಡಿಸುತ್ತಾರೆ.

ನಾವಿದನ್ನು ಅದೆಷ್ಟೇ ಅಲ್ಲಗಳೆದರೂ, ಸಾಮಾನ್ಯ ಮಹಿಳೆಗೆ ಇದೊಂದು ಭಾವನಾತ್ಮಕವಾಗಿ ಘೋರವಾದುದು ಮತ್ತು ಪುರುಷ ಸಮಾಜದ ಕಡೆಯಿಂದ ಅಮಾನುಷವಾದುದು. ನಮ್ಮ ಜನಪದದಲ್ಲಿಯೂ 'ಸೊಸೆ ಸತ್ತರೆ ಸೋಬನ, ಮಗ ಸತ್ತರೆ ಸೂತಕ' ಎನ್ನುವಂತೆ ಹೆಣ್ಣಿನ ಮೌಲಿಕ ವೈಭವವನ್ನು ಗಂಡಿನ ಸಾಂಗತ್ಯದಲ್ಲಿ ಎರಡನೆಯ ದರ್ಜೆಯಾಗಿ ಪರಿಗಣಿಸಿದ್ದು ಹೇಗೆ ಮತ್ತು ಎಂದಿನಿಂದ ಎಂದು ಹುಡುಕುತ್ತಾ ಹಿಂದೆ ಹೋದರೆ, ಮಾತೃಪ್ರಧಾನವಾದ ದ್ರಾವಿಡ ಬುಡಕಟ್ಟುಗಳ ಮೇಲೆ ಪುರುಷ ಪ್ರಧಾನವಾದ ಆರ್ಯರ ಸಮುದಾಯದ ದಬ್ಬಾಳಿಕೆಯೇ ಕೆಂಗಣ್ಣಿಗೆ ಕಾಣತೊಡಗುತ್ತದೆ.

ಏನೇ ಆಗಲಿ, ಮುತ್ತೈದೆಯಾಗಿ ಕಣ್ಣು ಮುಚ್ಚಿಬಿಡಬೇಕು ಎನ್ನುವ ಸಾಮಾನ್ಯ ಹೆಣ್ಣಿನ ಮನಸ್ಥಿತಿಗಂತೂ ಮುತ್ತೈದೆತನವೊಂದು ವರ, ವೈಧವ್ಯವೊಂದು ಶಾಪವೆಂದು ಮನವರಿಕೆ ಮಾಡಿಕೊಡಲು, ಅದನ್ನೇ ಗಟ್ಟಿಯಾಗಿ ಸ್ಥಿರಗೊಳಿಸಲು ಸಾಕಷ್ಟು ಸಾಹಿತ್ಯಗಳು, ಗೀತೆಗಳು ಮುಗ್ಧತೆಯಿಂದಲೋ, ಸೀಮಿತ ದೃಷ್ಟಿಯಿಂದಲೋ ಅಥವಾ ವೈಚಾರಿಕತೆಯ ಕೊರತೆಯಿಂದಲೋ ಜನಪದದಲ್ಲಿ ಉಂಟಾದರೆ, ನಮ್ಮ ತಲೆಮಾರಿನ ಈ ಅತ್ಯಾಧುನಿಕ ಜಗತ್ತಿನಲ್ಲಿಯೂ ಮುತ್ತೈದೆಯನ್ನು ಕೊಂಡಾಡುವ, ವೈಧವ್ಯವನ್ನು ಮುಂದಿಟ್ಟು ಹೆದರಿಸುವಂತಹ ಸಿನಿಮಾಗಳೂ ಆಧುನಿಕ ತಂತ್ರಜ್ಞಾನದಲ್ಲಿ ಒಡಮೂಡಿವೆ. ಕರಿಮಣಿ ಸೌಭಾಗ್ಯಕ್ಕಾಗಿ, ಅರಿಸಿಣದಾರದ ಗಂಟಿಗಾಗಿ ತನ್ನತನವನ್ನೇ ಒತ್ತೆಯಿರಿಸಲು ಹೆಣ್ಣನ್ನು ಒತ್ತಾಯಿಸುವ, ಮುತ್ತೈದೆ ಮತ್ತು ವೈಧವ್ಯದ ಪರಿಕಲ್ಪನೆಯನ್ನು ಗಟ್ಟಿಯಾಗಿ, ಜೀವಂತವಾಗಿ ಉಳಿಸುವ ಅನೇಕ ತಾಳಿ ಕೇಂದ್ರಿತ ಅವಿಚಾರಿ ಸಿನಿಮಾಗಳು, ಗಂಡನಿಗೆ ಏನೇ ಆದರೂ ವ್ರತವನ್ನು ಮಾಡಿ, ಹಾಡನ್ನು ಹಾಡಿ ಉಳಿಸಿಕೊಳ್ಳುವುದನ್ನು ಈಗಲೂ ಕಾಣಿಸುತ್ತಿವೆ. ಅಂತಹ ಸಿನಿಮಾಗೆ ಬಂದ ಹೆಂಗಳೆಯರಿಗೆ ಅರಿಸಿಣ ಕುಂಕುಮ ಕೊಡುವ ವ್ಯಾಪಾರಿ ಗಿಮಿಕ್ ಕೂಡ ಪ್ರಚಲಿತದಲ್ಲಿದೆ.

ಮಹಾರಾಜ್ಞಿಯಂತೆ ಕುಟುಂಬಕ್ಕೇ ಯಜಮಾನಿಯಾಗಿದ್ದ ಹೆಣ್ಣನ್ನು ಎರಡನೇ ದರ್ಜೆಗೆ ಇಳಿಸಿ, ಈ ಮುತ್ತೈದೆತನವನ್ನು ಕಳೆದುಕೊಳ್ಳುವುದರ ಅಥವಾ ವೈಧವ್ಯವನ್ನು ಪಡೆಯುವುದರ ಭೀತಿಯಲ್ಲಿ ಅವಳನ್ನು ತಳ್ಳಿದ ಪುರುಷಾಧಿಕ್ಯದ ಕುತಂತ್ರದ ರೀತಿ ಹೇಗೆ ಪ್ರಾರಂಭವಾಯಿತೆಂಬುದು ನಿಗೂಢ. ಅದಕ್ಕೆ ಪುರುಷರ ಅಹಂಕಾರವೂ, ಹೆಂಗಸರ ಭಾವನಾತ್ಮಕ ಅಥವಾ ಮಾನಸಿಕ ದೌರ್ಬಲ್ಯವೂ ಕಾರಣವಾಗುತ್ತದೆ. ಅದೇನೇ ಇರಲಿ, ಫಲವತ್ತತೆಯ ಮತ್ತು ಸಮೃದ್ಧಿಯ ಪ್ರತಿನಿಧಿಯಾಗಿ ಆಚರಿಸುತ್ತಿದ್ದ ಹೆಂಗುಸರ ಗೌರಿ ಹಬ್ಬವು ಮತ್ತೊಂದು ರೀತಿಯಲ್ಲಿ ವೈಧವ್ಯದ ಭಯಕ್ಕೆ, ಗಂಡನ ಆಧೀನಕ್ಕೆ ಭಾವನಾತ್ಮಕವಾಗಿ, ಸೈದ್ಧಾಂತಿಕವಾಗಿ ಒಳಪಡುವ ಮಂಗಳ ಗೌರಿ ಹಬ್ಬವಾಗಿ ಮತ್ತೊಂದು ಟಿಸಿಲೊಡೆದಿದ್ದು ಗೌರಿ ಪರಂಪರೆಯ ಅಚ್ಚರಿ.

ತನ್ನನ್ನು ಮುತ್ತೈದೆತನದಿಂದ ಕಂಗೊಳಿಸಿಕೊಂಡಿರಲು, ವೈಧವ್ಯದ ಸಂಕಟದಿಂದ ಪಾರು ಮಾಡಲು, ಬಂಜೆತನದ ಅಪವಾದ ನೀಗಲು ವಟ ಸಾವಿತ್ರಿ ವ್ರತ, ಮಂಗಳ ಗೌರಿ ವ್ರತಗಳಂತಹ ಅನೇಕ ವ್ರತಾಚರಣೆಗಳ ಮೊರೆ ಹೋಗಲು ಸ್ತ್ರೀ ಸಮಾಜ ಪ್ರಾರಂಭಿಸಿತು.

ಈ ವ್ರತಗಳೆಂದರೇನು? ಮಂಗಳಗೌರಿ ವ್ರತ ಮಹಾತ್ಮ್ಯ , ಏನು! ವ್ರತಗಳೊಳಗೆ ವೈದಿಕ ಪದ್ಧತಿಯನ್ನು ತುರುಕು ಹಾಕಿದ ಚಾಣಾಕ್ಷರು ಯಾರು? ಮುಂದೆ ನೋಡೋಣ.

'ನಾನು ಬೇಕಾದ್ರೆ ತ್ಯಾಗಿ ಆಯ್ತೀನಿ..!'

ಧೂತ್ತೇರಿ

▸ಯಾಹು

ಸಾಂಗವಾಗಿ ಸಾಹಿತ್ಯ ರಚಿಸಿದ ನಾ. ಡಿಸೋಜ ಅವರಿಗೇ ಅಚ್ಚರಿಯಾಗುವಂತೆ ಅವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ. ಇನ್ನೇನು ಮಡಿಕೇರಿಯಲ್ಲಿ ಎಂದಿನ ಸಂಪ್ರದಾಯಗಳಂತೆ ಸಾಹಿತ್ಯ ಸಮ್ಮೇಳನವೂ ನಡೆಯುತ್ತೆ. ಅಧ್ಯಕ್ಷರ ಮೆರವಣಿಗೆ, ಎಂಟು ಜ್ಞಾನಪೀಠಗಳಿಗೆ ಹೂವಿನ ಹಾರ, ಡೊಳ್ಳು, ವೀರಗಾಸೆ, ಕೋಲಾಟ, ಮಹಿಳಾ ಡೊಳ್ಳು-ಹೀಗೆ ಮೆರವಣಿಗೆ ಸಾಂಗವಾಗಿ ನಡೆಯುತ್ತೆ. ಇದರ ನಡುವೆ ಮೈಲುದ್ದದ ಊಟದ ಕ್ಯೂ ಇರುತ್ತೆ. ಕಲಾವಿದರು ಕವರಿನಲ್ಲಿ ಕೊಟ್ಟ ಹಣವನ್ನ ಬಹಿರಂಗವಾಗಿಯೇ ಎಣಿಸಿ ಖುಷಿಯಿಂದ ಹೊರಡುತ್ತಾರೆ. ಆದರೆ ಸಾಹಿತಿಗಳು ಯಾರೂ ಇಲ್ಲದಾಗ ಕವರ್ ತೆಗೆದು ಎಣಿಸಿ "ಇನ್ನೊಂದು ಸಾವಿರ ಕೊಡುವುದಕ್ಕೆ ಏನಾಗಿತ್ತು? ಇದೇನು ಇವರಪ್ಪನ ಮನೆ ದುಡ್ಡೆ?" ಎಂದುಕೊಂಡು ಬೇರೆ ಯಾವ ಗೋಷ್ಠಿಗಳನ್ನು ಕೇಳದೆ ಕೊಡಗನ್ನು ನೋಡಿ ಕಾಲ್ಕೀಳುತ್ತಾರೆ.

ಕಡೆಯದಿನ ಹಲವಾರು ಹಳಸಲು-ಅಂದರೆ ಕನ್ನಡ ಸಾಹಿತ್ಯ ಪರಿಷತ್ ಮೊಟ್ಟಮೊದಲ ಸಮ್ಮೇಳನದಲ್ಲಿ ತೆಗೆದುಕೊಂಡ- ನಿರ್ಣಯಗಳನ್ನೇ ಮತ್ತೆ ಓದಿ ಅನುಮೋದನೆ ಪಡೆಯಲಾಗುತ್ತೆ. ಅದರಲ್ಲಿ ಕನ್ನಡ ಮಾತೃಭಾಷೆ, ಕನ್ನಡ ಗಡಿ ಸಮಸ್ಯೆ ಇದ್ದೇ ಇರುತ್ತವೆ. ಈ ನಿರ್ಣಯಗಳನ್ನ ಯಾರೂ ಕೇಳಿಸಿಕೊಳ್ಳುವುದಿಲ್ಲ.


ಈ ತರದ ಜಾತ್ರೆಯಿಂದ ಕನ್ನಡಕ್ಕೇನಾಯ್ತು ಎಂಬುದೇ ಯೋಚನೆಯಾಗಿದೆಯಲ್ಲಾ, ಥೂತ್ತೇರಿ!

* * * *

ಯಕ್ಷಗಾನದ ಅಡಿಷನಲ್ ಪಾತ್ರದಂತೆ ಕಾಣುವ ಪುಂಡಲೀಕ ಹಾಲಂಬಿ ಹಣಕಾಸಿನ ವಿಷಯದಲ್ಲಿ ಶಾನೆ ಸಮರವನ್ನೆ ಸಾರಿದ್ದಾರಂತಲ್ಲಾ, "ಕನ್ನಡ ಸಾಹಿತ್ಯ ಪರಿಷತ್ತಿಗೆ ಕೃಷ್ಣರಾಜ ಒಡೆಯರ್ ಐದು ಸಾವಿರ ಕೊಟ್ಟಿದ್ದರು. ಅಂದಮೇಲೆ ನೀವು ಕನಿಷ್ಠ ಐದು ಕೋಟಿಯನ್ನಾದರೂ ಕೊಡಬೇಕು. ಇಲ್ಲವಾದರೆ ಧರಣಿ ಮಾಡ್ತೀನಿ" ಎಂದು ಧಮಕಿ ಹಾಕಿದ್ದಾರಂತಲ್ಲಾ, ಈ ಸುದ್ದಿ ಕೇಳಿದ ಸಿದ್ದು ತಮ್ಮ ಎಂದಿನ ಧಿಮಾಕಿನ ಶೈಲಿಯಲ್ಲಿ "ಅಲ್ರೀ, ಕನ್ನಡಕ್ಕಾಗಿ ಕೊಡಬೇಕಾದ ಹಣ ಕೇಳ್ಳಿ ಕೊಡನ. ಆದ್ರೆ ಧರಣಿ ಮಾಡ್ತೀನಿ ಅಂದ್ರೆ ಇವರೇನು ಸಾಲ ಮಾಡಿಕೊಂಡಿರೋ ರೈತನೇನ್ರಿ? ಇವರ ಸಿಟ್ಟು ನೋಡಿದ್ರೆ ಯಾಕೋ ಡವುಟಾಯ್ತಾ ಆದೆ ಕಂಡ್ರಿ" ಎಂದಿಲ್ಲವಂತಲ್ಲಾ. ಈ ಹಾಲಂಬಿಗಿಂತಲೂ ಮೊದಲಿದ್ದ ನಲ್ಲೂರು ಪ್ರಸಾದ್ ಎಂಬ ಜೆಡಿಎಸ್ ಸಾಹಿತಿಯು ಸಾಹಿತ್ಯ ಪರಿಷತ್ ಚುನಾವಣೆಗೆ ನಿಂತಾಗ ಕಾಲಿಗೆ ಬೀಳುವುದೊಂದು ಬಾಕಿ. ಆ ಅವತಾರದಲ್ಲಿ ಓಟು ಕೇಳಿ ಗೆದ್ದು ಹೋದವನು ಸಾಹಿತ್ಯ ಸಮ್ಮೇಳನಕ್ಕಿಂತಲೂ ಒಂದು ಕೈ ಮಿಗಿಲಾಗಿ ಮಗನ ಮದುವೆಯನ್ನ ಬೆಂಗಳೂರ ಅರಮನೆಯಲ್ಲಿ ಮಾಡಿ, ಅಡಿಕೊಳ್ಳುವವರಿಗೆಲ್ಲಾ ಆಹ್ವಾನ ಪತ್ರಿಕೆ ಕಳುಹಿಸಿದ್ದನಂತಲ್ಲಾ, ಥೂತ್ತೇರಿ!

* * * *

ಇತ್ತ ರಾಜಕಾರಣದ ಸಂಗತಿ ಶಾನೆ ಆತಂಕಕಾರಿಯಾಗಿ ವೆಯಲ್ಲಾ, ಎಡೂರಪ್ಪನ ಅವಧಿಯಲ್ಲಿ ಎಡೂರಪ್ಪನನ್ನೂ ಮೀರಿಸುವಂತಹ ಭ್ರಷ್ಟಾತಿಭ್ರಷ್ಟ ಅಧಿಕಾರಿಗಳೆಲ್ಲಾ, ಸಿದ್ದು ಸರಕಾರದ ಕಾರ್ಯಕ್ರಮಗಳನ್ನು ಗೇಲಿ ಮಾಡತೊಡಗಿ ದ್ದಾರಂತಲ್ಲಾ. ರಾಜಕಾರಣಿ ಎಷ್ಟೇ ಹರಕೊಂಡರೂ ಕೂಡ ಕಡೆಗೂ ಅವನ ಅರ್ಜಿ ಬರುವುದು ಅಧಿಕಾರಿಯ ಹತ್ತಿರವೆ. ಆದ್ದರಿಂದ ಸರಕಾರದ ಕಾರ್ಯಕ್ರಮಗಳ ಜಾರಿಗೆ ಇಲ್ಲದ ಸಬೂಬು ಹೇಳುತ್ತ ಕೂತಿದ್ದಾರಂತಲ್ಲಾ, ಈ ನಡುವೆ ಸಿದ್ದು ಸರಕಾರದ ಅಹಿಂದ ಕಾಳಜಿ ಬಗ್ಗೆ ಮುಂದುವರಿದ ಮೇಲ್ಜಾತಿ ಕಾಂಗ್ರೆಗಳು ಒಳಗೊಳಗೇ ಗೇಲಿ ಮಾಡುತ್ತ ಪಾರ್ಟಿ ಮತ್ತು ಸರಕಾರದ ನಡುವೆ ಕಂದಕವನ್ನೇ ನಿರ್ಮಿಸಿ, ಸರಕಾರವೇ ಮುಂದೆ ಚಲಿಸದಂತೆ ಹಿಡಿದು ಕೊಂಡಿದ್ದಾರಂತಲ್ಲಾ, ಹಾಗಾಗಿ ಸಿದ್ದು ಸರಕಾರದ ಸದ್ದಡಗಿಸಲು ಕಾಂಗ್ರೆಸ್ ಮತ್ತು ಭ್ಯೂರಾಕ್ರಸಿಗಳು ಸದ್ದಿಲ್ಲದೇ ಸಜ್ಜಾಗಿದ್ದಾರಂತಲ್ಲಾ, ಥೂತ್ತೇರಿ!



* * * *

ಸಮಯ ಸಿಕ್ಕಾಗಲೆಲ್ಲಾ ಮುಖ್ಯಮಂತ್ರಿಗಳಿಗೆ ಅಹಿಂದದಷ್ಟೇ ಬೇರೆ ವರ್ಗವೂ ಮುಖ್ಯವಾಗಬೇಕೆಂದು ಬೇರೆ ವರ್ಗದ ಜನರಿಗೆ ಬಿಸಿ ತಾಗಿಸುತ್ತಲೇ ಬರುತ್ತಿರುವ ಮಾಜಿ ಪ್ರಧಾನಿಗಳು ಶ್ರೀಕಂಠದತ್ತ ಒಡೆಯರ್ ನಿಧನರಾದ ಕೂಡಲೇ ಅವರ ಧರ್ಮಪತ್ನಿ ಮಹಾರಾಣಿಯವರ ಮೇಲೆ ತಮ್ಮ ಕಾಕಾ ದೃಷ್ಟಿಯನ್ನು ಹರಸಿದ್ದಾರಲ್ಲಾ. ಇದರಿಂದ ತೀರಾ ಗಲಿಬಿಲಿಗೊಂಡಿರುವ ಇಬ್ಬರು ಹೆಂಡಿರ ಮುದ್ದಿನ ರಾಜಕಾರಣಿ ವಿಶ್ವನಾಥರನ್ನ ಮಾತನಾಡಿಸಿದರೆ ಹೇಗೆ ಎಂದು ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಹಕ್ಕಿ ಹಾಡೊ ಚಿಲಿಪಿಲಿ ರಾಗ ಹರಿವ ನೀರ ಕಲಕಲ ವೇಗ"

"ಹಲೋ ಯಾರು?"

"ನಾನು ಸಾರ್ ಯಾಹು."

"ಏನಪ್ಪ ಯಾಹು ಹೇಗಿದಿಯಾ?"

"ನಾನು ಚೆನ್ನಾಗಿದೀನಿ ಸಾರ್. ನೀವೆ ಯಾಕೊ ತೊಂದ್ರೆಗೆ ಸಿಕ್ಕಾಯ್ಕಳತಾಯಿರಂಗೆ ಕಾಣ್ತಿದಲ್ಲ ಸಾರ್."

"ದೇವೇಗೌಡರ ಕುತಂತ್ರದ ಬಗ್ಗೆ ಹೇಳ್ತಾಯಿದಿರಾ?"

"ಹೌದು ಸಾರ್."

"ನೋಡಿ, ದೇವೇಗೌಡ್ರ ಕುತಂತ್ರಗಳು ಫಲ ಕೊಟ್ಟಿರ ಬಹುದು. ಆದರೆ ನನ್ನ ಮತ್ತು ಸಿದ್ದರಾಮಯ್ಯನ ವಿಷಯದಲ್ಲಿ ಏನೂ ಮಾಡಕ್ಕಾಗಲಿಲ್ಲ."

"ಅಂಗಂತಿರಾ?"

"ಹೌದು ಕಂಡ್ರಿ. ನನ್ನನ್ನ ಮುಗಸಲೆಬೇಕು ಅಂತ ಪಾಪ ಬಹಳ ಒಳ್ಳೆ ಸಜ್ಜನ ರಾಜಕಾರಣಿ ಜೀವಿಜಿಯನ್ನ ತಂದು ನಿಲ್ಲಿಸಿದ್ರು. ಆದ್ರು ಮೈಸೂರಿನ ಜನ ನನ್ನನ್ನ ಕೈಬಿಡ್ಡಿಲ್ಲ, ಇನ್ನ ಸಿದ್ದರಾಮಯ್ಯನ ದಂತೂ ದೊಡ್ಡ ಕತೆನೆ ಇದೆ."

"ಅದೇನು ಕತೆ ಸಾರ್."

"ನೋಡಿ ನಮ್ಮ ಪುರಾಣದಲ್ಲಿ ಒಂದು ಕತೆಯಿದೆ. ಅದು ಚಂದ್ರಹಾಸನ ಕತೆ. ದುಷ್ಟಬುದ್ಧಿ ಅನ್ನೋ ಮಂತ್ರಿಗೆ ಆ ಚಂದ್ರಹಾಸ ಮುಂದೆ ಈ ರಾಜ್ಯದ ರಾಜ ಆಗ್ತನೆ ಅಂತ ಭವಿಷ್ಯಕಾರರು ಹೇಳ್ತರೆ. ಇದನ್ನ ಕೇಳಿಸಿಕೊಂಡ ದುಷ್ಟಬುದ್ಧಿ ಆ ಹುಡುಗನನ್ನ ಕೊಲ್ಲೊದಕ್ಕೆ ಸುಮಾರು ನೂರು ಪ್ಲಾನ್ ಮಾಡ್ತನೆ. ಆಗೋದೇ ಇಲ್ಲ, ಹಾಗೆ ನಮ್ಮ ದೇವೇಗೌಡ್ರು ಸಿದ್ದರಾಮಯ್ಯನ್ನ ಮುಗಸೋದಕ್ಕೆ ಪಾರ್ಟಿಯಿಂದ ತಗದಾಕ್ತರೆ, ಚಾಮುಂಡೇಶ್ವರಿ ಚುನಾವಣೇಲಿ ತಮ್ಮ ಸರ್ವಸ್ವವನ್ನು ಪಣಕ್ಕಿಡತರೆ, ಬಿಜೆಪಿ ಜೊತೆಗೆ ಸರಕಾರ ಮಾಡ್ತರೆ. ಏನೇ ಮಾಡಿದ್ರೂ ಸಿದ್ದರಾಮಯ್ಯನ ನಾಶ ಮಾಡಕ್ಕಾಗಲ್ಲ, ಕರ್ನಾಟಕದ ಜನ ಅವರನ್ನ ಮುಖ್ಯಮಂತ್ರಿ ಮಾಡೇ ಬಿಡ್ತರೆ. ಸೋಲೊಪ್ಪಿಕೊಂಡ ಗೌಡ್ರು ಒಂದು ವಿಶ್ ಮಾಡಬಹುದಿತ್ತು, ಮಾಡಿಲ್ಲ, ಆ ವಿಷಯದಲ್ಲವರು ಮುಚ್ಚುಮರೆ ಮಾಡಲ್ಲ. ಆದ್ರು ದುಷ್ಟಬುದ್ಧಿ ತಲೆವಳಗಡೆ ಮರುಮಂತ್ರಗಳೇ ಇರತವೆ. ಈಗ ಆ ಮಂತ್ರನ ನನ್ನ ಕಡೆಗೆ ಪ್ರಯೋಗಿಸಬಹುದು. ನಾನಂತು ರೆಡಿ."

"ಯಾವತರ ರೆಡಿಯಾಗಿದ್ದಿರಿ?"

"ನೋಡ್ರಿ, ದೇವೇಗೌಡ್ರ ಪ್ಲಾನ್ ಹೊಸದೇನೂ ಅಲ್ ... ಸತ್ತ ಮನೆಯವರಿಗೇ ಟಿಕೆಟ್ ಕೊಟ್ಟು ಗೆಲ್ಲಿಸೊ ಅವ ... ಕುತಂತ್ರ ಚಿಗರಿಗೌಡ ಸತ್ತಾಗನಿಂದ್ಲೂ ಮಾಡಿದಾರೆ ... ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ, ಕಲ್ಪನಾ ಸಿದ್ದರಾಜು ... ಪರಿಮಳ ನಾಗಪ್ಪ, ಈಚೆಗೆ ಬೀದರ್‌ನಲ್ಲಿ ನಡೆದ ಉಪ ... ಚುನಾವಣೆಲೂ ಎಲ್ಲಾ ಪಾರ್ಟಿಯವರನ್ನು ಮಣ ... ಮುಕ್ಕಿಸಿದ್ರು. ಸತ್ತವರ ಮನೆ ದುಃಖ ಮತ್ತು ಸಾರ್ವಜನಿಕ ... ಅನುಕಂಪದ ಶಕ್ತಿ ಅರಿತಿರೊ ಅಪರೂಪದ ರಾಜಕಾರಣಿ ... ಆತ. ಈ ಮೈಸೂರ ಜನತೆ ಒಡೆಯರ್ ಋಣ ... ತೀರಿಸೋದಕ್ಕೆ ರೆಡಿಯಿದಾರೆ ಅಂತ ಗೊತ್ತಾಗಿದೆ. ಅದ ... ಒಂದು ಗಾಳ ಹಾಕಿದಾರೆ. ಅದ್ಕ ಮೊದ್ಲೆ ನಾನೆ ನ ... ಸ್ಥಾನನ ಮಹಾರಾಣಿ ಪ್ರಮೋದಾ ದೇವಿಯವರಿಗೆ ಬಿಟ್ಟು ... ಕೊಡ್ತೀನಿ."

"ಅವರು ಒಪ್ಪತರ ಸಾರ್?"

"ಒಪ್ಪುಸ್ತೀನಿ. ನೋಡಿ ನಮ್ಮದು ರಾಷ್ಟ್ರಮಟ್ಟದ ... ಶತಮಾನಗಳ ಇತಿಹಾಸ ಇರೋ ಪಾರ್ಟಿ. ಅದೇ ಜೆಡಿಎಸ್ ... ಅಸ್ತಿತ್ವನೇ ಇಲ್ದೆಯಿರೊ ಪಾರ್ಟಿ. ಅಲ್ಲದೆ ದೇವೇಗೌಡ ... ನಂತ್ರ ಜೀರ್ಣವಾಗಿ ಇಲ್ಲದಂಗಾಗೋ ಪಾರ್ಟಿ. ಅಲ್ ... ನಿಲ್ಲಬೇಡಿ ನಮ್ಮಲ್ಲಿ ನಿಂತು ಗೆದ್ರೆ ಕೇಂದ್ರದಲ್ಲಿ ಮಂತ್ರಿಯಾಗ ... ಬಹುದು ಅಂತ ಹೇಳ್ತಿನಿ."

"ನೀವೊಬ್ಬ ಮುತ್ಸದ್ದಿಯಾಗಿ ಹೇಳಿ. ಜೆಡಿಎಸ್ ... ನಿರ್ನಾಮವಾಗಬೇಕ?"

"ಖಂಡಿತ ಅಂಗಾಗಬಾರ್ದು. ಆ ಪಾರ್ಟಿ ಇರಬೇಕು ... ಆದ್ರೆ ಎಷ್ಟು ಬೇಕೊ ಅಷ್ಟಿರಬೇಕು. ಅಂಗೆ ನೋಡಿದ ... ಜೆಡಿಎಸ್ ದೇವೇಗೌಡ್ರಿಗೆ ಬೇಕೆ ಹೊರತು ಕುಮಾರಸ್ವಾಮಿಗ ... ಸಾಕಾಗಿದೆ."

"ಹಾಗಂತಿರಾ?"


"ಹೌದು. ಜೆಡಿಎಸ್ ಇರಬೇಕಾದ್ರೆ ಜಾತ್ಯತೀತ ತಳಹದಿ ... ಮೇಲೆ ಮತ್ತೆ ರಚನೆಯಾಗಬೇಕಾಗುತ್ತೆ. ಆದ್ರೀಗ ಜಾ ... ಅತಿ ದೆಸೆಯಿಂದ ಈ ಐದು ವರ್ಷದಲ್ಲಿ ಏನಾಗುತ್ತೆ ... ಹೇಳಕ್ಕೆ ಬರಲ್ಲ."

"ಅವುರದಿರ್ಲಿ ನಿಮ್ಮ ಕತೆ ಹೇಳಿ."

"ನನ್ನದೇನು. ನಾನೊಬ್ಬ ಕಾಂಗ್ರೆಸ್ಸಿನಗಾಗಿ ಶಾಸಕನಾದ ... ಮಂತ್ರಿಯಾದೆ, ಲೋಕಸಭಾ ಸದಸ್ಯನಾದೆ. ಈಗ ಬೇಕಾದ ... ತ್ಯಾಗಿ ಆಗ್ತಿನಿ."

"ಥೂತ್ತೇರಿ!!"

ಹೊಗಳಿಕೆ ತೆಗಳಿಕೆ



ಸಾಹಿತ್ಯಲೋಕವನ್ನು ಭ್ರಷ್ಟಗೊಳಿಸಿದ 'ನುಡಿಸಿರಿ'

ಆಫ್ರಿಕಾದ ಲೋಕಗೀತೆಯೊಂದರಲ್ಲಿ ಒಬ್ಬಾತನ ಹೆಂಡತಿ ಮತ್ತು ಗೆಳೆಯ ಸಂತೆಗೆ ಹೋದವರು ಹಿಂದೆ ಬರುವುದಿಲ್ಲ. ಚಿಂತಿತನಾದ ಆತ ಸಂಜೆಯ ಹೊತ್ತು ಕಡಲ ದಂಡೆಯಲ್ಲಿ ನಡೆದಾಡುತ್ತಿದ್ದಾಗ ಹೆಂಡತಿ ಮತ್ತು ಗೆಳೆಯ ಒಟ್ಟಿಗೇ ಮಲಗಿಕೊಂಡಿರುವುದನ್ನು ನೋಡುತ್ತಾನೆ. ಅವರನ್ನು ಕೊಂದುಬಿಡುವಷ್ಟು ಸಿಟ್ಟು ಬರುತ್ತದೆ. ಆಗ ಆ ಗೆಳೆಯ ಇವನ ಕೈಯಲ್ಲಿ ನೂರರ ನೋಟನ್ನು ತುರುಕುತ್ತಾನೆ.


ಗೆಳೆಯನನ್ನು ಉದಾರವಾಗಿ ಕ್ಷಮಿಸಿ ಮಡದಿಯನ್ನು ಜೊತೆಯಲ್ಲಿ ಕರಕೊಂಡು ಮನೆಯ ಹಾದಿ ಹಿಡಿದ ಆತ ಹೇಳುವುದು ಹೀಗೆ:

'ಏಕೆಂದು ಕೇಳುವವರೇ ಕೇಳಿ,
ನೀರು ತೊಳೆಯುತ್ತದೆ ವಾಸನೆಯ
ಹಾದರ ಮೈಮನ ವಾಸನೆಯ
ಹಣಕ್ಕೆ ವಾಸನೆ ಇಲ್ಲ
ಹಣಕ್ಕೆ ಯಾವುದೇ ವಾಸನೆ ಇಲ್ಲ
ಅಯ್ಯೋ ಹಣಕ್ಕೆ ವಾಸನೆ ಇಲ್ಲ'

'ಹಣ ಕಂಡರೆ ಹೆಣವೂ ಬಾಯಿಬಿಡುತ್ತದೆ' ಎಂಬ ಮಾತು ನಮ್ಮಲ್ಲಿ ಹಿಂದಿನಿಂದಲೂ ರೂಢಿಯಲ್ಲಿದೆ. ಹಣದ ಶಕ್ತಿಯೇ ಅಂಥದ್ದು. ಅದರ ಮುಂದೆ ಸಿದ್ಧಾಂತಗಳು, ಬದ್ಧತೆಗಳು ಅಡ್ಡಡ್ಡ ಮಲಗಿಬಿಡುವುದಿದೆ.

'ದೇಶದಲ್ಲಿ ಚುನಾವಣಾ ವ್ಯವಸ್ಥೆಯೇ ಹೊಲಸೆದ್ದು ಹೋಗಿದೆ. ಮತದಾರರು ಹಣದ ಬೇಡಿಕೆ ಇಡುತ್ತಿದ್ದಾರೆ. ಹಾಗಾಗಿ ನಾವು ಹಣ ಕೊಡದೇ ವಿಧಿಯಿಲ್ಲವಾಗಿದೆ' ಎಂದು ರಾಜಕಾರಣಿಗಳು ಬಹಿರಂಗವಾಗಿ ಹೇಳುತ್ತಿದ್ದಾರೆ. ಆದರೆ ಓಟಿಗಾಗಿ ಮತದಾರರಿಗೆ ಹಣದ ಆಮಿಷವೊಡ್ಡಿ ಅವರನ್ನು ಮೊದಲು ಭ್ರಷ್ಟಗೊಳಿಸಿದವರು ಯಾರು? ಲಂಚ ನೀಡದಿದ್ದರೆ ಸರಕಾರಿ ಅಧಿಕಾರಿಗಳು, ನೌಕರರು ಕೆಲಸವೇ ಮಾಡುವುದಿಲ್ಲ ಎಂದು ದೂರುತ್ತೇವೆ. ಆದರೆ ತಮ್ಮ ಕೆಲಸ ಮಾಡಿಸಿಕೊಳ್ಳಲು ಅವರಿಗೆ ಲಂಚ ನೀಡಿ ಅವರನ್ನು ಭ್ರಷ್ಟ ವ್ಯವಹಾರಕ್ಕೆ ಮೊದಲು ಪ್ರೇರೇಪಿಸಿದವರು ಯಾರು?

ಹಣ ಎಸೆಯುವ ಮೂಲಕ ಭ್ರಷ್ಟಗೊಳಿಸಿ ವ್ಯವಸ್ಥೆಯನ್ನು ಲಾಭಕ್ಕೆ ಹೇಗೆ ಬಳಸಿಕೊಳ್ಳಬಹುದು ಎನ್ನುವುದಕ್ಕೆ ಯಡಿಯೂರಪ್ಪನವರ ಸರಕಾರಕ್ಕಿಂತ ಉತ್ತಮ ಉದಾಹರಣೆ ಸಿಗಲಿಕ್ಕಿಲ್ಲವೇನೋ. ಪತ್ರಿಕೆಗಳಿಗೆ ಕೋಟಿಗಟ್ಟಲೆಯ ಜಾಹೀರಾತುಗಳನ್ನು ನೀಡುತ್ತಾ ಅಯೋಗ್ಯ ಪತ್ರಕರ್ತರಿಗೂ ರಾಜ್ಯೋತ್ಸವ ಪ್ರಶಸ್ತಿಗಳ (ಒಂದು ಲಕ್ಷ ರೂಪಾಯಿ ಮತ್ತು ಐವತ್ತು ಸಾವಿರ ಬೆಲೆಯ ಚಿನ್ನ ಸಹಿತ!) ಲಂಚ ಒದ್ದುತ್ತಾ, ಮಠಗಳಿಗೆ ಕೋಟಿಗಟ್ಟಲೆ ಅನುದಾನಗಳ ಭಿಕ್ಷೆ ಎಸೆಯುತ್ತಾ ಇಡೀ ವ್ಯವಸ್ಥೆಯನ್ನು ಮತ್ತೆ ಸರಿಪಡಿಸಲಾಗದ ರೀತಿಯಲ್ಲಿ ಅವರು ಭ್ರಷ್ಟಗೊಳಿಸಿಬಿಟ್ಟರು. ಇದೇ ಫಲಾನುಭವಿಗಳು, ಯಡಿಯೂರಪ್ಪ ತಪ್ಪು ಮಾಡಿದಾಗ ಅವರ ತಪ್ಪುಗಳನ್ನು



ಎತ್ತಿ ತೋರಿಸುವ ಬದಲು ಅವರನ್ನು ಹಾಡಿಹೊಗಳುತ್ತ ಕೂತು ಅವರು ಹಳ್ಳಕ್ಕೆ ಬೀಳಲು ಕಾರಣವಾದದ್ದು ಈಗ ಇತಿಹಾಸ.

ಸಾಹಿತ್ಯ ವಲಯವನ್ನೂ ಯಡಿಯೂರಪ್ಪ ಬಿಡಲಿಲ್ಲ. ಅವರು ಗದಗದಲ್ಲಿ ನಡೆದ 76 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಗೀತಾ ನಾಗಭೂಷಣ ಅವರಿಗೆ 10 ಲಕ್ಷ ರೂಪಾಯಿಗಳ ಹಮ್ಮಿಣಿಯನ್ನು ನೀಡಿ ಸಾಹಿತ್ಯ ವಲಯದಲ್ಲಿ ಆಮಿಷಗಳ ಹೊಸದೊಂದು ಪರ್ವಕ್ಕೆ ನಾಂದಿ ಹಾಡಿದರು!

ನುಡಿಸಿರಿಯಂತೂ ಸಾಹಿತಿಗಳಿಗೆ ಹಣದ ಆಮಿಷ ವೊಡ್ಡುವ ಪರಂಪರೆಗೆ ಹೊಸದೊಂದು ಆಯಾಮವನ್ನೇ ನೀಡಿರುವುದು ನಿಜಕ್ಕೂ ಅಪಾಯಕಾರಿ ಬೆಳವಣಿಗೆ. ಸಾಲು ಮರದ ತಿಮ್ಮಕ್ಕನಂಥವರಿಗೋ, ಸುಕ್ರಿ ಬೊಮ್ಮಗೌಡಂಥ ವರಿಗೋ ಹಣ ನೀಡುವುದಕ್ಕಾದರೂ ಒಂದು ಅರ್ಥವಿದೆ. ಆದರೆ ಸಾಹಿತಿಗಳಾಗಿ ಲಕ್ಷಾಂತರ ರೂಪಾಯಿಗಳ ಪುರಸ್ಕಾರಗಳನ್ನು ಗಳಿಸಿದವರು, ಯುಜಿಸಿ ವೇತನ ಶ್ರೇಣಿಯಲ್ಲಿ ಉಪಕುಲಪತಿ, ಉಪನ್ಯಾಸಕ ಇತ್ಯಾದಿ ಹುದ್ದೆಗಳನ್ನು ಅಲಂಕರಿಸಿ ಲಕ್ಷಾಂತರದ ಸಂಬಳ ಪಡೆದವರು ಇವರಿಗೆಲ್ಲ ಹಣದ ಅಗತ್ಯವಾದರೂ ಏನಿದೆ? ಅವರಿಗೆಲ್ಲ ಸನ್ಮಾನ ಮಾಡಿ 50 ಸಾವಿರ, 25 ಸಾವಿರ ಹೀಗೆ ಹಣ ಎಸೆಯುವುದೆಂದರೆ ಅರ್ಥವೇನು? ಸಾಹಿತಿಗಳನ್ನೆಲ್ಲ ಹಣಕ್ಕೆ ಬಾಯಿ ಬಿಡುವಂತೆ ಮಾಡುವ ಇದು ಯಾವ ಮಾದರಿ?

ಹೀಗೆ ಹಣ ಪಡೆಯುವಾಗ ಈ ಹಣದ ಮೂಲ ಯಾವುದು ಎಂಬ ಪ್ರಶ್ನೆ ಈ 'ಕನ್ನಡದ ಕಟ್ಟಾಳುಗಳ' ಆತ್ಮಸಾಕ್ಷಿಯನ್ನು ಕೆಣಕಿದೆಯೇ?

ಆ ಹಣ ತನಗೆ ಅಗತ್ಯವಿಲ್ಲ, ಅದನ್ನು ಕನ್ನಡದ ಕೆಲಸಕ್ಕೆ ವಿನಿಯೋಗಿಸಿಕೊಳ್ಳಿ ಎಂದು ಇವರೆಲ್ಲ ಅದನ್ನು ಸೌಜನ್ಯಪೂರ್ವಕ ಮರಳಿಸಿದ್ದಾರೆಯೇ (ಹಾಗೆ ಮರಳಿಸಿದ್ದರೆ ಅದನ್ನು ಬಹಿರಂಗಪಡಿಸಿದರೆ ಚೆನ್ನಾಗಿರುತ್ತದೆ)? 'ಜನನುಡಿ'ಗೆ ಹಾಜರಾದವರು ಪ್ರಯಾಣ ವೆಚ್ಚವನ್ನೂ ಕೈಯಿಂದಲೇ ಹಾಕಿಕೊಂಡರು. ಇದು ನಿಜಕ್ಕೂ ನಾಡು ನುಡಿಯ ಕಾಳಜಿ. ಆದರೆ 'ಪ್ರಯಾಣ ವೆಚ್ಚವನ್ನೂ ನೀವೇ ಬಳಸಿಕೊಳ್ಳಿ' ಎಂದು ಹೇಳುತ್ತಿದ್ದರೆ ಎಷ್ಟು ಮಂದಿ ಈ 'ಕನ್ನಡದ ಸೇವಕರು' ನುಡಿಸಿರಿಯಲ್ಲಿ ಹಾಜರಿರುತ್ತಿದ್ದರು? ಹಣ ಶ್ರೀಮಂತಿಕೆಯ ಅಸಹ್ಯ ಪ್ರದರ್ಶನವನ್ನು ವಿರೋಧಿಸಿದ ಪ್ರಗತಿಪರರನ್ನು ಟೀಕಿಸಿದ ಮಹಾನ್ ಸಾಹಿತಿಗಳು ನುಡಿಸಿರಿಯಲ್ಲಿ ಹಣ ಹೇಗೆ ಕೆಟ್ಟ ಆಟ ಆಡಿದೆ ಮತ್ತು ಅದು ಕನ್ನಡ ಸಾಹಿ... ಕಾರ್ಯಕ್ರಮ ಆಯೋಜನೆಗಳ ದೃಷ್ಟಿಯಿಂದ ಎಷ್ಟೊಂದು ಕೆಟ್ಟ ಪರಂಪರೆ ಎಂಬ ಬಗ್ಗೆ ಆತ್ಮವಿಮರ್ಶೆ ಮಾಡಿಕೊಂಡಿದ್ದಾರೆಯೇ?

'ವಸಂತ ಕಾಲೇ ಕಾಕ ಕಾಕಃ, ಪಿಕ ಪಿಕಃ' ಎಂಬ ಸಂಸ್ಕೃತ ಉಕ್ತಿಯೊಂದಿದೆ. ಕಾಗೆ ಮತ್ತು ಕೋಗಿಲೆಗಳ ಭೇದವನ್ನು ಮೇಲ್ನೋಟಕ್ಕೆ ಗುರುತಿಸಲು ಸಾಧ್ಯವಾಗದಿದ್ದರೂ ವಸಂತಕಾಲ ಬಂದಾಗ ಯಾವುದು ಕಾಗೆ ಯಾವುದು ಕೋಗಿಲೆ ಎನ್ನುವುದನ್ನು ಸ್ಪಷ್ಟವಾಗಿಬಿಡುತ್ತದೆ. ಹಣದ ಮೋ... ಮತ್ತು ಸ್ಥಾನಮಾನದ ಎತ್ತರ ಏರುತ್ತಿದ್ದಂತೆ ಸಿದ್ಧಾಂತಗಳು ಮತ್ತು ಬದ್ಧತೆಗಳೆಲ್ಲ ಹೇಗೆ ಧರಾಶಾಯಿಯಾಗಿಬಿಡುತ್ತ... ಮತ್ತು ವೇದಿಕೆಯ ಮೇಲೆ ನಿಂತು ಜನಸಾಮಾನ್ಯರಿ... ಋಜುತ್ವ ಸಹಿತ ಉನ್ನತ ಜೀವನ ಮೌಲ್ಯಗಳ ಬಗ್ಗೆ ... ಕೊಡುವ ಸಾಹಿತಿಗಳೆಲ್ಲ ಹೇಗೆ ನೈತಿಕವಾಗಿ ಬೆತ್ತಲಾಗು... ತ್ತಾರೆ ಎನ್ನುವುದಕ್ಕೆ 'ಆಳ್ವಾಸ್' ವಿಶ್ವ ನುಡಿಸಿರಿ ವಿರಾಸತ್ ಒಂದು ಅತ್ಯುತ್ತಮ ಉದಾಹರಣೆ. ಖಂಡಿತವಾಗಿಯೂ ಕನ್ನಡ ಸಾಹಿತ್ಯ ಕ್ಷೇತ್ರದ ಮಟ್ಟಿಗೆ ಇದು ಒಳ್ಳೆಯ ಬೆಳವಣಿಗೆಯಲ್ಲ.

- ಶ್ರೀನಿವಾಸ ಕಾರ್ಕಳ, ಮಂಗಳೂರು

ಸಾಮಾಜಿಕ ಬಹಿಷ್ಕಾರವೆಂಬ ಅಂಟುರೋಗ

"ಅಸ್ಪೃಶ್ಯರ ವಿರುದ್ಧ ಸಾಮಾಜಿಕ ಬಹಿಷ್ಕಾರವೆನ್ನುವುದು ಹಿಂದೂ ಜನರ ಕೈಯಲ್ಲಿರುವ, ಯಾವ ಕ್ಷಣದಲ್ಲಾದರೂ ತಲೆಯನ್ನು ತುಂಡರಿಸಬಲ್ಲ ತೂಗಾಡುವ ಕತ್ತಿಯೆಂದು ಹೇಳಬಹುದು. ಈ ಅಸ್ತ್ರದ ಭಯಾನಕತೆ ಅದನ್ನು ಅನುಭವಿಸಿದ ಅಸ್ಪೃಶ್ಯರಿಗೆ ಮಾತ್ರವೇ ಗೊತ್ತು" ಈ ಮಾತು ಹೇಳಿದವರು ಸ್ವತಃ ಅಂಬೇಡ್ಕರರು. 1947 ರ ... ಜಾತಿವಾದಿಗಳ ಕುತಂತ್ರದಿಂದ ಸಂವಿಧಾನ ಸಭೆಯಿಂ... ಎಲ್ಲಿ ದೂರ ಉಳಿದುಬಿಡುತ್ತೇನೊ ಎಂಬ ಆತಂಕದ...

ಾಡಿನ ಸಾಹಿತ್ಯ ಸ್ಪಷ್ಟವಾಗಿ ಕೇಳಿಸು[illegible] ಹಾಡಬೇಕು

ಸಂದರ್ಶನ

ದುನಿಯಾ ಚಿತ್ರದ 'ಪ್ರೀತಿ ಮಾಯೆ ಹುಷಾರು' ಹಾಡನ್ನು ಹಾಡುವ ಮೂಲಕ ಚಿತ್ರರಂಗಕ್ಕೆ ಎಂಟ್ರಿಕೊಟ್ಟ ಗಾಯಕಿ ಆಕಾಂಕ್ಷ ಬಾದಾಮಿ ಇಲ್ಲಿಯವರೆಗೂ ಸುಮಾರು ಅರವತ್ತೈದು ಚಿತ್ರಗಳಿಗೆ ಗೀತೆಗಳನ್ನು ಹಾಡಿದ್ದಾರೆ. ಆಕಾಂಕ್ಷ ಬಾದಾಮಿ ಇಲ್ಲಿ ಮಾತಾಡಿದ್ದಾರೆ.



ನಿಮ್ಮ ಊರು, ಕುಟುಂಬ, ಶಿಕ್ಷಣ ಕುರಿತು ಹೇಳ್ತೀರಾ?

ನನ್ನೂರು ದಾವಣಗೆರೆ. ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ, ವಿಜಯ ...ಜಿನಲ್ಲಿ ಬಿ.ಕಾಂ ಮುಗಿಸಿದ್ದೇನೆ. ಮುಂದೆಯೂ ಓದನ್ನು ಮುಂದುವರಿಸುವಾಸೆ. ...ಕ್ಕೆ ಚಿಕ್ಕಂದಿನಿಂದಲೂ ಕಲಿಯುತ್ತಿದ್ದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ...ಯನ್ನು ಮುಂದುವರಿಸಿದ್ದೇನೆ.

ನಿಮ್ಮ ಮನೆಯಲ್ಲಿ ಯಾರಿಗಾದರೂ ಸಂಗೀತದ ಟಚ್ ಇತ್ತಾ?

ನನ್ನ ಮುತ್ತಾತನಿಂದಲೂ ಸಂಗೀತ ನಮ್ಮ ಕುಟುಂಬಕ್ಕೆ ಪಾರಂಪರಿಕವಾಗಿ ...ದೆ ಎಂದೇ ಹೇಳಬಹುದು. ನಮ್ಮ ಮುತ್ತಾತ ಚನ್ನಪ್ಪ ಬಾದಾಮಿಯವರು 1900ರಲ್ಲೇ ಹಿಂದೂಸ್ಥಾನಿ ಸಂಗೀತವನ್ನು ಅಭ್ಯಾಸ ಮಾಡಿದ್ದರಂತೆ. ... ತಾತ ನಂಜುಂಡಪ್ಪ ಬಾದಾಮಿಯವರು ಜಲತರಂಗ ನುಡಿಸುತ್ತಿದ್ದರಂತೆ. ...ನೆ, ನನ್ನ ತಾಯಿ ಬೀನಾ ಬಾದಾಮಿ ನನ್ನ ಮೊದಲ ಗುರುವಾದರೆ, ನನ್ನ ... ಚನ್ನಬಸವರಾಜ್ ಬಾದಾಮಿ ಕೂಡ ಸಂಗೀತದ ಕಡೆ ಒಲವಿದ್ದವರೇ ...ದ್ದರು. ಹಾಗಾಗಿ, ಚಿಕ್ಕಂದಿನಿಂದಲೇ ನನಗೆ ಸಹಜವಾಗಿ ಸಂಗೀತದತ್ತ ಆಸಕ್ತಿ ...ಕೊಂಡಿತು ಅನ್ನಬಹುದು.

ನಿಮ್ಮ ಆರಂಭಿಕ ಸಂಗೀತ ಗುರುಗಳು ಯಾರ‍್ಯಾರು?

ನನಗೆ ಮೂರು ವರ್ಷ ವಯಸ್ಸಿದ್ದಾಗ ನನ್ನ ತಾಯಿ ಮನೆಯಲ್ಲಿ ಸಂಗೀತ ... ನಡೆಸುತ್ತಿದ್ದರು. ಅಲ್ಲಿ ಬರುತ್ತಿದ್ದ ಮಕ್ಕಳಿಗೆ ಬೇರೆ ಬೇರೆ ಹಾಡುಗಳನ್ನು ...ಕೊಡುತ್ತಿದ್ದರು. ಆ ಹಾಡುಗಳು ಸಹಜವಾಗಿ ನನ್ನ ಕಿವಿಯ ಮೇಲೆ ... ನಾನೂ ಕೂಡ ಹಾಡಲು ಪ್ರಯತ್ನಿಸುತ್ತಿದ್ದೆನಂತೆ. ಅದನ್ನು ಗಮನಿಸಿದ ...ತಾಯಿ ನನಗೂ ಶರಣರ ವಚನಗಳು ಸೇರಿದಂತೆ ಒಂದಿಷ್ಟು ಹಾಡುಗಳನ್ನು ...ಕೊಡುತ್ತಿದ್ದರಂತೆ. ನಂತರ ಶಾಸ್ತ್ರೀಯವಾಗಿ ಕಲಿಯಲಿ ಅಂತ ನನ್ನನ್ನು ...ದ್ದು ಶ್ರೀ ರಾಧಾಕೃಷ್ಣ ಹಾಗೂ ವಿದುಷಿ ಸ್ನೇಹಾ ಹಂಪಿಹೊಳಿಯವರ ... ಅವರ ಬಳಿ ಒಂದಷ್ಟು ಕಾಲ ಅಭ್ಯಾಸ ಮಾಡಿದ ನಂತರ, ಶ್ರೀಮತಿ ...ಜುಳಾ ಗುರುರಾಜ್ ಅವರ ಸಾಧನ ಸ್ಕೂಲ್ ಸೇರಿಕೊಂಡೆ. ನಾನೂ ... ಚಲನಚಿತ್ರ ಹಿನ್ನೆಲೆಗಾಯಕಿಯಾಗಬೇಕು ಅನ್ನಿಸಿದ್ದು ಆಗಲೇ.

ನೀವು ಮೊದಲಿಗೆ ಯಾವುದಾದರೂ ಆಲ್ಬಮ್ ಹೊರತಂದಿದ್ರಾ?

ನನ್ನ ತಾಯಿ ಸಂಗೀತ ನೀಡಿರುವ ಅನೇಕ ಕ್ಯಾಸೆಟ್‌ಗಳಲ್ಲಿ ಹಾಡಿದ್ದೇನೆ. ಅವುಗಳಲ್ಲಿ ಮುಖ್ಯವಾಗಿ 'ವಚನ ಸಂಗಮ', 'ವಚನ ತೋರಣ', 'ಬಂತು ಬಂತು ಭಾನುವಾರ' ಆಲ್ಬಮ್‌ಗಳನ್ನೂ ಹೆಸರಿಸಬಹುದು. ಈ ಮೂರೂ ಸಿಡಿಗಳು ಲಹರಿ ಕಂಪನಿ ಮೂಲಕ ಹೊರಬಂದಿದ್ದವು.

ನೀವು ಹಾಡಿದ ಮೊದಲ ಚಿತ್ರಗೀತೆ ಯಾವುದು? ಆ ಚಾನ್ಸ್ ಸಿಕ್ಕಿದ್ದು ಹೇಗೆ?

ಒಂದು ದಿನ ವಿ.ಮನೋಹರ್ ಅವರು ಕಾಲ್ ಮಾಡಿ 'ಒಂದು ಹಾಡು ಹಾಡಬೇಕಿದೆ. ವಿಜಯ್ ಸ್ಟುಡಿಯೋಗೆ ಬಾ' ಅಂತ ಹೇಳಿದರು. ನಾನು ನನ್ನ ತಾಯಿಯೊಡನೆ ಚಾಮರಾಜಪೇಟೆಯ ವಿಜಯ್ ಸ್ಟುಡಿಯೋಗೆ ಹೋದೆ. ಮನೋಹರ್ ಅವರು ಮೊದಲು ಟ್ರ್ಯಾಕ್ ಕೇಳಿಸಿ ನಂತರ ಹಾಡಿಸಿದರು. ನಾನು ಹಾಡಿದ್ದನ್ನು ಇಷ್ಟಪಟ್ಟು ನನ್ನ ವಾಯ್ಸನ್ನೇ ಫೈನಲ್ ಮಾಡಿದರು. ಅವತ್ತು ನಾನು ಹಾಡಿದ ಹಾಡು ಯಾವುದೆಂದರೆ 'ದುನಿಯಾ' ಚಿತ್ರದ 'ಪ್ರೀತಿ ಮಾಯೆ ಹುಷಾರು... ಕಣ್ಣೀರ್ ಮಾರೋ ಬಜಾರು...' ಅವತ್ತು ಆ ಹಾಡನ್ನು ಹಾಡುವಾಗ ದುನಿಯಾ ವಿಜಯ್, ನಿರ್ಮಾಪಕರಾದ ಟಿ.ಪಿ.ಸಿದ್ಧರಾಜು ಹಾಗೂ ಅವರ ಧರ್ಮಪತ್ನಿಯರಾದ ಅಂಬುಜಾಕ್ಷಿಯವರೂ ಅಲ್ಲಿದ್ದರು ಎಂಬುದನ್ನು ಇಲ್ಲಿ ನೆನೆಯುತ್ತೇನೆ.

ನೀವು ಇಲ್ಲಿಯತನಕ ಯಾವ್ಯಾವ ಚಿತ್ರಗಳಿಗೆ ಹಾಡಿದ್ದೀರಾ?

ದುನಿಯಾ ಚಿತ್ರದ 'ಪ್ರೀತಿ ಮಾಯೆ ಹುಷಾರು' ಸೇರಿದಂತೆ, ಮೊಗ್ಗಿನ ಮನಸು ಚಿತ್ರದ 'ಯಾಕಿಂಗಾಡ್ತಾರೋ ಈ ಹುಡುಗರು', ಅಂತು ಇಂತೂ ಪ್ರೀತಿ ಬಂತು ಚಿತ್ರದ 'ಮೊದಲಾಸಲ', ವೀರ ಮದಕರಿ ಚಿತ್ರದ 'ಟ್ರೈಟು ಟ್ರೈಟು', ಆರಕ್ಷಕ ಚಿತ್ರದ 'ರಾತ್ರಿಯೆಲ್ಲ ನಿದ್ದೇನೆ ಇಲ್ಲ' ಸೇರಿದಂತೆ ಈವರೆಗೆ ಸುಮಾರು ಅರವತ್ತೈದು ಚಿತ್ರಗಳಿಗೆ ಹಾಡಿದ್ದೇನೆ.

ಒಂದು ಚಿತ್ರಗೀತೆಯನ್ನು ಹಾಡುವ ಮುನ್ನ ಒಬ್ಬ ಗಾಯಕಿಯಾಗಿ ಹೇಗೆ ತಾಯಾರಿ ನಡೆಸಿಕೊಳ್ತೀರಾ?

ಮೊದಲು ಹಾಡಿನ ಸಾಹಿತ್ಯದ ಭಾವ ಹಾಗೂ ಸಂಗೀತದ ಫೀಲ್ ತಲೆಯಲ್ಲಿಟ್ಟುಕೊಂಡು, ಚಿತ್ರದಲ್ಲಿನ ಹಾಡಿನ ಸನ್ನಿವೇಶಕ್ಕೆ ಪೂರಕವಾಗಿ ಹಾಡುತ್ತೇನೆ. ತೆರೆಯ ಮೇಲೆ ನೋಡಿದಾಗ ಸ್ವತಃ ಪಾತ್ರವೇ ಹಾಡುತ್ತಿದೆ ಎನ್ನಿಸುವಂತೆ ಹಾಡಲು ಪ್ರಯತ್ನಿಸುತ್ತೇನೆ. ಟ್ಯೂನ್, ಪಿಚ್, ಸ್ಕೇಲ್, ಫೀಲ್ ಜೊತೆಗೆ ಸಾಹಿತ್ಯ ಸ್ಪಷ್ಟವಾಗಿ ಕೇಳಿಸುವಂತೆ ಹಾಡಬಯಸುತ್ತೇನೆ. ನಾನೆಷ್ಟೇ ಫೀಲ್ ಕೊಟ್ಟು ಹಾಡಿದರೂ ಸಾಹಿತ್ಯ ಸ್ಪಷ್ಟವಾಗಿ ಕೇಳಿಸದೇ ಹೋದಪಕ್ಷದಲ್ಲಿ ಜನ ಸಾಲುಗಳನ್ನು ಗುನುಗಿಕೊಳ್ಳಲು ಕಷ್ಟವಾಗುತ್ತದೆ. ಆಗ ಹಾಡು ರೀಚ್ ಆಗುವುದಿಲ್ಲ. ಫೈನಲಿ ಹಾಡೇನು ಪ್ರಯೋಜನ ಹೇಳಿ?

ನಿಮ್ಮ ನೆಚ್ಚಿನ ಗಾಯಕ/ಗಾಯಕಿಯರು ಯಾರ‍್ಯಾರು? ಯಾಕೆ?

ಎಸ್.ಜಾನಕಿ, ಚಿತ್ರ, ಶ್ರೇಯಾ ಘೋಶಾಲ್ ಅವರ ಹಾಡುಗಾರಿಕೆ ನನಗಿಷ್ಟ. ಇವರ ಮಾಧುರ್ಯ, ಧ್ವನಿಯಲ್ಲಿನ ಆರ್ದ್ರತೆ ನೇರವಾಗಿ ಹೃದಯಕ್ಕೆ ತಟ್ಟುತ್ತದೆ. ಗಾಯಕರ ಪೈಕಿ ಎಸ್.ಪಿ.ಬಾಲಸುಬ್ರಹ್ಮಣ್ಯಂ ದಿ ಮೋಸ್ಟ್ ವರ್ಸಟೈಲ್ ಸಿಂಗರ್.

ನಿಮ್ಮ ಮುಂಬರುವ ಚಿತ್ರಗಳು ಯಾವ್ಯಾವು?

'ಬ್ರಹ್ಮ', 'ರೆಬೆಲ್', 'ಕಾಲಭೈರವ', 'ದೋಸ್ತಿ', 'ಛತ್ರಪತಿ', 'ರೇಸ್', 'ನಗೆ ಬಾಂಬ್', 'ಅಂಜದ ಗಂಡು' ಇತ್ಯಾದಿ...



ಸಂದರ್ಶಕ: ಹೃದಯಶಿವ

...ಡ್ಕರರು ರಾಜ್ಯಾಂಗ ರಚನೆಗೆ ಶಿಫಾರಸ್ಸು ಮಾಡಿ ...ದ್ದ 'ರಾಜ್ಯ ಮತ್ತು ಅಲ್ಪಸಂಖ್ಯಾತರು' ಎಂಬ ವಿಜ್ಞಾಪನಾ ...ಲ್ಲಿ ಈ ಮೇಲಿನ ಮಾತನ್ನು ಹೇಳಿದ್ದಾರೆ. ಅವರ ...ರ ಸಾಮಾಜಿಕ ಬಹಿಷ್ಕಾರವೇನು ಅತಿ ಕಡಿಮೆ ...ಧವಾಗಿರಲಿಲ್ಲ. ಅದಕ್ಕೆ ಕಾರಣವೂ ಇತ್ತು.

...ಹುತೇಕ ದಲಿತರಿಗೆ ಬಹಿಷ್ಕಾರ ಹಾಕುವುದೇ ...ಳಲ್ಲಿ. ಈ ದೇಶದ ಸಾಂಪ್ರದಾಯಿಕ ಸಂವಿಧಾನಗಳಾದ ...ಗಳ ವಿರುದ್ಧವಾಗಿ ಹೊರಟು ವಿುಕ್ತವರಂತೆ ...ವರಾಗಲು ಬಯಸುವ, ಬದಲಾವಣೆ ಬಯಸುವ ...ಬ್ಬ ದಲಿತನ ಮೇಲೂ ಈ ನೆಲದಲ್ಲಿ ದೌರ್ಜನ್ಯಗಳು ...ವೆ. ಆ ದೌರ್ಜನ್ಯಗಳಲ್ಲಿ ಕೊಲೆ, ಅತ್ಯಾಚಾರ, ...ಹಿಕ ಥಳಿತ, ಸಾಮೂಹಿಕ ಅತ್ಯಾಚಾರ, ಮನೆಗಳಿಗೆ ... ಇತ್ಯಾದಿಗಳು ನಡೆಯುತ್ತವೆ. ಸರ್ಕಾರವೇ ...ಳ್ಳುವಂತೆ ದಿನಕ್ಕೆ ಮೂವರು ದಲಿತರ ಕೊಲೆ, ...ವರು ದಲಿತ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ, ... ಮನೆಗಳನ್ನು ಭಸ್ಮ ಮಾಡಲಾಗುತ್ತಿದೆ. ಇದು



ನಮ್ಮ ದೇಶದ ದಲಿತರ ನೈಜ ಸ್ಥಿತಿ.

ಇದನ್ನು ಹೊರತುಪಡಿಸಿ ಸಾಮಾಜಿಕ ಬಹಿಷ್ಕಾರ ಎಗ್ಗಿಲ್ಲದೆ ನಡೆಯುತ್ತಿದೆ. ಆದರೂ ನಮ್ಮ ಸರ್ಕಾರ ರೂಪಿಸಿರುವ 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲೆ ದೌರ್ಜನ್ಯ ತಡೆ ಕಾಯಿದೆ'ಯು ಸಾಮಾಜಿಕ ಬಹಿಷ್ಕಾರವನ್ನು ಒಂದು ಅಪರಾಧವೆಂದೇ ಪರಿಗಣಿಸಿಲ್ಲ. ಆದರೆ ಮೇಲಿನ ಎಲ್ಲಾ ಕೃತ್ಯಗಳಿಗೆ ಸರಿಸಮಾನವಾದ ಅಪರಾಧ ಈ ಬಹಿಷ್ಕಾರವಾಗಿದೆ. ಹಳ್ಳಿಗಳಲ್ಲಿ ಸವರ್ಣೀಯರು ದಲಿತರನ್ನು ಗುಲಾಮರನ್ನಾಗಿಸಿಕೊಳ್ಳಲು ಈ ಅಸ್ತ್ರವನ್ನು ಸತತವಾಗಿ ಉಪಯೋಗಿಸುತ್ತಿದ್ದಾರೆ. ಕರ್ನಾಟಕದಲ್ಲಿಯೇ ಇಂತಹ ಪ್ರಕರಣಗಳು ಹಲವಾರು ನಡೆದಿವೆ.

ಇತ್ತೀಚೆಗೆ ಹಿರಿಯೂರಿನ ಶಿವಪುರದಲ್ಲಿ ದಲಿತರಿಗೆ ವಿಧಿಸಿದ್ದ ಬಹಿಷ್ಕಾರವು 100 ದಿನ ಕಳೆದರೂ ಜಾರಿಯಲ್ಲಿಯೇ ಇತ್ತು. ಹಲವು ದಲಿತ ಸಂಘಟನೆಗಳು ಎಷ್ಟೇ ಹೋರಾಟ ನಡೆಸಿದರೂ ದಲಿತರಿಗೆ ನ್ಯಾಯ ಸಿಗಲಿಲ್ಲ. ಪ್ರಜಾಪ್ರಭುತ್ವದಲ್ಲಿ ಸರ್ವರೂ ಸಮಾನರಾಗಿರುವಾಗ, ಪ್ರತಿಯೊಬ್ಬನಿಗು ಬದುಕುವ ಹಕ್ಕನ್ನು ಒದಗಿಸಿರುವಾಗ, ಇದನ್ನು ಸಾಕಾರಗೊಳಿಸಲು ಸರ್ಕಾರಗಳಿರುವಾಗ, ಸಂವಿಧಾನವನ್ನು ಕಾಪಾಡುವ ನ್ಯಾಯಾಲಯಗಳಿರುವಾಗ ಸವರ್ಣೀಯರ ದರ್ಪದ ವಿರುದ್ಧ ಅವೆಲ್ಲವೂ ಮಂಕಾಗಿ ಹೋಗಿದ್ದು ಪ್ರಜಾಪ್ರಭುತ್ವದ ದುರಂತ.

ಸ್ವತಂತ್ರ ಪೂರ್ವದಲ್ಲಿ ತುಪ್ಪ ತಿಂದಿದ್ದಕ್ಕಾಗಿ, ಲೋಹದ ಪಾತ್ರೆಗಳನ್ನು ಬಳಸಿದ್ದಕ್ಕಾಗಿ, ದುದುಮಗನನ್ನು ಕುದುರೆ ಸವಾರಿ ಮಾಡಿದ್ದಕ್ಕಾಗಿ, ಸಾರ್ವಜನಿಕ ಬಾವಿಯಲ್ಲಿ ಬಿದ್ದ ಕರುವನ್ನು ರಕ್ಷಿಸಿದ್ದಕ್ಕಾಗಿ, ಅನ್ನ ಕೇಳಿದ್ದಕ್ಕಾಗಿ, ಕೂಲಿ ಕೇಳಿದ್ದಕ್ಕಾಗಿ ಇನ್ನೂ ಮುಂತಾದ [illegible]ಕ್ಕಾಗಿ ದಲಿತರ ಮೇಲೆ ಸವರ್ಣೀಯರು ದೌರ್ಜನ್ಯ ಮಾಡಿದ್ದಾರೆ. ಸ್ವತಂತ್ರ ನಂತರದಲ್ಲಿ ಅಸ್ಪೃಶ್ಯತೆಯನ್ನು ನಿಷೇಧಿಸಿದ ಮೇಲೂ ಇಂತಹ ಪ್ರಕರಣಗಳು ಮರುಕಳಿಸಿವೆ.

ತೀರ ಇತ್ತೀಚೆಗೆ ನಮ್ಮ ಕರ್ನಾಟಕದ ಸಾಲಿಗ್ರಾಮದಲ್ಲಿ ತನ್ನ ಹೊಲವನ್ನು ಮೇಯಿಸಿದ್ದನ್ನು ಪ್ರಶ್ನಿಸಿದ್ದಕ್ಕಾಗಿ, ಮಂಡ್ಯದ ಕಸುವನಹಳ್ಳಿಯಲ್ಲಿ ಗಣೇಶ ವಿಸರ್ಜನೆಯ ಮೆರವಣಿಗೆಯ ವೇಳೆ ಡೋಲು ಬಡಿಯಲು ಹಣ ಕೇಳಿದ್ದಕ್ಕಾಗಿ, ಮಳವಳ್ಳಿಯ ಹುಸ್ಕೂರಿನಲ್ಲಿ ಸವರ್ಣೀಯನನ್ನು 'ಲೋ' ಎಂದಿದ್ದಕ್ಕಾಗಿ, ಬಿಜಾಪುರದ ಹಳ್ಳಿಯಲ್ಲಿ ಸಗಣಿ ಬಾಚಲಾರೆವು ಎಂದಿದ್ದಕ್ಕಾಗಿ ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರದ ಜೊತೆಗೆ ದೈಹಿಕ ಹಲ್ಲೆಗಳು ನಡೆದಿವೆ. ಈ ಪಟ್ಟಿಗೆ ಇತ್ತೀಚೆಗೆ ಬಾಗಲಕೋಟೆಯ ಗದ್ಯಾಳ ಸೇರಿಕೊಂಡಿದೆ.

ಅಲ್ಲಿನ ಸವರ್ಣೀಯರು ಇದು ಬಹಿಷ್ಕಾರ ಅಲ್ಲ ಕೇವಲ ಮನಸ್ತಾಪ ಎನ್ನುತ್ತಿದ್ದಾರೆ. ಆದರೆ ಹಿಂದೊಮ್ಮೆ ಅಂಬೇಡ್ಕರರ ಭಾವಚಿತ್ರಕ್ಕೆ ಅವಮಾನ ಯಾಕೆ ಮಾಡಿದರೋ ತಿಳಿಯದು. ನಮ್ಮ ಅಧಿಕಾರಿಗಳಿಗೆ ಇದೂ ಸಹ ಹೊಳೆಯುವುದಿಲ್ಲ. ಇರಲಿ. ದಲಿತರ ಮೇಲೆ ಸವರ್ಣೀಯರ ಹಿಡಿತ ಎಷ್ಟಿದೆಯೆಂದರೆ ತಮಿಳು ನಾಡಿನಲ್ಲಿ ದಲಿತರು ಗಂಡು ನಾಯಿಗಳನ್ನು ಸಾಕುವಂತಿಲ್ಲವೆಂದು ಪಂಚಾಯಿತಿಯೊಂದು ಆಜ್ಞೆ ಕೊಡಿಸಿತ್ತಂತೆ. ಸವರ್ಣೀಯರ ಹೆಣ್ಣು ನಾಯಿಗಳೊಂದಿಗೆ ಬೆರೆತು ಜಾತಿ ಸಂಕರ ಉಂಟು ಮಾಡುತ್ತವೆಂಬ ಭಯ!

ಇತ್ತೀಚೆಗೆ ದಲಿತರ ಮೇಲೆ ಬಹಿಷ್ಕಾರಗಳು ಹೆಚ್ಚಾಗುತ್ತಿವೆ. ಮಾನವೀಯತೆಯನ್ನು ಮರೆತು ನಾವೆಲ್ಲರೂ ಅವುಗಳನ್ನು ಕೇವಲ ಅಪಘಾತಗಳಂತೆ ನೋಡಿ ಸುಮ್ಮನಾಗಿ ಬಿಡುತ್ತಿದ್ದೇವೆ. ದಲಿತರನ್ನು ಬಹಿಷ್ಕರಿಸುವುದು ನಮ್ಮ ಸಂಸ್ಕೃತಿಯ ಒಂದು ಭಾಗವೇ ಆಗಿಹೋಗಿದೆ. ಅವರನ್ನು ದೂರವಿಟ್ಟರೆ, ಗುಲಾಮರನ್ನಾಗಿ ಮಾಡಿಕೊಂಡರೆ ನಮ್ಮ ಶಾಸ್ತ್ರ ಸಂಪ್ರದಾಯಗಳನ್ನು ಸಾಕಿ ಸಲಹಿದಂತೆ ಎಂಬುದನ್ನು ಬಹಳಷ್ಟು ಸವರ್ಣೀಯರು ಹೆಮ್ಮೆಯಿಂದ ಒಪ್ಪಿಕೊಳ್ಳುತ್ತಾರೆ. ಆದ್ದರಿಂದಲೇ ಮಡೆಮಡೆಸ್ನಾನದಂತಹ ಅಮಾನವೀಯ ಕೃತ್ಯಗಳು ಅವರಿಗೆ ಸಂಪ್ರದಾಯಗಳಂತೆ ಮಾತ್ರ ಕಾಣುತ್ತವೆ. ದಲಿತರು ತಮ್ಮ ಮಾತುಗಳನ್ನು ಕೇಳದಿದ್ದರೆ ಅಂತಹವರ ವಿರುದ್ಧ ಸಾಮಾಜಿಕ ಬಹಿಷ್ಕಾರವನ್ನು ಹಾಕಿ ಮಾನಸಿಕ ಹಿಂಸೆ ನೀಡಿ, ಬೆದರಿಕೆಯೊಡ್ಡಿ ಮತ್ತೆ ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳುತ್ತದೆ ಹಳ್ಳಿಗಳಲ್ಲಿನ ಮೇಲ್ವರ್ಗ. ಇಂತಹವರ ಸಾಲಿನಿಂದ ಹಿಂದೊಮ್ಮೆ ಇದೇ ರೀತಿ ಪರಿಸ್ಥಿತಿಗಳನ್ನು ಅನುಭವಿಸಿದ ಶೂದ್ರ ಜಾತಿಗಳು ಸಹ ಹೊರತಾಗಿಲ್ಲ. ಬ್ರಾಹ್ಮಣಶಾಹಿ ಬಲೆಯಲ್ಲಿ ಬಿದ್ದು ಶೂದ್ರ ಪ್ರತಿ ಸಂಸ್ಕೃತಿಯನ್ನೆ ಮರೆತಿವೆ. ದಲಿತರ ಮೇಲೆ ದೌರ್ಜನ್ಯವನ್ನು ಎಸಗುತ್ತಿವೆ. ಇತ್ತೀಚೆಗೆ ಆರ್ಥಿಕವಾಗಿ ಬಲಾಢ್ಯರಾಗಿರುವ ದಲಿತರದೂ ಇದೇ ಸ್ಥಿತಿ.


ನಮ್ಮ ಸಂವಿಧಾನವು ಇಂತಹ ನೀಚ ಪದ್ಧತಿಗಳನ್ನು ನಿಷೇಧಿಸಿದೆಯಾದರು ಅವುಗಳನ್ನು ನಿರ್ನಾಮ ಮಾಡುವಲ್ಲಿ ನಮ್ಮ ಸರ್ಕಾರಗಳು ಸೋತುಸುಣ್ಣವಾಗಿವೆ. ದಲಿತರ ಮೇಲಿನ ದೌರ್ಜನ್ಯವನ್ನು ತಡೆಯುವಲ್ಲಿ ವಿಫಲವಾಗಿವೆ. ಅದಕ್ಕಾಗಿ ಸದ್ಯಕ್ಕಿರುವ ಪ.ಜಾ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ 1989ನ್ನು ತುರ್ತಾಗಿ ತಿದ್ದುಪಡಿ ಮಾಡಿ ಬಲಿಷ್ಠಗೊಳಿಸಬೇಕಿದೆ. ಅದರಲ್ಲಿ ಸಾಮಾಜಿಕ ಬಹಿಷ್ಕಾರವನ್ನು ಅಪರಾಧದ ಪಟ್ಟಿಯಲ್ಲಿ ಸೇರಿಸಬೇಕಿದೆ. ಇಲ್ಲವಾದರೆ ಅಂಬೇಡ್ಕರರೆ ಸಂವಿಧಾನ ಜಾರಿಯಾದ ದಿನದಂದು ಹೇಳಿರುವಂತೆ "ಒಂದು ವೇಳೆ ನಾವು ಸಮಾನತೆಯನ್ನು ಬಹಳ ಕಾಲದವರೆಗೆ ಅಲ್ಲಗಳೆದಿದ್ದೇ ಆದರೆ ರಾಜಕೀಯವಾಗಿ ನಮಗೆ ದೊರಕಿರುವ ಪ್ರಜಾಪ್ರಭುತ್ವದ ನಾಶಕ್ಕೆ ನಾವೇ ಕಾರಣರಾಗುತ್ತೇವೆ. ಆದಷ್ಟೂ ಶೀಘ್ರಗತಿಯಲ್ಲಿ ಈ ವೈರುಧ್ಯಗಳನ್ನು ನಿವಾರಿಸಬೇಕು. ಇಲ್ಲವಾದರೆ ಈ ಶಾಸನ ಸಭೆಯು ಅತ್ಯಂತ ಪರಿಶ್ರಮದಿಂದ ನಿರ್ಮಿಸಿದ ರಾಜಕೀಯ ಪ್ರಜಾಪ್ರಭುತ್ವದ ಚೌಕಟ್ಟನ್ನು ಅಸಮಾನತೆಯಿಂದ ಬಳಲುತ್ತಿರುವ ಶೋಷಿತರು ಧ್ವಂಸ ಮಾಡಿಬಿಟ್ಟಾರು."

- ವಿ.ಆರ್.ಮೌರ್ಯ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಇ-ಮೇಲ್ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು

Registered No.KA/RNP/BGS/2036/2011-13 Posted at : GPO, Bangalore-01. Friday

ನಿಖಿತಾ ಗಂಡ ಸಾಫ್ಟ್‌ವೇರ್ ...ಗ್ಗಿ



'ಸಾಫ್ಟ್ ವೇರ್ ... ಚಿತ್ರದಲ್ಲಿ ಜಗ್ಗೇಶ್ ಇದುವರೆಗೂ ತಾ... ಒಂದು ವಿಭಿನ್ನಪಾತ್ರದಲ್ಲಿ ಕಾಣಿಸಿಕೊಳ್ಳ...ನವರಿ ಮೂರರಿಂದ ರಾಕ್‌ಲೈನ್ ಸ್ಟುಡಿಯೋದಲ್ಲಿ ...ರುವ ಅದ್ದೂರಿ ಸಾಫ್ಟ್ ವೇರ್ ಕಂಪನಿ ಸೆಟ್‌ನಲ್ಲಿ ಚಿತ್ರೀಕರಣ ಶುರುವಾಗಲಿದೆ. ಮೂವತ್ತೈದು ದಿನಗಳ ಶೆಡ್ಯೂಲ್‌ನಲ್ಲಿ ಬೆಂಗಳೂರು, ಹೈದರಾಬಾದ್, ತೀರ್ಥಹಳ್ಳಿ, ಮಂಗಳೂರು ಮತ್ತು ಉಡುಪಿಯ ಸೆಂಟ್ ಮೇರೀಸ್ ಬೀಚ್‌ಗಳಲ್ಲಿ ಚಿತ್ರೀಕರಣ ನಡೆಯಲಿದೆ. 'ಶ್ರೀ ಮಾರಿಕಾಂಬ ಫಿಲಂಸ್' ಲಾಂಛನದಡಿ ಎ.ರಾಮಪ್ಪ, ಬಿ.ವಿ.ವೆಂಕಟೇಶ್ ಹಾಗೂ ಕೆ.ಸಂಪತ್ ಕುಮಾರ್ ನಿರ್ಮಿಸುತ್ತಿರುವ ಈ ಚಿತ್ರವನ್ನು v^3 (ವಿ ಕ್ಯೂಬ್) ಎಂಬ ವಿಶಿಷ್ಟ ಹೆಸರನ್ನು ಹೊಂದಿರುವವರು ನಿರ್ದೇಶಿಸುತ್ತಿದ್ದಾರೆ.

ಈ ಹಿಂದೆ ವಿ. ಸೋಮಶೇಖರ್, ಜೋ ಸೈಮನ್, ಬಿ.ರಾಮಮೂರ್ತಿ, ಜಿ.ಕೆ.ಮುದ್ದುರಾಜ್ ಹಾಗೂ ತಿಪಟೂರು ರಘು ಅವರೊಂದಿಗೆ ಕೆಲಸ ಮಾಡಿ ಪಳಗಿರುವ ನಿರ್ದೇಶಕರಿಗೆ 'ಸಾಫ್ಟ್ ವೇರ್ ಗಂಡ' ಸ್ವತಂತ್ರ ನಿರ್ದೇಶಕರಾಗಿ ಚೊಚ್ಚಲ ಚಿತ್ರ. ಈ ಚಿತ್ರದಲ್ಲಿ ಜಗ್ಗೇಶ್ ಅವರ ಜೋಡಿಯಾಗಿ ನಿಖಿತಾ ಅಭಿನಯಿಸುತ್ತಿದ್ದು, ನವೀನ್ ಡಿ ಪಡೀಲ್, ಜಯಪ್ರಕಾಶ್ ಶೆಟ್ಟಿ (ಸಮಯ ಟಿವಿ) ಮತ್ತು ಸಾಕ್ಷಿ ಅಗರವಾಲ್ ಇತರ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸಂಗೀತ ವೀರಸಮರ್ಥ್, ಸಂಕಲನ ಎಸ್.ಮನೋಹರ್ ಹಾಗೂ ಛಾಯಾಗ್ರಹಣದ ಹೊಣೆ ನಾಗೇಶ್ ಆಚಾರ್ಯ ಅವರದು.



ಸಾಗರ್ ಥಿಯೇಟರ್ ಪುನರಾರಂಭ

'ಮೈನಾ' ಚಿತ್ರ ಭರ್ಜರಿಯಾಗಿ ನೂರು ದಿನ ಪೂರೈಸಿದ ನಂತರ ಬೇರಾವುದೇ ಚಿತ್ರವನ್ನು ಪ್ರದರ್ಶಿಸಲು ಮುಂದಾಗದ 'ಸಾಗರ್' ಚಿತ್ರಮಂದಿರದ ಮಾಲೀಕರು ಕಳೆದ ಐದು ತಿಂಗಳಿಂದ ಆ ಚಿತ್ರಮಂದಿರವನ್ನು ಮುಚ್ಚಿದ್ದರು. ಆದರೀಗ ಪುನೀತ್ ರಾಜಕುಮಾರ್ ಅಭಿನಯದ 'ನಿನ್ನಿಂದಲೇ' ಚಿತ್ರದ ಮೂಲಕ ಮತ್ತೆ ಸಿನಿಮಾ ಪ್ರದರ್ಶಿಸಲು ಸಜ್ಜಾಗಿದ್ದಾರೆ.

ಕೆಂಪೇಗೌಡ ರಸ್ತೆಯಲ್ಲಿರುವ 'ಸಾಗರ್' ಚಿತ್ರಮಂದಿರವನ್ನು ಕೆಡವಿ ಆ ಜಾಗದಲ್ಲಿ ಮಲ್ಟಿಪ್ಲೆಕ್ಸ್ ಚಿತ್ರಮಂದಿರವನ್ನು ನಿರ್ಮಿಸುವ ಉದ್ದೇಶ ಅದರ ಮಾಲೀಕರದ್ದಾಗಿತ್ತು, ಆದರೆ ಅದು ಸಾಧ್ಯವಾಗುತ್ತಿಲ್ಲ, ಅದಕ್ಕೆ ಕಾರಣ 'ನಮ್ಮ ಮೆಟ್ರೋ' ರೈಲು. ಹೌದು, ಮೆಜೆಸ್ಟಿಕ್ ಹಾಗೂ ಗಾಂಧಿನಗರಗಳಲ್ಲಿ ನಡೆಯಲಿರುವ ಮೆಟ್ರೋ ಕಾಮಗಾರಿಗೆ ಸಾಗರ್ ಟಾಕೀಸಿರುವ ಜಾಗದಲ್ಲಿ ನಿರ್ಮಿಸಬಹುದಾದ ಮಲ್ಟಿಪ್ಲೆಕ್ಸ್ ಕಟ್ಟಡದ ಅಂಡರ್ ಗ್ರೌಂಡ್ ಕಾರ್ ಪಾರ್ಕಿಂಗ್ ಯೋಜನೆ ಅಡ್ಡಿಯುಂಟುಮಾಡುತ್ತದೆಯಂತೆ. ಹಾಗಾಗಿ, ಸಾಗರ್ ಟಾಕೀಸ್ ಒಡೆದು ಮಲ್ಟಿಪ್ಲೆಕ್ಸ್ ಕಟ್ಟಡ ಕಟ್ಟಲು ಪರವಾನಗಿ ಸಿಗುತ್ತಿಲ್ಲ, ಈ ಹಿನ್ನೆಲೆಯಲ್ಲಿ ಸಾಗರ್ ಟಾಕೀಸಿನ ಮಾಲೀಕರು ಚಿತ್ರಮಂದಿರವನ್ನು ಮತ್ತಷ್ಟು ಸುಸಜ್ಜಿತವಾಗಿ ಚಂದಗೊಳಿಸಿ 'ನಿನ್ನಿಂದಲೇ' ಚಿತ್ರವನ್ನು ಪ್ರದರ್ಶಿಸಲು ನಿರ್ಧರಿಸಿದ್ದಾರೆ. ಈ ಮೂಲಕ 'ಸಾಗರ್' ಥಿಯೇಟರ್‌ನಲ್ಲಿ ಮೊದಲಿನಂತೆ ಜಾತ್ರೆಯ ವಾತಾವರಣ ನಿರ್ಮಾಣವಾಗಿ ಕೆ.ಜಿ.ರಸ್ತೆಗೆ ಮತ್ತೆ ಕಳೆ ಬರಲಿದೆ!

ಮೆಲೋಡಿ ಹೀರೋ ರಾಜೇಶ್

'ಗಾಳಿಪಟ' ಚಿತ್ರದ ಮೂಲಕ ನಟನಾಗಿ ಗಮನ ಸೆಳೆದ ಪ್ರ... ಗಾಯಕ ರಾಜೇಶ್ ಕೃಷ್ಣ ಈಗ ಮತ್ತೊಂದು ಚಿತ್ರದಲ್ಲಿ ನಾಯಕನಟ... ಅಭಿನಯಿಸಲಿದ್ದಾರೆ. ಲೇಖಕ ಕೆ.ನಂಜುಂಡ ನಿರ್ದೇಶನದ ಈ ಚಿತ್ರ ಜನವರಿ... ಶುರುವಾಗಲಿದ್ದು ಚಿತ್ರಕ್ಕೆ 'ಮೆಲೋಡಿ' ಎಂದು ಹೆಸರಿಡಲಾಗಿದೆ. ತ್ರಿಕೋ... ಪ್ರೇಮಕಥೆಯುಳ್ಳ 'ಮೆಲೋಡಿ'ಗೆ ಹಾಡುಗಳನ್ನು ಹೊಸೆಯುವುದರಲ್ಲಿ ಸಂಗೀ... ನಿರ್ದೇಶಕ ಎಲ್.ಎನ್.ಶಾಸ್ತ್ರಿ ಈಗಾಗಲೇ ತೊಡಗಿದ್ದಾರೆ.



ರಾಜೇಶ್ ಕೃಷ್ಣ ಅವರ ಜೊ... ರಾಕೇಶ್ ಅಡಿಗ ಮತ್ತೊಂ... ಪ್ರಮುಖ ಪಾತ್ರದಲ್ಲಿ ನಟ...ತ್ತಿದ್ದಾರೆ. ನಾಯಕಿ ಪಾತ್ರ... ಮಲಯಾಳಂ ನಟಿಯೊ... ಶೋಧಕಾರ್ಯ ಜರು...ತ್ತಿದೆ. ಈ ಚಿತ್ರದ ಮೂ... ಬಿಸಿನೆಸ್‌ಮನ್ ಕೃಷ್ಣಮೂ... ನಿರ್ಮಾಪಕರಾಗುತ್ತಿದ್ದಾ... ನಿರ್ದೇಶಕ ಕೆ.ನಂಜುಂಡ ಅವರ... ಕಥೆ, ಚಿತ್ರಕಥೆ, ಸಂಭಾಷಣೆ ಇದೆ. ... ಚಿತ್ರಗಳಿಗೆ ಸಂಭಾಷಣೆ ಬರೆದು ಹೆ... ಮಾಡಿರುವ ಕೆ. ನಂಜುಂಡ ಅವರು ... ಮೊದಲು ಪ್ರಕಾಶ್ ರೈ ಲೀ... ರೋಲ್‌ನಲ್ಲಿ ಅಭಿನಯಿಸಿದ್ದ 'ಕನಸ... ನೀನೆ ಮನಸಲೂ ನೀನೆ' ಎ... ಚಿತ್ರವನ್ನು ನಿರ್ದೇಶಿಸಿದ್ದರು.

ಕಂಗನಾ ಕಿ ಬಾತ್




ಕಂಗನಾ ರನೌತ್ ಅಭಿನಯಿಸಿರುವ 'ಕ್ವೀನ್' ಚಿತ್ರದ ಟ್ರೇಲರ್‌ಗಳು ಬಿಡುಗಡೆಯಾಗಿವೆ. ಟ್ರೇಲರ್‌ನಲ್ಲಿ ಕಂಗಾನ ಪರ್ಫಾರ್ಮೆನ್ಸ್ ಕಂಡ ಅಭಿಮಾನಿಗಳು ಈಗಾಗಲೇ ಮೆಚ್ಚುಗೆ ವ್ಯಕ್ತ ಪಡಿಸಿದ್ದು ಚಿತ್ರದ ಬಿಡುಗಡೆಗಾಗಿ ಕಾಯುತ್ತಿದ್ದಾರೆ. ಪಟ್ಟಣ ಪ್ರದೇಶದ ಬದುಕನ್ನು ಕಟ್ಟಿಕೊಡುವಂಥ ಕಥೆಯುಳ್ಳ 'ಕ್ವೀನ್' ಚಿತ್ರದಲ್ಲಿನ ಪಾತ್ರ ಕಂಗನಾ ಬದುಕಿಗೆ ತೀರಾ ಹತ್ತಿರದ್ದಂತೆ. ಈ ಕಾರಣ ದಿಂದಾಗಿಯೇ ಈ ಚಿತ್ರಕ್ಕೆ ಕಂಗನಾ ಸಂಭಾಷಣೆಯನ್ನೂ ಬರೆದಿದ್ದಾಳೆ ಎಂದರೆ ನಿಮಗೆ ಶಾಕ್ ಆಗಬಹುದು. ಕಂಗಾನ ಬರೆದಿರುವ ಸಂಭಾಷಣೆಯನ್ನು 'ಕ್ವೀನ್'ನ ನಿರ್ದೇಶಕ ವಿಕಾಸ್ ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಬರಹಗಾರ್ತಿಯಾಗಿ ತನ್ನ ವ್ಯಾಪ್ತಿ ವಿಸ್ತರಿಸಿಕೊಂಡಿರುವ ಕಂಗನಾಗೂ ಈ ಬಗ್ಗೆ ಹೆಮ್ಮೆ ಇದೆ. ವಿಶೇಷವಾಗಿ ತನ್ನ ಪಾತ್ರಕ್ಕೆ ತಾನೇ ಬರೆದ ಮಾತುಗಳು ತೆರೆ ಮೇಲೆ ಸಹಜವಾಗಿ ಮೂಡಿಬಂದಿದೆ ಎನ್ನುತ್ತಾರೆ ಕಂಗನಾ.

ಸಿನಿಮಾ ಸ್ಕ್ರಿಪ್ಟ್ ಬರೆಯುವುದನ್ನು ಕಲಿಯುವ ಸಲುವಾಗಿ ಇತ್ತೀಚೆಗಷ್ಟೇ ಕಂಗನಾ ಯೂರೋಪಿಗೆ ಹೋಗಿದ್ದ ಸಂಗತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು.


ಹಾಗೇನೆ, ಕ್ಯಾಮೆರಾ ಮುಂದೆ ಒಂದು ಸಾಲಿನ ಡೈಲಾಗ್ ಹೇಳಲು ಹತ್ತಾರು ಟೇಕ್‌ಗಳನ್ನು ತೆಗೆದುಕೊಂಡು ಸೈಕಲ್ ಹೊಡೆಯುವ ನಮ್ಮ ಕನ್ನಡದ ಖ್ಯಾತ ಗ್ಲಾಮರ್ ಗೊಂಬೆಗಳು ಬರಹಗಾರ್ತಿ ಕಂಗನಾಳಿಂದ ಕಲಿಯಬೇಕಾದ್ದು ಬಹಳಷ್ಟಿದೆಯಲ್ಲವೇ?

ಅಪಾಲಜಿ ಪ್ಲೀಸ್



"ಕನ್ನಡ ಚಿತ್ರರಂಗ ದರಿದ್ರ ಸ್ಥಿತಿ ತಲುಪಿದೆ" ಎಂದು ಹೇಳುವ ಮೂಲಕ ಪ್ರೊ. ಜಿ.ಕೆ.ಗೋವಿಂದ ರಾವ್ ಹೊಸದೊಂದು ವಿವಾದ ಸೃಷ್ಟಿಸಿದ್ದಾರೆ. ಈ ನಿಟ್ಟಿನಲ್ಲಿ ಕ್ಷಮೆ ಕೇಳಬೇಕೆಂದು ಪಟ್ಟು ಹಿಡಿದಿರುವ ನಿರ್ಮಾಪಕ ಕೆ.ಮಂಜು "ಗೋವಿಂದ ರಾವ್ ರಂಗಭೂಮಿಯ ವ್ಯಕ್ತಿ. ತಾವೊಬ್ಬ ಬುದ್ಧಿಜೀವಿಯೆಂದು ಬಿಂಬಿಸಿಕೊಳ್ಳುವ ಬಯಕೆ ಅವರಿಗೆ. ಕನ್ನಡ ಚಿತ್ರರಂಗದ ಬಗ್ಗೆ ಇಂತಹ ಹೇಳಿಕೆ ನೀಡುವುದು ಎಷ್ಟು ಸರಿ? ಅವರ ಹೇಳಿಕೆ ಪ್ರಕಾರ ಎಲ್ಲ ಕನ್ನಡ ಚಿತ್ರಗಳೂ ದರಿದ್ರ ಮಟ್ಟದ ಚಿತ್ರಗಳು ಎಂಬ ಅರ್ಥ ಬರುತ್ತದೆಯಾದ್ದರಿಂದ ಕೂಡಲೇ ಗೋವಿಂದ ರಾವ್ ತಮ್ಮ ಹೇಳಿಕೆಯನ್ನು ವಾಪಾಸ್ ಪಡೆದು ಚಿತ್ರರಂಗದವರಲ್ಲಿ ಕ್ಷಮೆ ಕೇಳಬೇಕು" ಎಂದಿದ್ದಾರೆ.

ಇಷ್ಟಕ್ಕೂ ಗೋವಿಂದ ರಾವ್ ನೀಡಿರುವ ಹೇಳಿಕೆಯನ್ನು ಪರಾಮರ್ಶಿಸಿದಾಗ ಎಷ್ಟು ಸರಿಯೆನಿಸಿದರೆ, ಮತ್ತಷ್ಟು ಕೇವಲ ಮೇಲ್ನೋಟದ ಗಟಿಕೆ ... ಇತ್ತೀಚಿನ ದಿನಗಳಲ್ಲಿ ಎಗ್ಗಿಲ್ಲದೇ ಯಾವುದೇ ... ನಿರ್ಮಾಣವಾಗುತ್ತಿರುವ ಕನ್ನಡ ಚಿತ್ರಗಳ ಪೈಕಿ ಬೆರಳೆಣಿಕೆಯಷ್ಟು ಚಿತ್ರಗಳನ್ನು ಹೊರತುಪಡಿಸಿದರೆ ಉಳಿದ ಬಹುತೇಕ ಚಿತ್ರಗಳ ಗುಣಮಟ್ಟ ಹೇಳಿಕೊಳ್ಳುವಂಥದ್ದೇನೂ ಅಲ್ಲ. ಎಷ್ಟೋ ಕನ್ನಡ ಚಿತ್ರಗಳನ್ನು 'ನಮ್ಮ ಕನ್ನಡ ಚಿತ್ರಗಳು' ಎಂದು ಎದೆತಟ್ಟಿ ಹೇಳಿಕೊಳ್ಳುವ ನೈತಿಕ ಧೈರ್ಯ ಕನ್ನಡಿಗರಿಗೆ ಇರುವುದಿಲ್ಲ. ಇಂತಹ ಅಪಾಯದ ಸ್ಥಿತಿಯಲ್ಲಿರುವ ಚಿತ್ರರಂಗದ ಕೊರತೆಯನ್ನು ತುಂಬುವಲ್ಲಿ 'ಜಟ... ತಲ್ಲಣ'ದಂಥ ಚಿತ್ರಗಳು ಪ್ರಾಮಾಣಿಕವಾಗಿ ಪ್ರಯತ್ನಿಸುವುದು ಹೆಗ್ಗಳಿಕೆ. ಇನ್ನಾದರೂ ಕನ್ನಡ ಚಿತ್ರರಂಗ ನಿರುದ್ಯೋಗಿಗಳ ತುಂಬಿಕೊಳ್ಳುವ ಕಾರ್ಖಾನೆಯಾಗದೆ ಕ್ರಿಯಾಶೀಲತೆ, ವೃತ್ತಿಪರತೆಗೆ ಒತ್ತುಕೊಡುವ ಸೃಜನಶೀಲ ಕ್ಷೇತ್ರವಾಗಿ ಬೆಳೆಯಲಿ ಎಂಬುದು ನಮ್ಮ ಆಶಯ. ಆಗ ಗೋವಿಂದ ರಾವ್ ತರಹದವರು ಕನ್ನಡ ಚಿತ್ರರಂಗದ ಬಗ್ಗೆ ಲಘುವಾಗಿ ಹೇಳಿಕೆ ನೀಡುವುದನ್ನು ತಪ್ಪಿಸಬಹುದು. ಈ ನಿಟ್ಟಿನಲ್ಲಿ ಕಳ...



ಚಿತ್ರಗಳ ನಿಯಂತ್ರಣಕ್ಕೆ ಕೆ.ಮಂಜು ತರಹದವರು ಆದಷ್ಟು ಬೇಗ ಸೂಕ್ತ ಪರಿಹಾರವನ್ನು ಹುಡುಕಿಕೊಟ್ಟು ಕನ್ನಡ ಚಿತ್ರರಂಗವನ್ನು ಕಾಪಾಡುವಂತಾಗಲಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com